ನಕಲಿ ನೋಟು ಚಲಾವಣೆಗೆ ಸಂಬಂಧಿಸಿದಂತೆ (ಚಿಕ್ಕೋಡಿ) ದಾಖಲಾಗಿದ್ದ ಪ್ರಕರಣದಲ್ಲಿ ಏಳನೇ ಅಪರಾಧಿಗೆ ಶಿಕ್ಷೆಯಾಗಿದೆ.

ಅಪರಾಧಿ ಶರೀಫ್ ಉಲ್ಲಾ ಬಾಂಗ್ಲಾದೇಶದ ಗಡಿಭಾಗದಿಂದ ಭಾರತದ ಇತರೆ ಭಾಗಗಳಿಗೆ 41 ನಕಲಿ ನೋಟು ಚಲಾವಣೆ ಮಾಡಲು ಇತರೆ ಆರು ಅಪರಾಧಿಗಳ ಜತೆಗೆ ಸೇರಿಕೊಂಡು ಸಂಚು ರೂಪಿಸಿದ್ದ. ಪಶ್ಚಿಮ ಬಂಗಾಳದಲ್ಲಿ ನಕಲಿ ನೋಟು ಚಲಾವಣೆ ಮಾಡುವ ಉದ್ದೇಶದಿಂದ ಸಂವಹನ ಸಾಧಿಸಲು ನಕಲಿ ದಾಖಲೆ ಸಲ್ಲಿಸಿ ಸಿಮ್ ಕಾರ್ಡ್ ಪಡೆದಿದ್ದ. ಇದು ತನಿಖೆಯ ವೇಳೆ ದೃಢಪಟ್ಟಿತ್ತು ಎಂದು ಎನ್‌ಐಎ ಹೇಳಿದೆ.

ದೇಶದ ಆರ್ಥಿಕ ವ್ಯವಸ್ಥೆ ಅಸ್ಥಿರತೆಗೊಳಿಸುವ ಪ್ರಯತ್ನ ಮಾಡಿದ್ದ ಎಂಬುದು ತನಿಖೆಯಿಂದ ಗೊತ್ತಾಗಿದೆ.

ಅಲ್ಲದೇ ಆರು ಮಂದಿ ಅಪರಾಧಿಗಳಿಗೆ ನಕಲಿ ನೋಟು ಪೂರೈಸಿದ ಇಬ್ಬರು ಬಾಂಗ್ಲಾದೇಶಿ ಪ್ರಜೆಗಳ ವಿರುದ್ಧವೂ ತನಿಖೆ ಮುಂದುವರಿದಿದೆ. ಈ ಪ್ರಕರಣದಲ್ಲಿ ಮೂರು ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ

ಉಪ ಪ್ರಧಾನ ವ್ಯವಸ್ಥಾಪಕರು–3 ರವರ ಕಛೇರಿ, ಬೆಂಘತ್ಯಾನಿನಿ,
1ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು–560 052.

ಸಂ: ಉಪ್ರವ್ಯ–3/ಬೆಂಘತ್ಯಾನಿನಿ/ಟೆಂಡ್–3/ಪಿಪಿಪಿ/2024–25 ದಿನಾಂಕ:31.08.2024

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಜಿಒಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

1. ಬೆಂಗಳೂರು ಘನ ತ್ಯಾಜ್ಯ ನಿರ್ವಹಣೆ ನಿಯಮಿತವು ಕಂಪನಿಯು ಕಂಪನಿಗಳ ಕಾಯಿದೆ, 2013 ರ ಪ್ರಕಾರ ರಚನೆಯಾಗಿದ್ದು, ನಿರ್ಮಾಣ ಮತ್ತು ಕೆಡವುವ ತ್ಯಾಜ್ಯ ಸೇರಿದಂತೆ ವಿವಿಧ ರೀತಿಯ ತ್ಯಾಜ್ಯವನ್ನು ನಿರ್ವಹಿಸಲು ಬಿಬಿಎಂಪಿ ಸೇರಿದಂತೆ ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯೊಳಗೆ ವ್ಯವಹಾರವನ್ನು ನಿರ್ವಹಿಸುವ ಜವಾಬ್ದಾರಿಯನ್ನು ಹೊಂದಿದೆ.
2. ಈ ನಿಟ್ಟಿನಲ್ಲಿ, ತ್ಯಾಜ್ಯವನ್ನು ನಿರ್ಮಿಸಲು ಮತ್ತು ಕೆಡವಲು ಸಮಗ್ರ ನಿರ್ವಹಣಾ ಯೋಜನೆಯನ್ನು ಸಿದ್ಧಪಡಿಸಲಾಗಿದೆ ಮತ್ತು PPP ಮಾದರಿಯಲ್ಲಿ ತೆಗೆದುಕೊಳ್ಳಲು ಯೋಜಿಸಲಾಗಿದೆ. ಈ ಯೋಜನೆಯನ್ನು ಪಿಪಿಪಿ ಕ್ರಮದಲ್ಲಿ ಕೈಗೊಳ್ಳಲು ಸರ್ಕಾರವು ಅನುಮೋದನೆ ನೀಡಿದೆ.
3. ಉಪ ಪ್ರಧಾನ ವ್ಯವಸ್ಥಾಪಕರು–3, ಬೆಂಗಳೂರು ಘನ ತ್ಯಾಜ್ಯ ನಿರ್ವಹಣಾ ನಿಯಮಿತ, ವ್ಯವಸ್ಥಾಪಕ ನಿರ್ದೇಶಕರು BSWML, ಬೆಂಗಳೂರು ಇವರ ಪರವಾಗಿ, ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಕೆಲಸಗಳಿಗಾಗಿ ಅರ್ಹ ಬಿಡ್‌ದಾರರಿಂದ ಬಿಡ್‌ಗಳನ್ನು ಆಹ್ವಾನಿಸುತ್ತಾರೆ. ಬಿಡ್ಡುದಾರರು ಕರ್ನಾಟಕ ಸರ್ಕಾರದ KPP ಪೋರ್ಟಲ್ (ಅಂದರೆ https://kppp.karnataka.gov.in) ಮೂಲಕ ಕೆಳಗಿನ ಕೋಷ್ಟಕದಲ್ಲಿ ನೀಡಲಾದ ಕೆಲಸಗಳಿಗೆ ಬಿಡ್‌ಗಳನ್ನು ಸಲ್ಲಿಸಬಹುದು.
4. ಬಿಡ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ KPP ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಬಹುದು.
5. ಬಿಡ್ ದಾಖಲೆಗಳಲ್ಲಿ ಇತರ ವಿವರಗಳನ್ನು ನೋಡಬಹುದು.

ಡಿಸೈನ್ ಬಿಲ್ಡ್ ಫೈನಾನ್ಸ್ ಆಪರೇಟ್ ಮತ್ತು ಟ್ರಾನ್ಸ್‌ಫರ್ (ಡಿಬಿಎಫ್‌ಒಟಿ) ಮೇಲೆ 15 ವರ್ಷಗಳ ರಿಯಾಯಿತಿ ಅವಧಿಗೆ ಸಂಗ್ರಹಣೆ, ಪ್ರಾಥಮಿಕ ಸಾಗಣೆ, ಸಿ&ಡಿ ತ್ಯಾಜ್ಯವನ್ನು ಅಸ್ತಿತ್ವದಲ್ಲಿರುವ ಸಂಸ್ಕರಣಾ ಘಟಕಕ್ಕೆ ಮಾಧ್ಯಮಿಕ ಸಾಗಣೆಯ ಕೆಲಸಕ್ಕಾಗಿ 100% ರಿಯಾಯಿತಿ ಹೂಡಿಕೆಯೊಂದಿಗೆ (DBFOT) ನೇಮಕ ಮಾಡುವುದು.

ಕ್ರ. ಸಂ	ಕಾಮಗಾರಿಯ ವಿವರ	*ಅಂದಾಜು ಪಿಪಿಪಿ ಮಾದರಿಯಲ್ಲಿ ಬಿಡ್ಡಾರರಿಗೆ ಬಂಡವಾಳ ವೆಚ್ಚ (ಲಕ್ಷಗಳಲ್ಲಿ ರೂ.) GST ಹೊರತುಪಡಿಸಿ	ಇಎಂಡಿ (ರೂಗಳಲ್ಲಿ)	ಬಿಡ್ ಡಾಕ್ಯುಮೆಂಟ್ ವೆಚ್ಚ
1	**ಪ್ಯಾಕೇಜ್–1** (750 TPD ಸಂಗ್ರಹ ಪ್ರಾಥಮಿಕ ಸಾರಿಗೆ ಮತ್ತು ದ್ವಿತೀಯ ಸಾರಿಗೆ ಕಣ್ಣೂರಿನಲ್ಲಿರುವ ಅಸ್ತಿತ್ವದಲ್ಲಿರುವ ಸಂಸ್ಕರಣಾ ಘಟಕಕ್ಕೆ)	2016.00	**ರೂ. 1.00 ಲಕ್ಷಗಳು** ಇ–ಪಾವತಿಯ ಮೂಲಕ ಅಂದರೆ, ಆನ್‌ಲೈನ್/ ಆರ್‌ಟಿಜಿಎಸ್ / ಎನ್‌ಇಎಫ್‌ಟಿ / ಓಟಿಸಿ ಹಾಗೂ ಉಳಿದ **ರೂ. 9,08,000/–** ಬ್ಯಾಂಕ್ ಗ್ಯಾರಂಟಿ/ ಎಫ್‌ಡಿಆರ್ ಮೂಲಕ ರಾಷ್ಟ್ರೀಕೃತ/ ಶೆಡ್ಯೂಲ್ಡ್ ಬ್ಯಾಂಕ್‌ನಿಂದ ನೀಡುವುದು.	ಕೆಪಿಪಿ ಪೋರ್ಟಲ್ ಪ್ರಕಾರ
2	**ಪ್ಯಾಕೇಜ್–2** (500 TPD ಸಂಗ್ರಹ ಪ್ರಾಥಮಿಕ ಸಾರಿಗೆ ಮತ್ತು ದ್ವಿತೀಯ ಸಾರಿಗೆ ಚಿಕ್ಕಜಾಲದ'ಲ್ಲಿ ಅಸ್ತಿತ್ವದಲ್ಲಿರುವ ಸಂಸ್ಕರಣಾ ಘಟಕಕ್ಕೆ)	1380.00	**ರೂ. 1.00 ಲಕ್ಷಗಳು** ಇ–ಪಾವತಿಯ ಮೂಲಕ ಅಂದರೆ, ಆನ್‌ಲೈನ್/ ಆರ್‌ಟಿಜಿಎಸ್ / ಎನ್‌ಇಎಫ್‌ಟಿ / ಓಟಿಸಿ ಹಾಗೂ ಉಳಿದ **ರೂ. 5,90,000/–** ಬ್ಯಾಂಕ್ ಗ್ಯಾರಂಟಿ/ ಎಫ್‌ಡಿಆರ್ ಮೂಲಕ ರಾಷ್ಟ್ರೀಕೃತ/ ಶೆಡ್ಯೂಲ್ಡ್ ಬ್ಯಾಂಕ್‌ನಿಂದ ನೀಡುವುದು.	ಕೆಪಿಪಿ ಪೋರ್ಟಲ್ ಪ್ರಕಾರ
3	**ಪ್ಯಾಕೇಜ್–3** (500 TPD ಸಂಗ್ರಹ ಪ್ರಾಥಮಿಕ ಸಾರಿಗೆ ಮತ್ತುದ್ವಿತೀಯ ಸಾರಿಗೆ ಚಿಕ್ಕಜಾಲದ'ಲ್ಲಿ ಅಸ್ತಿತ್ವದಲ್ಲಿರುವ ಸಂಸ್ಕರಣಾ ಘಟಕಕ್ಕೆ)	1380.00	**ರೂ. 1.00 ಲಕ್ಷಗಳು** ಇ–ಪಾವತಿಯ ಮೂಲಕ ಅಂದರೆ, ಆನ್‌ಲೈನ್/ ಆರ್‌ಟಿಜಿಎಸ್ / ಎನ್‌ಇಎಫ್‌ಟಿ / ಓಟಿಸಿ ಹಾಗೂ ಉಳಿದ **ರೂ. 5,90,000/–** ಬ್ಯಾಂಕ್ ಗ್ಯಾರಂಟಿ/ ಎಫ್‌ಡಿಆರ್ ಮೂಲಕ ರಾಷ್ಟ್ರೀಕೃತ/ ಶೆಡ್ಯೂಲ್ಡ್ ಬ್ಯಾಂಕ್‌ನಿಂದ ನೀಡುವುದು.	ಕೆಪಿಪಿ ಪೋರ್ಟಲ್ ಪ್ರಕಾರ

* ಬಿಡ್ ಮಾನದಂಡಗಳನ್ನು ನಿರ್ಣಯಿಸಲು ತೋರಿಸಿರುವ ಬಂಡವಾಳ ವೆಚ್ಚವು ಅಂದಾಜು ಮತ್ತು ಸೂಚಕವಾಗಿದೆ ಮತ್ತು ಕ್ಯಾಪೆಕ್ಸ್ ಮತ್ತು ಒಪೆಕ್ಸ್ ಇನ್ವೆಸ್ಟ್‌ಮೆಂಟ್ ಬಿಡ್‌ದಾರರದಾಗಿದೆ. ಹಣಕಾಸಿನ ಬಿಡ್‌ಗಳನ್ನು ನಿರ್ಣಯಿಸಲು ಬಿಡ್ಡಿಂಗ್ ನಿಯತಾಂಕವು RFP ಡಾಕ್ಯುಮೆಂಟ್‌ನ ಪ್ರಕಾರ ಟಿಪ್ಪಿಂಗ್ ಶುಲ್ಕ ಮಾತ್ರವಾಗಿರುತ್ತದೆ.

ಟೆಂಡರ್ ವಿವರ: 1. KPP ಪೋರ್ಟಲ್‌ನಲ್ಲಿ ಬಿಡ್ ಡಾಕ್ಯುಮೆಂಟ್ ಅನ್ನು ಅಪ್‌ಲೋಡ್ ಮಾಡಿದ **ದಿನಾಂಕ: 05.09.2024.** 2. ಬಿಡ್ ಪೂರ್ವ ಸಭೆಯ **ದಿನಾಂಕ: 17.09.2024 ರಂದು 15:00 ಗಂಟೆಗೆ** ಮುಖ್ಯ ಇಂಜಿನಿಯರ್ ಮತ್ತು ಮುಖ್ಯ ಜನರಲ್ ಮ್ಯಾನೇಜರ್ (ಟೆಕ್), BSWML, UNI ಬಿಲ್ಡಿಂಗ್, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು – 560052 ಕಚೇರಿಯಲ್ಲಿ, 3. KPP ಪೋರ್ಟಲ್‌ನಲ್ಲಿ ಬಿಡ್‌ಗಳನ್ನು ಸಲ್ಲಿಸುವ ಕೊನೆಯ **ದಿನಾಂಕ: 26.09.2024 16:00 ಗಂಟೆಯವರೆಗೆ.** 4. KPP ಪೋರ್ಟಲ್‌ನಲ್ಲಿ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:27.09.2024 16:30 ಗಂಟೆಯ ನಂತರ.**

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–3, ಬೆಂಘತ್ಯಾನಿನಿ

ವಾಸಾಸಂಇ/ವಾಪ್ರ/1783/2024–25



ಪ್ರಶಸ್ತಿ ಪ್ರದಾನ.. ಶಿವಮೊಗ್ಗದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಶಿವಮೊಗ್ಗದ ಕರ್ನಾಟಕ ಸಂಘದ ವತಿಯಿಂದ ಜೀವಮಾನ ಸಾಧನೆಗಾಗಿ ಸಾಹಿತಿಗಳಾದ ಪ್ರೊ.ಮಾಲತಿ ಪಟ್ಟಣಶೆಟ್ಟಿ ಅವರಿಗೆ ದ.ರಾ.ಬೇಂದ್ರೆ ಕಾವ್ಯ ಪ್ರಶಸ್ತಿ ಹಾಗೂ ಎಸ್.ದಿವಾಕರ ಅವರಿಗೆ ಪ್ರೊ.ತೀ.ನಂ.ಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಯಿತು. ‘ಸುಧಾ’ ವಾರಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕರಾದ ಚ.ಹ.ರಘುನಾಥ ಮತ್ತು ಲೇಖಕಿ ಪ್ರಜ್ಞಾ ಮತ್ತಿಹಳ್ಳಿ ಅಭಿನಂದನಾ ನುಡಿಗಳನ್ನಾಡಿದರು. ಕರ್ನಾಟಕ ಸಂಘದ ಅಧ್ಯಕ್ಷ ಎಂ.ಎನ್.ಸುಂದರರಾಜ್, ಕಾರ್ಯದರ್ಶಿ ಪ್ರೊ. ಎಂ.ಆಶಾಲತಾ, ಪದಾಧಿಕಾರಿಗಳಾದ ಡಾ.ನಾಗಮಣಿ, ಮಾನಸಾ ಶಿವರಾಮಕೃಷ್ಣ, ಡಾ.ಗುರುದತ್ತ, ಎಸ್.ಎಸ್.ವಾಗೀಶ್, ಎಸ್.ವೈ.ವಿನಯ್, ವ್ಯವಸ್ಥಾಪಕ ದಿನೇಶ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

‘ತತ್ವ ಪದ, ಭಜನೆಗಳ ಅಧ್ಯಯನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭಾರತೀಯ ಭಾಷಾ ಚಳವಳಿಯ ವಿವಿಧ ಹಂತಗಳೊಂದಿಗೆ ಕರ್ನಾಟಕದ ಭಕ್ತಿ ಚಳವಳಿಯನ್ನು ಹೋಲಿಸಿ, ತೌಲನಿಕ ಅಧ್ಯಯನ ನಡೆಸಬೇಕು’ ಎಂಬುದು ಸೇರಿದಂತೆ ವಿವಿಧ ಅಭಿಪ್ರಾಯಗಳು ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಹಮ್ಮಿಕೊಂಡಿದ್ದ ಸಮಾಲೋಚನಾ ಸಭೆಯಲ್ಲಿ ವ್ಯಕ್ತವಾಯಿತು.

ಕೇಂದ್ರವು ‘ಕನಕದಾಸ ಮತ್ತು ತತ್ವಪದ ಅಧ್ಯಯನ–ಮುನ್ನೋಟ’ ಎಂಬ ಶೀರ್ಷಿಕೆಯಡಿ ನಗರದಲ್ಲಿ ಶನಿವಾರ ಹಮ್ಮಿಕೊಂಡ ಈ ಸಭೆಯಲ್ಲಿ ಮುಂದಿನ ದಿನಗಳಲ್ಲಿ ಕೈಗೊಳ್ಳಬಹುದಾದ ಸಂಶೋಧನೆ ಮತ್ತು ಅಧ್ಯಯನದ ರೂಪುರೇಷೆಗಳ ಬಗ್ಗೆ ಅಭಿಪ್ರಾಯಗಳನ್ನು ಸಂಗ್ರಹಿಸಿತು.

ಸಾಹಿತ್ಯ ಕ್ಷೇತ್ರದ ಪ್ರಮುಖರಾದ ಕೆ. ಮರುಳಸಿದ್ದಪ್ಪ, ಎಸ್.ಜಿ. ಸಿದ್ದರಾಮಯ್ಯ, ಮನು ಬಳಿಗಾರ್, ಎಲ್.ಎನ್. ಮುಕುಂದರಾಜ್, ರಮೇಶ್, ಎಸ್.ಆರ್. ವಿಜಯಶಂಕರ್, ಆರ್.ಜಿ. ಹಳ್ಳಿ ನಾಗರಾಜ್, ಎಚ್.ಎಲ್. ಪುಷ್ಪಾ, ಎ.ಆರ್. ಗೋವಿಂದಸ್ವಾಮಿ, ಕೆ.ಆರ್. ಸಂಧ್ಯಾರೆಡ್ಡಿ, ಜಾಣಗೆರೆ ವೆಂಕಟರಾಮಯ್ಯ, ಕೆ.ವೈ. ನಾರಾಯಣಸ್ವಾಮಿ, ಬಿ.ಎಂ. ಹನೀಫ್, ಬಂಜಗೆರೆ ಜಯಪ್ರಕಾಶ್, ಡಾ. ವಸುಂಧರಾ ಭೂಪತಿ, ಲಕ್ಷ್ಮಣ ಕೊಡಸೆ ಸೇರಿ 50ಕ್ಕೂ ಅಧಿಕ ಮಂದಿ ವಿಷಯ ತಜ್ಞರು ಸಭೆಯಲ್ಲಿ ಪಾಲ್ಗೊಂಡಿದ್ದರು.

‘ಕರ್ನಾಟಕದಲ್ಲಿರುವ ಸಹ ಭಾಷೆಗಳಲ್ಲಿನ ತತ್ವಪದಗಳು, ಭಜನೆಗಳು ಹಾಗೂ ಅಲಕ್ಷ್ಯಕ್ಕೊಳಗಾದ ಕೀರ್ತನಕಾರರ ಪದಗಳನ್ನು ಸಂಗ್ರಹಿಸಿ, ಅವುಗಳನ್ನು ಅಧ್ಯಯನಕ್ಕೆ ಒಳಪಡಿಸಬೇಕು. ಜನಸಾಮಾನ್ಯರಿಗೆ, ವಿದ್ಯಾರ್ಥಿಗಳಿಗೆ, ಪರಭಾಷಿಕರಿಗೆ ತತ್ವಪದಗಳನ್ನು, ಕೀರ್ತನೆಗಳನ್ನು ತಲುಪಿಸಬೇಕಾದರೆ ಅದಕ್ಕೆ ಸಂಗೀತದ ಸಹಚರ್ಯದ ಜತೆಗೆ ನಾಟಕ, ಬಯಲಾಟ, ತಾಳಮದ್ದಲೆ ಮುಂತಾದ ಕಲಾ ಪ್ರಕಾರಗಳನ್ನು ಬಳಸಿಕೊಳ್ಳಬೇಕು’ ಎಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದರು.

‘ಅಧ್ಯಯನ ಕೇಂದ್ರವು ರೂಪಿಸಿರುವ ಕನಕದಾಸ ಸಾಹಿತ್ಯವೂ ಸೇರಿದಂತೆ ತತ್ವಪದ ಸಾಹಿತ್ಯ, ಕೀರ್ತನ ಸಾಹಿತ್ಯ ಮತ್ತು ಭಕ್ತಿ ಚಳವಳಿಯ ವಿಷಯವನ್ನು ಒಳಗೊಂಡು ಸಾಹಿತ್ಯ ಸಂಗ್ರಹ, ಸಮೀಕ್ಷೆ, ಅಧ್ಯಯನ, ಪ್ರಕಟಣೆ, ಪ್ರದರ್ಶನ ಮತ್ತು ಪ್ರಸಾರ ಕಾರ್ಯಗಳನ್ನು ನಡೆಸಬೇಕು’ ಎಂದು ತಿಳಿಸಿದರು.

ಕೇಂದ್ರದ ಅಧ್ಯಕ್ಷ ಕಾ.ತ. ಚಿಕ್ಕಣ್ಣ, ‘ಸ್ಥಳೀಯ ಸಾಂಸ್ಕೃತಿಕ ಹಿರಿಮೆಯನ್ನು ಪರಿಚಯಿಸುವ ನೆಲೆನಿಷ್ಠ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡು, ಕಾರ್ಯಕ್ರಮ ನಡೆಸಲಾಗುವುದು. ಆ ಮೂಲಕ ಕನ್ನಡದ ಸಾಂಸ್ಕೃತಿಕ ಅಸ್ಮಿತೆಯನ್ನು ಉಳಿಸಿ, ಬೆಳೆಸುವುದರ ಕಡೆಗೆ ಗಮನ ಹರಿಸಲಾಗುವುದು’ ಎಂದು ಹೇಳಿದರು.

ಸದಸ್ಯ ಸಂಚಾಲಕ ಎಚ್. ದಂಡಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕಿ ಬನಶಂಕರಿ ಅಂಗಡಿ ಇದ್ದರು.



ಸಮಾಲೋಚನಾ ಸಭೆಯಲ್ಲಿ ಕೆ. ಮರುಳಸಿದ್ದಪ್ಪ ಮಾತನಾಡಿದರು. ಬನಶಂಕರಿ ಅಂಗಡಿ, ಕಾ.ತ. ಚಿಕ್ಕಣ್ಣ, ಎಚ್ ದಂಡಪ್ಪ ಉಪಸ್ಥಿತರಿದ್ದರು

ದರೋಡೆಕೋರನ ಮೇಲೆ ಗುಂಡು ಹಾರಿಸಿ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ದಾಬಸ್‌ಪೇಟೆ ಬಳಿಯ ಹೆದ್ದಾರಿಯಲ್ಲಿ ಬಂಧನಕ್ಕೆ ತೆರಳಿದ್ದ ವೇಳೆ ಪೊಲೀಸರ ಮೇಲೆಯೇ ಹಲ್ಲೆಗೆ ಯತ್ನಿಸಿದ ದರೋಡೆಕೋರನ ಮೇಲೆ ಗುಂಡು ಹಾರಿಸಿ ಬಂಧಿಸಲಾಗಿದೆ.

ಜಯಂತ್ ಅಲಿಯಾಸ್ ಬ್ಯಾಟರಿ ಜಯಂತ್ ಬಂಧಿತ ರೌಡಿಶೀಟರ್. ಆರೋಪಿ ಮಾಗಡಿ ತಾಲ್ಲೂಕಿನ ಆಲೂರು ನಿವಾಸಿ.

ಹೆದ್ದಾರಿಯ ಕಂಬಾಳು ಗ್ರಾಮದ ಬಳಿ ದಾಬಸ್‌ಪೇಟೆ ಠಾಣೆಯ ಇನ್‌ಸ್ಪೆಕ್ಟರ್ ಆರೋಪಿಯನ್ನು ಬಂಧಿಸಿದ್ದಾರೆ. ದಾಬಸ್‌ಪೇಟೆ ಆಸ್ಪತ್ರೆಯಲ್ಲಿ ಆರೋಪಿಗೆ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

‘ಆರೋಪಿ ಬೈಕ್‌ನಲ್ಲಿ ಬಂದು ಹೆದ್ದಾರಿಯಲ್ಲಿ ದರೋಡೆ ನಡೆಸುತ್ತಿದ್ದ. ಈತನ ವಿರುದ್ಧ ಕೊಲೆ, ಕೊಲೆ ಯತ್ನ, ದರೋಡೆ ಸೇರಿ 56 ಪ್ರಕರಣಗಳು ದಾಖಲಾಗಿದ್ದವು. ಶನಿವಾರ ಸಂಜೆ ದರೋಡೆಗೆ ಹೊಂಚು ಹಾಕುತ್ತಿದ್ದ. ಖಚಿತ ಮಾಹಿತಿ ಆಧರಿಸಿ, ದಾಬಸ್‌ಪೇಟೆ ಠಾಣೆ ಪೊಲೀಸರು ಕಾರ್ಯಾಚರಣೆಗೆ ಮುಂದಾಗಿದ್ದರು. ಬಂಧಿಸಲು ತೆರಳಿದ್ದ ವೇಳೆ ಹೆಡ್ ಕಾನ್‌ಸ್ಟೆಬಲ್ ಇಮ್ರಾನ್ ಪಾಷಾ ಅವರ ಮೇಲೆ ಹಲ್ಲೆ ಮಾಡಿ ಪರಾರಿಯಾಗಲು ಯತ್ನಿಸಿದ್ದ. ಈ ವೇಳೆ ಇನ್‌ಸ್ಪೆಕ್ಟರ್ ಬಿ.ರಾಜು ಅವರು ಆರೋಪಿಯ ಕಾಲಿಗೆ ಗುಂಡು ಹಾರಿಸಿದರು’ ಎಂದು ಮೂಲಗಳು ತಿಳಿಸಿವೆ.

2019ರಲ್ಲೂ ಆರೋಪಿ ಮೇಲೆ ಗುಂಡು ಹಾರಿಸಿ ಬಂಧಿಸಲಾಗಿತ್ತು. ಜಾಮೀನಿನ ಮೇಲೆ ಬಿಡುಗಡೆಯಾಗಿ ಮತ್ತೆ ದರೋಡೆ ನಡೆಸುತ್ತಿದ್ದ ಎಂದು ಪೊಲೀಸರು ಹೇಳಿದರು.

ನಗರದಲ್ಲಿ ಇಂದು

ಭಕ್ತಿ ಭಾವಾನಂದ: ಅಖಂಡ ಭಜನೆ, ಆಯೋಜನೆ ಮತ್ತು ಸ್ಥಳ: ಸತ್ಯಸಾಯಿ ಆಶ್ರಮ, ಸಾಯಿ ರಮೇಶ್ ಹಾಲ್, ಕಾಡುಗೋಡಿ, ಬೆಳಿಗ್ಗೆ 9

ಧ್ಯಾನ ನಾಯಕರ ಮೂರನೇ ಪ್ರಾದೇಶಿಕ ಸಮ್ಮೇಳನ: ಭಾಗವಹಿಸುವವರು: ಡಿ.ಆರ್. ಕಾರ್ತಿಕೇಯನ್, ಇಟ್ಟಿಕರನ್ ವಟ್ಟನ, ಚಂದ್ರ ಪುಲಮರಸೆಟ್ಟಿ, ಲ್ವಾರೆನ್ಸ್ ಗುಹಾರ್ಡ್ ಜಾಲಿ, ಜಗದೀಶ್ ಎಸ್., ಅನುರಾಧಾ ಸತ್ಯಶೀಲನ್, ಸಾಯಿಕೃಪಾ ಸಾಗರ್, ಸವಿತಾ ರೆಡ್ಡಿ, ಶಿವರಾಮಪ್ಪ ಬಿ., ಸುರೇಶ ಕಲಬುರಗಿ, ಆಯೋಜನೆ: ಬುದ್ಧ ಸಿಇಒ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಬೆಳಿಗ್ಗೆ 9

ಭಾವಗೀತೆಯ ಹಕ್ಕಿಗೆ ಕಾವ್ಯ ನಮನ: ಚಾಲನೆ: ಸತೀಶ್ ಕೆಂಭಾವಿಮಠ, ಅತಿಥಿಗಳು: ಎಂ.ಎಸ್. ಪ್ರಸಾದ್, ಅಜಯ್ ಸಾರಥಿ, ವಿಜಯಲಕ್ಷ್ಮಿ ಸತ್ಯಮೂರ್ತಿ, ಅಧ್ಯಕ್ಷತೆ: ಕಿಕ್ಕೇರಿ ಕೃಷ್ಣಮೂರ್ತಿ, ಆಯೋಜನೆ: ಮಂದಗೆರೆ ಕಲೆ–ಸಾಹಿತ್ಯ ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ಬಾಪು ವಿದ್ಯಾಸಂಸ್ಥೆ, ಯಶವಂತಪುರ, ಬೆಳಿಗ್ಗೆ 10

ವೀರಲೋಕ ಬುಕ್ಸ್ ಪುಸ್ತಕದಂಗಡಿಯ ಉದ್ಘಾಟನೆ: ನಾಗತಿಹಳ್ಳಿ ಚಂದ್ರಶೇಖರ್, ಆಯೋಜನೆ: ವೀರಲೋಕ ಬುಕ್ಸ್, ಸ್ಥಳ: ವೀರಲೋಕ ಬುಕ್ಸ್, ನಂ. 207, ಎರಡನೇ ಮಹಡಿ, ಮೂರನೇ ಅಡ್ಡರಸ್ತೆ, ಚಾಮರಾಜಪೇಟೆ, ಬೆಳಿಗ್ಗೆ 10



ನಾಗತಿಹಳ್ಳಿ ಚಂದ್ರಶೇಖರ್

ಸಾ.ಕೃ. ರಾಮಚಂದ್ರರಾವ್ ಅವರ ‘ತಿರುಪತಿ ತಿಮ್ಮಪ್ಪ’ ಪುಸ್ತಕ ಬಿಡುಗಡೆ: ಸಾನ್ನಿಧ್ಯ: ಶಿವರುದ್ರ ಸ್ವಾಮೀಜಿ, ಪುಸ್ತಕ ಬಿಡುಗಡೆ: ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಅತಿಥಿ: ಟಿ.ವಿ. ವೆಂಕಟಾಚಲಶಾಸ್ತ್ರಿ, ಪುಸ್ತಕ ಪರಿಚಯ: ಶೆಲ್ವಪಿಳ್ಳೈ ಅಯ್ಯಂಗಾರ್, ಆಯೋಜನೆ: ಅಭಿಜ್ಞಾನ, ಸ್ಥಳ: ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಬಸವನಗುಡಿ ರಸ್ತೆ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

ಹರ್ಷ ರಘುರಾಮ್ ಅವರ ‘ನನ್ನ ತಂಗಿ ಈಡಾ’, ಕಾರ್ತಿಕ್ ಆರ್. ಅವರ ‘ಸತ್ತವರ ಸೊಲ್ಲು’ ಅನುವಾದಿತ ಪುಸ್ತಕಗಳ ಬಿಡುಗಡೆ: ಅತಿಥಿಗಳು: ಬಂಜಗೆರೆ ಜಯಪ್ರಕಾಶ್, ಜ.ನಾ. ತೇಜಶ್ರೀ, ಅಶುತೋಷ್ ಭಾರದ್ವಾಜ್, ಮಿಶಯಲ್ ಹೈನ್ಸ್, ಆಯೋಜನೆ: ಛಂದ ಪುಸ್ತಕ, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30



ಬಂಜಗೆರೆ ಜಯಪ್ರಕಾಶ್

ಗುರುವಂದನಾ–2024: ಅತಿಥಿಗಳು: ಹಾಕೈ ಅಕ್ಷಯ್ ಮಚೇಂದ್ರ, ಎಸ್.ಎನ್. ಓಂಕಾರ್, ಅಧ್ಯಕ್ಷತೆ: ನಾಗೇಂದ್ರ ಎನ್.ಪಿ., ಗುರುದತ್ತ ಬಿ.ಎಸ್., ಆಯೋಜನೆ: ಕರ್ನಾಟಕ ಪೌರರಕ್ಷಣಾ ದಳ, ಸ್ಥಳ: ವಾಸವಿ ವಿದ್ಯಾನಿಕೇತನ ಪ್ರೌಢಶಾಲೆ, ವಾಣಿವಿಲಾಸ ರಸ್ತೆ, ವಿಶ್ವೇಶ್ವರಪುರ, ಬೆಳಿಗ್ಗೆ 10.30

ತಿಂಗಳ ಕಾರ್ಯಕ್ರಮ: ‘ಪಂಪಭಾರತ–ಒಂದು ಅವಲೋಕನ’ ಉಪನ್ಯಾಸ: ಎಲ್.ಎನ್. ಮುಕುಂದರಾಜ್, ಆಯೋಜನೆ: ಪರಸ್ಪರ ಎಂಟನೇ ಮೈಲಿ, ಸ್ಥಳ: ಭೂಮಿಕಾ ಸೇವಾ ಫೌಂಡೇಶನ್, ಅಸೆಂಟ್ ಕಾಲೇಜಿನ ಎದುರು, ಹೆಸರಘಟ್ಟ ರಸ್ತೆ, ಬೆಳಿಗ್ಗೆ 11

ಬ್ರಹ್ಮಶ್ರೀ ನಾರಾಯಣ ಗುರುಗಳ 170ನೇ ಜಯಂತಿ, ಪ್ರತಿಭಾ ಪುರಸ್ಕಾರ, ವಿದ್ಯಾರ್ಥಿವೇತನ ವಿತರಣಾ ಸಮಾರಂಭ: ಉದ್ಘಾಟನೆ: ಯು.ಟಿ. ಖಾದರ್, ಅಧ್ಯಕ್ಷತೆ: ಎಂ. ಸತೀಶ್ ರೆಡ್ಡಿ, ಕೃಷ್ಣ ಬೈರೇಗೌಡ, ಅತಿಥಿಗಳು: ತಿಮ್ಮೇಗೌಡ, ರವಿ ಕುಮಾರ್, ಸನ್ಮಾನಿತರು: ಸದಾಶಿವ ಉಳ್ಳಾಲ್, ಬೇಬಿ ಕುಂದರ್, ದಿಶಿತಾ ಆರ್., ಪ್ರಮೀತ್ ಪಿ., ಆಯೋಜನೆ: ಬಿಲ್ಲವ ಅಸೋಸಿಯೇಷನ್, ಸ್ಥಳ: ದೇವಕಿ ಆನಂದ ಸುವರ್ಣ ಕನ್ವೆನ್ಷನ್ ಹಾಲ್, ಬಿಲ್ಲವ ಭವನ, ಬನ್ನೇರುಘಟ್ಟ ರಸ್ತೆ, ಹುಳಿಮಾವು, ಬೆಳಿಗ್ಗೆ 11

‘ಕೃಷ್ಣ ಶ್ರೀಕೃಷ್ಣ’ ಯಕ್ಷಗಾನ ಪ್ರದರ್ಶನ: ಹಿಮ್ಮೇಳದ ಭಾಗವತರು: ಸುಬ್ರಾಯ ಹೆಬ್ಬಾರ್, ಮದ್ದಲೆ: ಸಂಪತ್ ಆಚಾರ್ಯ, ಚಂಡೆ: ಮನೋಜ್ ಆಚಾರ್, ಮುಮ್ಮೇಳ: ರಾಧಾಕೃಷ್ಣ ಉರಾಳ, ಶಶಿಕಾಂತ್ ಆಚಾರ್ಯ ಹಾಲಾಡಿ, ದೇವರಾಜ ಕರಬ, ಕೃಷ್ಣ ಶಾಸ್ತ್ರಿ, ಸಂಪತ್ ಕನ್ನಂತ, ಶೃತಿ ಕನ್ನಂತ, ಪೂಜಾ ಆಚಾರ್ಯ, ಅದಿತಿ ಉರಾಳ, ಪಿ.ಕೆ. ಜೈನ್, ನಿತ್ಯಾಗೌಡ, ಆಯೋಜನೆ: ಕಲಾ ಕದಂಬ ಆರ್ಟ್ ಸೆಂಟರ್, ತಿತ್ತಿತ್ತೈ ಯಕ್ಷ ಬಳಗ ಕುಡೇರಿ, ಯಕ್ಷ ಫೌಂಡೇಶನ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 4



ಸುಧಾಮೂರ್ತಿ ಅವರ 300ನೇ ಶೀರ್ಷಿಕೆ ಗ್ರ್ಯಾಂಡ್‌ಪಾಜ್ ಬ್ಯಾಗ್ ಆಫ್ ಸ್ಟೋರೀಸ್‌’ಗೆ ಚಾಲನೆ: ಸಂವಾದ: ಸುಧಾಮೂರ್ತಿ, ಟ್ವಿಂಕಲ್ ಖನ್ನಾ, ದೀಪಾ ರಾವ್ ಆಚಾರ್ಯ, ಸ್ಥಳ: ರಿಟ್ಜ್ ಕಾರ್ಲ್‌ಟನ್, ಮಧ್ಯಾಹ್ನ 3.30

‘ನಮನ–2024’ ಒಡಿಸ್ಸಿ ನೃತ್ಯ ಪ್ರದರ್ಶನ: ಉದ್ಘಾಟನೆ: ಗಂಗಾಧರ್ ಪ್ರಧಾನ್, ನೃತ್ಯಾಂತರ ಡಾನ್ಸ್ ತಂಡ, ಸುತ್ರಾ ಡಾನ್ಸ್ ಥಿಯೇಟರ್, ಒಡಿಸ್ಸಿ ಡಾನ್ಸ್ ಸೆಂಟರ್, ಆಯೋಜನೆ: ನೃತ್ಯಾಂತರ, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 5

‘ತ್ರೀ ಟೇಲ್ಸ್ ವಿತ್ ಎ ಟ್ವಿಸ್ಟ್’ ಸಂಗೀತ ಕಾರ್ಯಕ್ರಮ: ಆ್ಯಶ್ಲಿ ವಿಲಿಯ್‌ಂ ಜೋಸೆಫ್, ರಾಜೇಂದ್ರ ಬಾಬು, ಶರತ್ ಬಚ್ಚೇಗೌಡ, ಸ್ಥಳ: ದಿ ಗ್ರೀನ್ ಸ್ಕೂಲ್ ಬೆಂಗಳೂರು, ವೈಟ್‌ಫೀಲ್ಡ್, ಸಂಜೆ 5.30

ಸಂಸ ರಂಗಪತ್ರಿಕೆ ಸಂಚಿಕೆ ಬಿಡುಗಡೆ ಹಾಗೂ ಮಾತುಕತೆ: ಸಂಚಿಕೆ ಬಿಡುಗಡೆ: ರಾಜಪ್ಪ ದಳವಾಯಿ, ಅತಿಥಿಗಳು: ಆರ್.ಜಿ. ಹಳ್ಳಿ ನಾಗರಾಜ್, ಪ್ರದೀಪ್ ಮಾಲ್ಗುಡಿ, ಅಣ್ಣಾಜಿ ಕೃಷ್ಣಾರೆಡ್ಡಿ, ಆಯೋಜನೆ: ಸಂಸ ರಂಗಪತ್ರಿಕೆ, ಸಂಸ ಥಿಯೇಟರ್, ಸ್ಥಳ: ಕೆಆರ್‌ಪಿ ಇಂಟಿಮೇಟ್ ಥಿಯೇಟರ್, ಹಲಗೆವಡೇರಹಳ್ಳಿ, ರಾಜರಾಜೇಶ್ವರಿನಗರ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ)ಕಳುಹಿಸಿ.
nagaradalli_indu@prajavani.co.in

ಜೂ.ಎನ್‌ಟಿಆರ್, ರಿಷಬ್ ಉಡುಪಿ ಕೃಷ್ಣಮಠಕ್ಕೆ ಭೇಟಿ

ಪ್ರಜಾವಾಣಿ ವಾರ್ತೆ

ಉಡುಪಿ: ತೆಲುಗು ನಟ ಜೂನಿಯರ್ ಎನ್‌ಟಿಆರ್, ನಟ ರಿಷಬ್ ಶೆಟ್ಟಿ ಹಾಗೂ ನಿರ್ದೇಶಕ ಪ್ರಶಾಂತ್ ನೀಲ್ ಅವರು ಶನಿವಾರ ಉಡುಪಿಯ ಶ್ರೀಕೃಷ್ಣ ಮಠಕ್ಕೆ ಭೇಟಿ ನೀಡಿದರು.

ದೇಗುಲಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದ ಬಳಿಕ ಪರ್ಯಾಯ ಪುತ್ತಿಗೆ ಮಠದ ಸುಗುಣೇಂದ್ರ ತೀರ್ಥ ಸ್ವಾಮೀಜಿ ಅವರನ್ನು ಭೇಟಿಯಾಗಿ ಆಶೀರ್ವಾದ ಪಡೆದರು.

ಈ ವೇಳೆ ಮಾಧ್ಯಮದ ರೊಂದಿಗೆ ಮಾತನಾಡಿದ ಜೂನಿಯರ್ ಎನ್‌ಟಿಆರ್, 'ಕೃಷ್ಣಮಠಕ್ಕೆ ಭೇಟಿ ನೀಡಬೇಕೆಂಬ ಆಸೆ ಅಮ್ಮನಿಗೆ 40 ವರ್ಷಗಳಿಂದ ಇತ್ತು. ಮಗನನ್ನು ಕರೆದುಕೊಂಡು ಬರಬೇಕೆಂಬ ಅವರ ಆಸೆ ಇಂದು ಈಡೇರಿದೆ' ಎಂದರು.

'ರಿಷಬ್ ಅವರು ದೇವರು ಕೊಟ್ಟ ಗೆಳೆಯ. ಅವರೊಂದಿಗೆ ಇಲ್ಲಿಗೆ ಭೇಟಿ ನೀಡುವ ಅವಕಾಶ ಸಿಕ್ಕಿದ್ದು ಖುಷಿಕೊಟ್ಟಿದೆ. ನನ್ನ ಅಮ್ಮನ ಹಿರಿಯರು ಮೂಲತಃ ಕುಂದಾಪುರದವರು. ಕೃಷ್ಣಮಠಕ್ಕೆ ಭೇಟಿಕೊಟ್ಟು ಮನಃಶಾಂತಿ ಸಿಕ್ಕಿದೆ' ಎಂದೂ ಹೇಳಿದರು

ರಿಷಬ್ ಶೆಟ್ಟಿ ಮಾತನಾಡಿ, 'ಅಷ್ಟಮಿ ವೇಳೆ ಶ್ರೀಕೃಷ್ಣ ಮಠಕ್ಕೆ ಭೇಟಿ ನೀಡಲು ಸಾಧ್ಯವಾಗಿಲ್ಲ. ಜೂನಿಯರ್ ಎನ್‌ಟಿಆರ್ ಆಂಧ್ರಪ್ರದೇಶದವರು ಎಂಬ ಭಾವನೆ ಬರಲ್ಲ. ಅವರ ಜೊತೆ ಅಣ್ಣ ತಮ್ಮನ ಸಂಬಂಧ ಅನುಭವ ವಾಗುತ್ತಿದೆ' ಎಂದರು.

ಜೂನಿಯರ್ ಎನ್‌ಟಿಆರ್ ಮತ್ತು ರಿಷಬ್ ಶೆಟ್ಟಿ ಅವರ ಕುಟುಂಬ ಸದಸ್ಯರೂ ಜೊತೆಗಿದ್ದರು.



ತೆಲುಗು ಚಿತ್ರನಟ ಜೂನಿಯರ್ ಎನ್‌ಟಿಆರ್ ಹಾಗೂ ಕನ್ನಡ ಚಿತ್ರನಟ ರಿಷಬ್ ಶೆಟ್ಟಿ ಅವರು ಕುಟುಂಬ ಸಮೇತರಾಗಿ ಉಡುಪಿಯ ಕೃಷ್ಣಮಠಕ್ಕೆ ಶನಿವಾರ ಭೇಟಿ ನೀಡಿ ದೇವರ ದರ್ಶನ ಪಡೆದರು

ಪಿ.ಜಿ ಕೇಂದ್ರ: ಆಡಳಿತಾಧಿಕಾರಿ ಅಮಾನತು

ಪ್ರಜಾವಾಣಿ ವಾರ್ತೆ

ಧಾರವಾಡ: ಮೈಸೂರಿನ ರೈಲ್ವೆ ಕೋ-ಆಪರೇಟಿವ್ ಬ್ಯಾಂಕ್‌ನ ವಿವಿಧ ಹುದ್ದೆಗಳ ನೇಮಕಾತಿ ಪರೀಕ್ಷೆಯಲ್ಲಿ ಲೋಪಗಳು ನಡೆದಿವೆ ಎಂದು ಅಭ್ಯರ್ಥಿಯೊಬ್ಬರು ದಾಖಲಿಸಿದ ದೂರಿಗೆ ಸಂಬಂಧಿಸಿದಂತೆ ಉತ್ತರ ಕನ್ನಡ ಜಿಲ್ಲೆಯ ಕಾರವಾರದ ಸ್ನಾತಕೋತ್ತರ ಕೇಂದ್ರದ ಆಡಳಿತಾಧಿಕಾರಿ ಪ್ರೊ. ಜಿ.ಎಲ್.ರಾಥೋಡ್ ಅವರನ್ನು ಅಮಾನತು ಮಾಡಲಾಗಿದೆ.

'ಪರೀಕ್ಷೆಯಲ್ಲಿ ಅಕ್ರಮ ನಡೆದಿದೆ ಎಂದು ಬೆಂಗಳೂರಿನ ಜೆನ್ನಾಂಟ ಅವರು ನೀಡಿದ ದೂರಿನ ಮೇರೆಗೆ ಪ್ರೊ.ಜಿ.ಎಲ್. ರಾಥೋಡ್ ಅವರಿಗೆ ನೋಟಿಸ್ ನೀಡಲಾಗಿತ್ತು. ಅವರು ನೀಡಿದ ವಿವರಣೆ ಸಮಂಜಸವಾಗಿರದ ಕಾರಣ ಅಮಾನತು ಮಾಡಲಾಗಿದೆ' ಎಂದು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಕೆ.ಬಿ. ಗುಡಸಿ 'ಪ್ರಜಾವಾಣಿ'ಗೆ ತಿಳಿಸಿದರು.

ದೂರಿಗೆ ಸಂಬಂಧಿಸಿದಂತೆ ಪರಿಶೀಲನೆಗೆ ವಿಶ್ವವಿದ್ಯಾಲಯವು ಸತ್ಯಶೋಧನಾ ಸಮಿತಿ ರಚಿಸಿದೆ. ಸಮಿತಿಯು ಆಗಸ್ಟ್ 23ರಂದು ಕಾರವಾರ ಸ್ನಾತಕೋತ್ತರ ಕೇಂದ್ರಕ್ಕೆ ಭೇಟಿ ನೀಡಿತ್ತು. ಪ್ರೊ.ರಾಥೋಡ್ ಅವರು ಸಮಿತಿಗೆ ದಾಖಲೆ ಸಲ್ಲಿಸಲು 15 ದಿನ ಕಾಲಾವಕಾಶ ಕೋರಿದ್ದಾರೆ.

ಏನಿದು ಪ್ರಕರಣ?: ಪ್ರೊ.ಜಿ.ಎಲ್. ರಾಥೋಡ್ ವಿರುದ್ಧ ಜೆನ್ನಾಂಟ ಅವರು ಕುಲಪತಿಗೆ ದೂರು ನೀಡಿದ್ದರು. ಉತ್ತರ ಪತ್ರಿಕೆಯ (ಒಎಂಆರ್) ನಕಲು ಪ್ರತಿಯನ್ನು ಅಭ್ಯರ್ಥಿಗಳಿಗೆ ನೀಡಿಲ್ಲ. ಕೀ ಉತ್ತರಗಳಿಗೆ ಆಕ್ಷೇಪಣೆ ಆಹ್ವಾನಿಸಿಲ್ಲ. ಪರೀಕ್ಷೆಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿದ್ದರು.

ಅಪರೂಪದ 'ರಾಮ ಸೆಣಬು' ಪತ್ತೆ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಜಗತ್ತಿನಲ್ಲಿ ಎಲ್ಲೂ ಕಾಣದ 'ಕ್ರೊಟಲೇರಿಯಾ ಸಂಡೂರೆನ್ಸಿಸ್' ಎಂಬ ಗಿಡ ಸಂಡೂರಿನ ರಾಮಗಡ ಶ್ರೇಣಿಯಲ್ಲಿ ಪತ್ತೆಯಾಗಿದೆ.

'ಸಮುದ್ರಮಟ್ಟದಿಂದ ಒಂದು ಸಾವಿರ ಮೀಟರ್ ಎತ್ತರದಲ್ಲಿ ಮಾತ್ರ ಬೆಳೆಯುವ ಈ ಗಿಡಗಳನ್ನು 1912ರಲ್ಲಿ ಜೆ.ಎಸ್.ಗ್ಯಾಂಬಲ್ ಎಂಬ ಯೂರೋಪಿನ ಸಸ್ಯಶಾಸ್ತ್ರಜ್ಞ ರಾಮಗಡದ ಪರ್ವತದಲ್ಲಿ ಮೊದಲ ಬಾರಿಗೆ ಪತ್ತೆ ಮಾಡಿದ್ದರು. ನಂತರ ಈ ಸಸ್ಯವನ್ನು ಇತರೆ ಸೆಣಬು ಸಸ್ಯಗಳೊಂದಿಗೆ ಹೋಲಿಸಿದಾಗ ಈ ಪ್ರಬೇಧ ರಾಮಗಡ ಹಾಗೂ ಸುತ್ತಮುತ್ತಲಿನ ಪ್ರದೇಶಕ್ಕೆ ಮಾತ್ರ ಸೀಮಿತ ಎಂದು ನಿರ್ಧರಿಸಿ ಇದಕ್ಕೆ 'ಕ್ರೊಟಲೇರಿಯಾ ಸಂಡೂರೆನ್ಸಿಸ್' ಎಂದು ನಾಮಕರಣ ಮಾಡಿದ್ದರು. 1980ರಲ್ಲಿ ಜೈನ್ ಎಂಬ ಭಾರತೀಯ ಸಸ್ಯಶಾಸ್ತ್ರಜ್ಞ ಇದರ ಅಧ್ಯಯನ ಮಾಡಿದ್ದರು' ಎಂದು ವನ್ಯಜೀವಿ ಸಂಶೋಧಕ ಸಮದ್ ಕೊಟ್ಟೂರು ತಿಳಿಸಿದ್ದಾರೆ.



ರಾಮ ಸೆಣಬು ಗಿಡ ಅದರ ಹೂ ಮತ್ತು ಕಾಯಿ

'ಹೊಳಪಿನ ಸೂಕ್ಷ್ಮ ರೋಮಗಳಿಂದ ಕೂಡಿದ ಎಲೆ, ಹಳದಿ ಹೂವು, ಬುರುಡೆಯಂತೆ ಇರುವ ಕಾಯಿ, ಹುರುಳಿಯಾಕಾರದ ಬೀಜಗಳನ್ನು ಬಿಡುವ ಈ ಸಸ್ಯ ಸೆಣಬಿನ ವರ್ಗಕ್ಕೆ ಸೇರಿದೆ. ಇದಕ್ಕೆ ಕನ್ನಡದಲ್ಲಿ ಹೆಸರಿಲ್ಲ. ರಾಮಗಡದಲ್ಲಿ ಮಾತ್ರ ಸಿಗುವ ಕಾರಣ ಇದನ್ನು 'ರಾಮ ಸೆಣಬು' ಎಂದು ನಾಮಕರಣ ಮಾಡಿರುವೆ' ಎಂದು ಅವರು ತಿಳಿಸಿದ್ದಾರೆ.

'ಈ ಸಸ್ಯದ ಬೀಜಗಳನ್ನು ಕೊಪ್ಪಳ ಜಿಲ್ಲೆಯ ಕನಕಗಿರಿ ಕಾಡಿನಲ್ಲಿ ಬೆಳೆಸುವ ಪ್ರಯೋಗ ಮಾಡಿದರೂ ಅಲ್ಲಿ ಬೆಳೆಯಲಿಲ್ಲ. ಇದಕ್ಕೆ ಸಮುದ್ರ ಮಟ್ಟದಿಂದ ಎತ್ತರ ಹಾಗೂ ಕಬ್ಬಿಣ-ಮ್ಯಾಂಗನೀಸ್ ಅದಿರು ಇರುವ ಮಣ್ಣು ಕಾರಣ ಇರಬಹುದು. ಹೀಗಾಗಿ ಈ ಸಸ್ಯ ಕೇವಲ ರಾಮಗಡದಲ್ಲಿ ಮಾತ್ರ ಕಾಣಸಿಗುತ್ತದೆ. ಆದರೆ ಗಣಿಗಾರಿಕೆಯಿಂದ ಈ ಅಪರೂಪದ ಸಸ್ಯದ ಅಸ್ತಿತ್ವಕ್ಕೆ ಧಕ್ಕೆ ಎದುರಾಗಿದೆ. ಆದ್ದರಿಂದ ಈ ಸಸ್ಯದ ಕುರಿತ ಅಧ್ಯಯನ ಅಗತ್ಯವಿದೆ' ಎಂದು ಅವರು ಹೇಳಿದ್ದಾರೆ.

ನಾಡ ಬಂದೂಕಿನಿಂದ ಗುಂಡು ಸಿಡಿದು ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ

ಕುಮಟಾ (ಉತ್ತರ ಕನ್ನಡ ಜಿಲ್ಲೆ): ಕೋಳಿ ಶೆಡ್‌ಗೆ ಬಂದ ಹೆಬ್ಬಾವನ್ನು ಹೊಡೆಯಲು ಬಳಸಿದ ನಾಡ ಬಂದೂಕಿನಿಂದ ಸಿಡಿದ ಗುಂಡು ವಾಪಸ್ ತಗುಲಿ ವ್ಯಕ್ತಿಯೊಬ್ಬರು ಮೃತಪಟ್ಟ ಘಟನೆ ತಾಲ್ಲೂಕಿನ ಅಳಕೋಡ ಗ್ರಾಮ ಪಂಚಾಯಿತಿಯ ಕತಗಾಲ ಸಮೀಪದ ಮೂಡಗೋಳಿಯಲ್ಲಿ ಶನಿವಾರ ನಡೆದಿದೆ.

'ಪ್ರಥಮ ನಾಯ್ಕ (32) ಮೃತರು. ಪರವಾನಗಿ ಇಲ್ಲದೇ ನಾಡ ಬಂದೂಕು ತಯಾರಿಸಿ, ಬಳಸುತ್ತಿದ್ದರು. ಘಟನೆ ಸಂಬಂಧ ನಾಡಬಂದೂಕು ಅಡಗಿಸಿ ಇಡುವುದರ ಜೊತೆಗೆ ಅವರ ದೇಹಕ್ಕೆ ಸಿಡಿದ ಗುಂಡನ್ನು ಹಳ್ಳಕ್ಕೆ ಎಸೆದ ಆರೋಪದ ಮೇಲೆ ಮೃತರ ಸಹೋದರಿ ರಂಜನಾ ಗೋಕಲೆ (35), ಮೂಡಗೋಳಿ ಗ್ರಾಮಸ್ಥ ರಾಮ ದೇಶಭಂಡಾರಿ (51) ಎಂಬುವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಕುಮಟಾ ಠಾಣೆ ಪೊಲೀಸರು ತಿಳಿಸಿದ್ದಾರೆ.

'ಪ್ರಥಮ್ ದೇಹಕ್ಕೆ ಸಿಡಿದಿದ್ದ ಗುಂಡು, ಅನಧಿಕೃತ ನಾಡ ಬಂದೂಕನ್ನು ಅಡಗಿಸಲು ರಂಜನಾ, ರಾಮ ದೇಶಭಂಡಾರಿ ಪ್ರಯತ್ನಿಸಿದ್ದರು. ಇವರಿಬ್ಬರ ಜತೆಗೆ ಅನಧಿಕೃತವಾಗಿ ನಾಡಬಂದೂಕು ತಯಾರಿಸಿದ್ದ ಮೃತ ವ್ಯಕ್ತಿಯ ವಿರುದ್ಧವೂ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಸತ್ಯೇಶ್ ಬೆಳ್ಳೂರ್‌ಗೆ ಡಿವಿಜಿ ಪ್ರಶಸ್ತಿ

ಮೈಸೂರು: ಇಲ್ಲಿನ ಡಿವಿಜಿ ಬಳಗ ಪ್ರತಿಷ್ಠಾನದಿಂದ ನೀಡುವ 2024ನೇ ಸಾಲಿನ 'ಡಿವಿಜಿ ಪ್ರಶಸ್ತಿ'ಗೆ ಕವಿ, ಚಿಂತಕ ಸತ್ಯೇಶ್ ಎನ್. ಬೆಳ್ಳೂರ್ ಅವರನ್ನು ಆಯ್ಕೆ ಮಾಡಲಾಗಿದೆ.



ಸತ್ಯೇಶ್ ಎನ್. ಬೆಳ್ಳೂರ್

ಪ್ರಶಸ್ತಿಯು ₹15 ಸಾವಿರ ನಗದು ಒಳಗೊಂಡಿದೆ. ಸೆ.15ರಂದು ಬೆಳಿಗ್ಗೆ 10.30ಕ್ಕೆ ನಗರದ ಕೃಷ್ಣ ಮೂರ್ತಿಪುರಂನ ಶಾರದಾವಿಲಾಸ ಶತಮಾನೋತ್ಸವ ಸಭಾಂಗಣದಲ್ಲಿ ನಡೆಯುವ ಸಮಾರಂಭದಲ್ಲಿ ಪ್ರದಾನ ಮಾಡಲಾಗುವುದು. ಶಿಕ್ಷಣ ತಜ್ಞ ಗುರುರಾಜ ಕರಜಗಿ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳುವರು. ಕವಿ ಕೆ.ಸಿ. ಶಿವಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರತಿಷ್ಠಾನದ ಸಂಚಾಲಕ ಸಿ.ಕನಕರಾಜು ತಿಳಿಸಿದ್ದಾರೆ.

ಶಾ. ಬಾಲುರಾವ್ ಪ್ರಶಸ್ತಿಗೆ ಕೃತಿಗಳ ಆಹ್ವಾನ

ಬೆಂಗಳೂರು: ಬಿ.ಎಂ.ಶ್ರೀ ಪ್ರತಿಷ್ಠಾನವು 'ಶಾ. ಬಾಲುರಾವ್ ಅನುವಾದ ಪ್ರಶಸ್ತಿ' ಮತ್ತು 'ಶಾ. ಬಾಲುರಾವ್ ಯುವ ಬರಹಗಾರ ಪ್ರಶಸ್ತಿ'ಗೆ ಕೃತಿಗಳನ್ನು ಆಹ್ವಾನಿಸಿದೆ.

ಅನುವಾದ ಪ್ರಶಸ್ತಿಗೆ 2023ನೇ ಸಾಲಿನಲ್ಲಿ ಮೊದಲ ಮುದ್ರಣವಾಗಿ ಪ್ರಕಟಗೊಂಡ, ಅನ್ಯ ಭಾಷೆಯಿಂದ ಕನ್ನಡಕ್ಕೆ ಅನುವಾದವಾಗಿರುವ ಕೃತಿಗಳನ್ನು ಆಹ್ವಾನಿಸಲಾಗಿದೆ. ಯುವ ಬರಹಗಾರ ಪ್ರಶಸ್ತಿಗೆ 35 ವರ್ಷದೊಳಗಿನವರು 2023ನೇ ಸಾಲಿನಲ್ಲಿ ಮೊದಲ ಮುದ್ರಣವಾಗಿ ಪ್ರಕಟವಾಗಿರುವ ಸಾಹಿತ್ಯದ ಯಾವುದೇ ಪ್ರಕಾರದ ಕೃತಿಗಳನ್ನು ಸಲ್ಲಿಸಬಹುದು. ಪ್ರಶಸ್ತಿಗಳು ತಲಾ ₹25 ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿವೆ.

ಲೇಖಕರು ಸ್ವವಿವರದ ಜತೆಗೆ ಪ್ರಕಟಗೊಂಡ ಕೃತಿಯ ಮೂರು ಪ್ರತಿಗಳನ್ನು ಗೌರವ ಕಾರ್ಯದರ್ಶಿ, ಬಿ.ಎಂ.ಶ್ರೀ. ಪ್ರತಿಷ್ಠಾನ, 3ನೇ ಮುಖ್ಯರಸ್ತೆ, ನರಸಿಂಹರಾಜ ಕಾಲೊನಿ, ಬೆಂಗಳೂರು-560004 ಈ ವಿಳಾಸಕ್ಕೆ ಸೆಪ್ಟೆಂಬರ್ 25ರೊಳಗೆ ಕಳುಹಿಸಬೇಕು ಎಂದು ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ತಿಳಿಸಿದ್ದಾರೆ.

ಸಂಪರ್ಕಕ್ಕೆ: 99728 12127

ದೂರು ನಿರ್ಲಕ್ಷ್ಯ: ಪ್ರಾಚಾರ್ಯ ಅಮಾನತು

ಕಲಬುರಗಿ: ದೈಹಿಕ ಶಿಕ್ಷಣ ಶಿಕ್ಷಕ ಪ್ರಭುಗೌಡ ಮಾಡಗಿ ಲೈಂಗಿಕ ದೌರ್ಜನ್ಯ ನಡೆಸಿರುವ ಬಗ್ಗೆ ವಿದ್ಯಾರ್ಥಿನಿಯರು ದೂರು ನೀಡಿದರೂ ಯಾವುದೇ ಕ್ರಮ ಕೈಗೊಳ್ಳದ ಆರೋಪದಡಿ ಜೇವರ್ಗಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಚಾರ್ಯ ಶಿವಪುತ್ರಪ್ಪ ಅವರನ್ನು ಸೇವೆಯಿಂದ ಅಮಾನತುಗೊಳಿಸಲಾಗಿದೆ.

ಘಟನೆಗೆ ಸಂಬಂಧಿಸಿದಂತೆ ಆರೋಪಿ ಪ್ರಭುಗೌಡ ಮಾಡಗಿಯನ್ನು ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ಅವರು ಈಗಾಗಲೇ ಅಮಾನತುಗೊಳಿಸಿದ್ದಾರೆ.

ಪ್ರಭುಗೌಡ ಅವರು ಲೈಂಗಿಕ ದೌರ್ಜನ್ಯ ನಡೆಸಿದ ಕುರಿತು ವಿದ್ಯಾರ್ಥಿನಿಯರು ಪ್ರಾಚಾರ್ಯರಿಗೆ ಲಿಖಿತವಾಗಿ ದೂರು ನೀಡಿದ್ದರು. ಇಷ್ಟಾಗಿಯೂ ಶಿಕ್ಷಕನ ವಿರುದ್ಧ ಕ್ರಮ ಕೈಗೊಳ್ಳಲು ಪ್ರಾಚಾರ್ಯರು ಹಿಂದೇಟು ಹಾಕಿದ್ದರು. ಇದನ್ನು ಗಂಭೀರವಾಗಿ ಪರಿಗಣಿಸಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕಾರ್ಯನಿರ್ವಾಹಕ ನಿರ್ದೇಶಕರು ಪ್ರಾಚಾರ್ಯರನ್ನು ಅಮಾನತು ಮಾಡಿದ್ದಾರೆ.

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ

ನಂ. 55, ರಿಸಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು-560020.
ದೂರವಾಣಿ: 23460085 / 8949 / 2436, ಫ್ಯಾಕ್ಸ್: 080-23567060, 23563506
ಇಮೇಲ್: kscb_blr@rediffmail.com, ksdb.ho@gmail.com
Website:http://ksdb.kar.nic.in

ಸಂಖ್ಯೆ: ಕಕೊಅ.ಮ/ಕಾ.ಪಾ.ಅ/ನಂ.1ನೇ.ವಿ/ಅ.ಟೆಂಡರ್-3/2024-25/430 ದಿನಾಂಕ: 30.08.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು ನಂ.1ನೇ ವಿಭಾಗ, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಬೆಂಗಳೂರು ರವರ ಕಛೇರಿಯಿಂದ **Repair of Electrical work at Abhaya complex (Meeting Hall, Basement car parking, Common Toilet etc)in KSDB Bangalore.** ಕಾಮಗಾರಿಗೆ ಮ್ಯಾನ್ಯುಯಲ್ ಟೆಂಡರ್ ಆಹ್ವಾನಿಸಲಾಗಿದ್ದು ಇಚ್ಛೆಯುಳ್ಳ ಗುತ್ತಿಗೆದಾರರು ಭಾಗವಹಿಸಬಹುದಾಗಿರುತ್ತದೆ.
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **10.09.2024 ಮಧ್ಯಾಹ್ನ 12.30 ಘಂಟೆಯವರೆಗೆ**, ಖಾಲಿ ಟೆಂಡರ್ ಫಾರಂಗಳನ್ನು ವಿತರಿಸುವ ದಿನಾಂಕ: **10.09.2024 ಸಂಜೆ 4.00 ಘಂಟೆಯಿಂದ** ದಿನಾಂಕ: **11.09.2024 ಮಧ್ಯಾಹ್ನ 3.00 ಘಂಟೆಯವರೆಗೆ**. ಭರ್ತಿ ಮಾಡಿದ ಟೆಂಡರ್‌ಗಳನ್ನು ಮೇಲಿನ ಕಛೇರಿಯಲ್ಲಿ ಸ್ವೀಕರಿಸುವ ದಿನಾಂಕ **11.09.2024 ಸಂಜೆ 4.00** ಗಂಟೆಯವರೆಗೆ ಅದೇ ದಿನ **ಸಂಜೆ 5.00 ಘಂಟೆಗೆ** ಟೆಂಡರ್ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಕಾರ್ಯಪಾಲಕ ಅಭಿಯಂತರರು **ನಂ. 1ನೇ ವಿಭಾಗ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಬೆಂಗಳೂರು** ರವರ ಕಛೇರಿ ವೇಳೆಯಲ್ಲಿ ಭೇಟಿ ಮಾಡತಕ್ಕದ್ದು.

DIPR/CP/YC/1744/2024-25
ಸಹಿ/- ಕಾರ್ಯಪಾಲಕ ಅಭಿಯಂತರರು
ನಂ. 1ನೇ ವಿಭಾಗ, ಕಕೊಅಮ, ಬೆಂಗಳೂರು

ಸಮಗ್ರ ಶಿಕ್ಷಣ - ಕರ್ನಾಟಕ

Skill India कौशल भारत-कुशल भारत

ರಾಜ್ಯ ಯೋಜನಾ ನಿರ್ದೇಶಕರ ಕಛೇರಿ,
ಹೊಸ ಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡ,
ನೃಪತುಂಗ ರಸ್ತೆ, ಕೆ.ಆರ್. ವೃತ್ತ, ಬೆಂಗಳೂರು-560001.

ಸಂಖ್ಯೆ: SSK/NSQF/Tender Paper Notification/04/2024-25 ದಿನಾಂಕ: 30.08.2024

ಎನ್.ಎಸ್.ಕ್ಯೂ.ಎಫ್ ಯೋಜನೆಯಡಿ ತರಬೇತುದಾರರು/ ವೃತ್ತಿ ಕೌಶಲ್ಯ ಸಂಯೋಜಕರನ್ನು ನಿಯೋಜಿಸಲು ಮರು ಟೆಂಡರ್ ಆಹ್ವಾನ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

Information Technology, Automobile, Beauty & Wellness, Retail, Apparels Made Ups & Home Furnishing and Electronics ಸೆಕ್ಟಾರ್‌ನ ಶಾಲೆಗಳಿಗೆ ತರಬೇತುದಾರರು ಹಾಗೂ ವೃತ್ತಿ ಕೌಶಲ್ಯ ಸಂಯೋಜಕರನ್ನು ನಿಯೋಜನೆ ಮಾಡಲು National Skill Development Corporation (NSDC)/Sector Skill Council (SSC) afflliliated Vocational Training Providers (VTP)ರವರಿಂದ ಟೆಂಡರ್ ಆಹ್ವಾನಿಸಲಾಗಿದೆ. ಆನ್‌ಲೈನ್ ಮುಖಾಂತರ ಅರ್ಜಿಯನ್ನು ಸಲ್ಲಿಸಲು ಕೊನೆಯ **ದಿನಾಂಕ:18.09.2024 ಸಂಜೆ 5.30 ಗಂಟೆಯಾಗಿರುತ್ತದೆ.** ಟೆಂಡರ್ ದಾಖಲೆಯನ್ನು **https://kppp.karnataka.gov.in/#/portal/searchTender/live** ಇಲ್ಲಿ ಪಡೆಯಬಹುದಾಗಿದೆ.

ವಾಸಾಸಂಇ/ವಾಪ್ರ/1773/2024-25
ಸಹಿ/-
ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ -ಕರ್ನಾಟಕ

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು-560001
ದೂರವಾಣಿ: 080-22215601, 22211246 ಫ್ಯಾಕ್ಸ್: 22215602

ಸಂಖ್ಯೆ:ಡಿವೈಇಎಸ್/ಎಸ್.ಎಂ.ಸಿ/ಟೆಂಡರ್/182/2022-23 ದಿನಾಂಕ: 27.08.2024

ಟೆಂಡರ್ ಪ್ರಕಟಣೆ - (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಉಪ ನಿರ್ದೇಶಕರು (ಆಡಳಿತ), ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ ನೃಪತುಂಗ ರಸ್ತೆ, ಬೆಂಗಳೂರು 560 001 ಕರ್ನಾಟಕ, ಭಾರತ, ಇವರು, ಕರ್ನಾಟಕ ರಾಜ್ಯದಲ್ಲಿರುವ ಬೆಂಗಳೂರಿನ ಶ್ರೀ ಕಂಠೀರವ ಕ್ರೀಡಾಂಗಣ ಮತ್ತು ಇತರೆ ಕೇಂದ್ರಗಳಿಗೆ ಭದ್ರತೆ, ಸ್ವಚ್ಛತೆ ಮತ್ತು ಇತರೆ ಸಿಬ್ಬಂದಿಯ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ಒದಗಿಸುವ ಸಂಬಂಧ ಗುತ್ತಿಗೆದಾರರನ್ನು ನೇಮಿಸಲು ಕೆಪಿಪಿ ಪೋರ್ಟಲ್ ಮೂಲಕ ಅರ್ಹ ಟೆಂಡರ್‌ದಾರರಿಂದ ಟೆಂಡರ್ ಅನ್ನು ಆಹ್ವಾನಿಸಿದೆ.
ಅಂದಾಜು ಮೊತ್ತ: ರೂ. 891.41 ಲಕ್ಷಗಳು, ಇಎಂಡಿ ಮೊತ್ತ: ರೂ. 13,37,112/-
ಆಸಕ್ತ ಟೆಂಡರ್‌ದಾರರು ಕೆಪಿಪಿ ಪೋರ್ಟಲ್ (**https://kppp.karnataka.gov.in**) ಮೂಲಕ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು.
ಬಿಡ್ ಸಲ್ಲಿಸಲು ಕೊನೆಯ **ದಿನಾಂಕ 12.09.2024 ಸಮಯ 16.00 ಗಂಟೆ**. ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 13.09.2024 ಸಮಯ 16.30 ಗಂಟೆ**. ಹಣಕಾಸು ಬಿಡ್ ತೆರೆಯುವ ದಿನಾಂಕ **ನಂತರ ತಿಳಿಸಲಾಗುವುದು.**
ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.

ಸಹಿ/- ಉಪ ನಿರ್ದೇಶಕರು (ಆಡಳಿತ),
ಟೆಂಡರ್ ಆಹ್ವಾನಿಸುವ ಪ್ರಾಧಿಕಾರ.
ವಾಸಾಸಂಇ/ವಾಪ್ರ/ಜಿಎ/1740/2024-25

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.6, ಸೋಮಗುದ್ದು ರಸ್ತೆ, ಚಳ್ಳಕೆರೆ.
ದೂ.ಸಂ: 08195-200307E.Mail I.D.: ubpee06@gmail.com

ಸಂಖ್ಯೆ: ಕಾಇಂ/ವಿಜನಿನಿ/ಭಮೇಯೋ/ವಿ-6/ಚಳ್ಳಕೆರೆ/ಟೆಂಡರ್ ಪ್ರಕಟಣೆ/ 2024-25/461 ದಿನಾಂಕ: 29.08.2024

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆ.ಪಿ.ಪಿ.ಪಿ. ಪೋರ್ಟಲ್ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ನಂ.148, ಎಂಬೆಸಿ ಸ್ಕ್ವೇರ್, ಇನ್‌ಫ್ಯಾಂಟರಿ ರೋಡ್, ಬೆಂಗಳೂರು-560001 ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಕೆಪಿಪಿಪಿ ಇ-ಪ್ರೊಕ್ಯೂರಮೆಂಟ್ ಪೋರ್ಟಲ್‌ನಲ್ಲಿ, ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.6, ಚಳ್ಳಕೆರೆ ಕಛೇರಿ ವ್ಯಾಪ್ತಿಯಡಿಯಲ್ಲಿ ಬರುವ ವಿಭಾಗ-ಉಪ ವಿಭಾಗ ಕಚೇರಿಗಳ ದುರಸ್ಥಿ (ಟೆಂಡರ್‌ಗಿಟ್ಟ ಮೊತ್ತ ರೂ. 83.03 ಲಕ್ಷಗಳು) ಹಾಗೂ ತೊರೆಬೀರನಹಳ್ಳಿ ಮತ್ತು ಬೆಳಗೆರೆ ನಡುವೆ ವೇದಾವತಿ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್ ಕಾಮಗಾರಿ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ ಸಮಾಲೋಚಕರ ಸೇವೆ ಪಡೆಯುವ ಕಾಮಗಾರಿಗಳಿಗೆ (ಟೆಂಡರ್‌ಗಿಟ್ಟ ಮೊತ್ತ ರೂ. 16.90 ಲಕ್ಷಗಳು) ಸಂಬಂಧಿಸಿದಂತೆ, ದ್ವಿ-ಲಕೋಟೆಪದ್ಧತಿ ಮೂಲಕ ಅರ್ಹ ಗುತ್ತಿಗೆದಾರರಿಂದ ಶೇಕಡವಾರು ದರಗಳ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, (VJNL/2024-25/WORK_INDENT-94 & 111) ಕೆ.ಪಿ.ಪಿ.ಪಿ. ಪೋರ್ಟಲ್ ಮೂಲಕ ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ: 06.09.2024 ಸಂಜೆ 5.00 ವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 09.09.2024ರ ಸಂಜೆ 4.00 ಗಂಟೆಯ ನಂತರ ಕಾರ್ಯಪಾಲಕ ಇಂಜಿನಿಯರ್‌ರವರ ಅಧ್ಯಕ್ಷತೆಯಲ್ಲಿ ವಿಭಾಗ ಕಛೇರಿಯಲ್ಲಿ ತೆರೆಯಲಾಗುವುದು ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ ಮತ್ತು ಅರ್ಹ ಗುತ್ತಿಗೆದಾರರು (www.kppp.karnataka.gov.in) ಅಂತರ್‌ಜಾಲದಿಂದ ಸಂಪೂರ್ಣ ವಿವರಗಳನ್ನು ಪಡೆದು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದೆ.

DIPR/CTA/KSMCA/ 238/2024-25
ಸಹಿ/ ಕಾರ್ಯಪಾಲಕ ಅಭಿಯಂತರರು,
ವಿಜನಿನಿ, ಭ.ಮೇ.ಯೋ. ವಿಭಾಗ ನಂ.06, ಚಳ್ಳಕೆರೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: ಮುಇಂವಿ/ಟಿಮತ್ತುಪಿ/ಅಇಂವಿ-2/ಇಇಟಿ12ಎನ್/ಕೆಸಿಒ-173/2024-25/3358-61 ದಿನಾಂಕ: 31.08.2024

ಸಂಕ್ಷಿಪ್ತ ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಈ ಕೆಳಕಂಡ ವಿಚಾರಣೆ ಸಂಖ್ಯೆಯ ಮೂಲಕ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ನಲ್ಲಿ ಬಿಡ್ ಅನ್ನು ಆಹ್ವಾನಿಸಿದೆ.

ವಿಚಾರಣೆ ಸಂಖ್ಯೆ ಮತ್ತು ವಿವರ
KPTCL/2024-25/IND0099
ಕವಿಪ್ರನಿನಿಯ ವಿಶೇಷಣೆಗಳಿಗೆ ಅನುಗುಣವಾಗಿ 4552 ಸಂಖ್ಯೆಯ **11kV Class 400** ಆಂಪ್ಸ್, ಡಬಲ್ ಬ್ರೇಕ್, **25kA, C-type wedge connector 2 hole paddle type GOS** ನ ವಿನ್ಯಾಸ, ಉತ್ಪಾದನೆ, ಪರೀಕ್ಷಿಸುವುದು ಮತ್ತು ಸರಬರಾಜು.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ-ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ **https://kptcl.karnataka.gov.in** ನ ಹೈಪರ್‌ಲಿಂಕ್ 'ಇ ಪ್ರೊಕ್ಯೂರ್‌ಮೆಂಟ್ ಕವಿಪ್ರನಿನಿ' ಅಥವಾ **https://kppp.karnataka.gov.in** ನಲ್ಲಿ ಲಾಗಿನ್ ಆಗಿ ದಿನಾಂಕ **03.09.2024 ರಂದು ಅಪರಾಹ್ನ 15.00 ಗಂಟೆ** ಅಥವಾ ನಂತರದಿಂದ ಪಡೆಯಬಹುದು. ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ **04.10.2024 ಅಪರಾಹ್ನ 15.00 ಗಂಟೆ.** ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಿದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ನಲ್ಲಿ ತಿಳಿಸಲಾಗುವುದು. ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ಬಿಡ್ದುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು/ಸೇರ್ಪಡೆಗಳನ್ನು ಗಮನಿಸತಕ್ಕದ್ದು.

ಸಹಿ /- ಮುಖ್ಯ ಇಂಜಿನಿಯರ್ (ವಿದ್ಯುತ್), ಟೆಂಡರಿಂಗ್ ಮತ್ತು ಪ್ರೊಕ್ಯೂರ್‌ಮೆಂಟ್, ಕವಿಪ್ರನಿನಿ, 3ನೇ ಮಹಡಿ, ಕಾವೇರಿ ಭವನ, ಬೆಂಗಳೂರು-560009. ಫೋನ್: 080-22274744.

ಕೃಷಿ ವಿಶ್ವವಿದ್ಯಾಲಯ, ಧಾರವಾಡ
ಆಸ್ತಿ ವಿಭಾಗ, ಕೃಷಿ ನಗರ,
ಧಾರವಾಡ - 580 005. ದೂರವಾಣಿ : 91-836-2214214,
ಇ-ಮೇಲ್ : estateofficer@rediffmail.com

ಸಂಖ್ಯೆ : EO/DB/TN/e-Proc.T-112/2024-25 ದಿನಾಂಕ : 14-08-2024

ಇ-ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ

ಕೃಷಿ ವಿಶ್ವವಿದ್ಯಾಲಯ ಧಾರವಾಡದ ವಿವಿಧ ಆವರಣಗಳಲ್ಲಿ ಸೇವೆಗಳಿಗಾಗಿ ಅರ್ಹ ಕಂಪನಿಗಳಿಂದ ಟೆಂಡರುಗಳನ್ನು ಅಹ್ವಾನಿಸಲಾಗಿದೆ. ಸದರಿ ಟೆಂಡರಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪದ್ಧತಿಯಂತೆ **https://kppp.karnataka.gov.in** ಆನ್‌ಲೈನ್ ಮುಖಾಂತರ ಸಲ್ಲಿಸತಕ್ಕದ್ದು.

ಟೆಂಡರ್ ವೇಳಾ ಪಟ್ಟಿ

1) ವಿಚಾರಣೆಗಳಿಗಾಗಿ ಕೊನೆಯ ದಿನಾಂಕ : 01-10-2024 ರ ಸಂಜೆ 4.00 ಗಂಟೆ, 2) ಟೆಂಡರ್ ಪೂರ್ವಭಾವಿ ಸಭೆ ನಡೆಯುವ ದಿನಾಂಕ ಹಾಗೂ ವೇಳೆ : 04-10-2024 ರ ಬೆಳಿಗ್ಗೆ 11.00 ಗಂಟೆಗೆ, 3) ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ : 08-10-2024 ರ ಸಂಜೆ 4.00 ಗಂಟೆಗೆ, 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ವೇಳೆ : 09-10-2024 ರ ಸಂಜೆ 4.15 ಗಂಟೆಗೆ, 5) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ವೇಳೆ : 10-10-2024 ರ ಸಂಜೆ 4.00 ಗಂಟೆಗೆ.

ಹೆಚ್ಚಿನ ವಿವರಗಳಿಗಾಗಿ ಕಚೇರಿ ಕೆಲಸದ ಸಮಯದಲ್ಲಿ ದೂರವಾಣಿ ಸಂಖ್ಯೆ 0836-2214214/332 ಸಂಪರ್ಕಿಸಬಹುದು. ಇ-ಪ್ರೊಕ್ಯೂರ್‌ಮೆಂಟ್ ನೋಂದಣೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 080-23010900.

ಸೂಚನೆ : ಟೆಂಡರ್‌ಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಇ-ಪ್ರೊಕ್ಯೂರಮೆಂಟ್ ವೇದಿಕೆಯಲ್ಲಿ ಪ್ರವಹಿಸುವ ತಿದ್ದುಪಡಿಗಳು / ಮಾರ್ಪಾಡುಗಳನ್ನು ಗುತ್ತಿಗೆದಾರರು ಗಮನಿಸಬೇಕು.

ಸಹಿ/- ಆಸ್ತಿ ಅಧಿಕಾರಿಗಳು,
ಕೃ.ವಿ.ವಿ., ಧಾರವಾಡ.
ಡಿಐಪಿಆರ್/ಧಾರವಾಡ/330/ಮಣಿಪಾಲ್/2024-25

ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ ಬಾಗಲಕೋಟೆ
ಕಾರ್ಯನಿರ್ವಾಹಕ ಇಂಜಿನೀಯರವರ ಕಾರ್ಯಾಲಯ,ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ ವಿಭಾಗ ನಂ: 02, ಬಾಗಲಕೋಟೆ-587102.ದೂರವಾಣಿ ಸಂಖ್ಯೆ: 08354-297054
Office of the Executive Engineer,Bagalkote Town Development Authority,Division No: 02, Bagalkote-587102.E-mail: eebtda2@gmail.com

ಟೆಂಡರ್ ಪ್ರಕಟಣೆ ಸಂಖ್ಯೆ: ಕಾನಿಇಂ/ಬಾ.ಪ.ಅ.ಪ್ರಾ/ವಿ-2/ಪಿಬಿ-01/ಟೆ.ಪ್ರ.ಸಂಖ್ಯೆ-02/2024-25/1554
ದಿನಾಂಕ: 29.04.2024

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ-02.
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿಸೂಚನೆಯಂತೆ ಸ್ಟ್ಯಾಂಡರ್ಡ ಟೆಂಡರ್ ಡಾಕ್ಯೂಮೆಂಟ್ ನಿಯಮಾವಳಿಯಂತೆ ಇಂಡೆಂಟ್ ನಂ: 01,30,35 & 37 ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಸದರಿ ಕಾಮಗಾರಿಗಳ ಟೆಂಡರಿನಲ್ಲಿ ಭಾಗವಹಿಸಲು ಇಚ್ಛಿಸುವವರು ಟೆಂಡರ್ ವಿವರ ಹಾಗೂ ಕಾಮಗಾರಿಗಳ ವಿವರಗಳಿಗಾಗಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ www.kppp.karnataka.gov.in ಮೂಲಕ ವೀಕ್ಷಿಸಬಹುದು. ದಿನಾಂಕ: **11.09.2024** ಸಂಜೆ 05.00 ಘಂಟೆವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್‌ನ್ನು ದಿನಾಂಕ: **13.09.2024** ಬೆಳಿಗ್ಗೆ 11.00 ಘಂಟೆಗೆ (ಸಾಧ್ಯವಾದಲ್ಲಿ), ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ: **14.09.2024** ಬೆಳಿಗ್ಗೆ 11.00 ಘಂಟೆಗೆ (ಸಾಧ್ಯವಾದಲ್ಲಿ.) ತೆರೆಯಲಾಗುವುದು. ಹೆಚ್ಚಿನ ವಿವರಗಳಿಗಾಗಿ ಕಛೇರಿಯ ಅವಧಿಯಲ್ಲಿ ದೂರವಾಣಿ ಸಂಖ್ಯೆ: **08354-297054** ಸಂಪರ್ಕಿಸಬಹುದಾಗಿದೆ.
ಸೂಚನೆ: ಟೆಂಡರ್‌ಗೆ ಸಂಬಂಧಿಸಿದ ದಿನಾಂಕಗಳಲ್ಲಿ ಬದಲಾವಣೆ ಕುರಿತು ಮತ್ತು ಇನ್ನಿತರೆ ತಿದ್ದುಪಡೆಗಳು/ ಮಾರ್ಪಾಡುಗಳನ್ನು "ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್" ವೇದಿಕೆಯಲ್ಲಿ ಪ್ರಕಟಿಸಲಾಗುವುದು. ಮತ್ತು ಸದರಿ ವಿಷಯ ಕುರಿತು ದಿನ ಪತ್ರಿಕೆಗಳಲ್ಲಿ ಪ್ರಕಟಿಸುವುದಿಲ್ಲ.

ಸಹಿ/-
ಕಾರ್ಯನಿರ್ವಾಹಕ ಇಂಜಿನೀಯರರು,
ಬಾ.ಪ.ಅ.ಪ್ರಾ., ವಿಭಾಗ ನಂ: 02, ಬಾಗಲಕೋಟೆ.
ವಾ.ಸಾ.ಇ/ಬಾಗಲಕೋಟ/203/ದೇಶಪಾಂಡೆಪಬ್ಲಿಸಿಟಿ/2024-25

ಮೈಸೂರು ಸಕ್ಕರೆ ಕಂಪನಿ ನಿಯಮಿತ, ಮಂಡ್ಯ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಕ್ಕರೆ ನಗರ, ಮಂಡ್ಯ 571 402.
Telephone:08232-224036
GM/AM(C)/Sug/32/2024-25 Date: 31.08.2024

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಮೈಸೂರು ಸಕ್ಕರೆ ಕಂಪನಿಯ ಉತ್ಪನ್ನವಾದ ಸಕ್ಕರೆ ಮಾರಾಟ ಮಾಡಲು ಅಲ್ಪಾವಧಿ ಇ-ಟೆಂಡರ್ ಪ್ರಕಟಣೆಯ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ. **ಕ್ರ.ಸಂ.:** 01 **ಸಾಮಗ್ರಿ ವಿವರ:** ಸಕ್ಕರೆ ಎಂ-30 ಉತ್ಪಾದನೆ 2023-24 ನೇ ಸಾಲು. **ಮಾರಾಟದ ಪ್ರಮಾಣ:** 12,860 ಕ್ವಿಂಟಾಲ್. **ಇ.ಎಂ.ಡಿ ಹಣ (ಪ್ರತಿ ಕ್ವಿಂಟಾಲಿಗೆ):** ರೂ.100 **ಟೆಂಡರ್ ಫೀ.:** ಇ-ಪೋರ್ಟಲ್ ನಿಯಮಾವಳಿ
ಸೂಚನೆ: ಬಿಡ್‌ದಾರರು ಮೈಸೂರು ಸಕ್ಕರೆ ಕಂಪನಿಯ, ಮಂಡ್ಯದ ಗೋದಾಮುಗಳಿಗೆ ಭೇಟಿ ನೀಡಿ, ಸಕ್ಕರೆ ಗುಣಮಟ್ಟವನ್ನು ಪರಿಶೀಲಿಸಿಕೊಂಡು ನಂತರ ದರವನ್ನು ನಮೂದಿಸುವುದು. ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ನ್ನು (https://Kppp.Karnataka.gov.in) ತುಂಬುವುದು. ಇ- ಪೋರ್ಟಲ್ ಟೆಂಡರ್‌ನ್ನು ತುಂಬಲು ಪ್ರಾರಂಭದ ದಿ: 31.08.2024 ಮತ್ತು ಕೊನೆಯ ದಿ: 09.09.2024ರ 5.00 PM ಗಂಟೆ ಆಗಿರುತ್ತದೆ.
1) ಆನ್‌ಲೈನ್‌ನಲ್ಲಿ ಬಿಡ್ ಮಾಡಲು ದಿ: 10.09.2024 ಸಮಯ ಬೆಳಿಗ್ಗೆ 11:00 ರಿಂದ ಮಧ್ಯಾಹ್ನ 3.00 ಗಂಟೆಯವರೆಗೆ ಮಾತ್ರ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಮೊಬೈಲ್ ಸಂಖ್ಯೆ: 9483771816/ 9844766773. ಟೆಂಡರ್‌ನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೇ ಅಂತಿಮವಾಗಿರುತ್ತದೆ.

ದಿನಾಂಕ: 30.08.2024 ಸಹಿ/- ಪ್ರಧಾನ ವ್ಯವಸ್ಥಾಪಕರು.
DIPR/ADMDY-284/2024-25

ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ
ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಉನ್ನತ ಶಿಕ್ಷಣ ಸೌಧ, ಶೇಷಾದ್ರಿ ರಸ್ತೆ, ಬೆಂಗಳೂರು.

ಸಂಖ್ಯೆ: ಕಾಶಿಇ/181/ಅಗ್ರೈ/2021-22/ಸೇವಿ-2 ದಿನಾಂಕ: 11/08/2024

ನೋಟೀಸ್

ವಿಷಯ: ಶ್ರೀಮತಿ ಲಲಿತ ಸಮಾಜಕಾರ್ಯ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೊಳಕಾಲ್ಮೂರು, ಚಿತ್ರದುರ್ಗ, ಇವರ ಪರೀಕ್ಷಾರ್ಥ ಸೇವಾವಧಿ ಘೋಷಣೆ ಕುರಿತು.

ಉಲ್ಲೇಖ: 1) ಈ ಕಛೇರಿಯ ಸುತ್ತೋಲೆ ಸಂಖ್ಯೆ: 308/2018-19/ಸೇವಿ-2, ದಿನಾಂಕ: 24.11.2021.
2) ಪ್ರಾಂಶುಪಾಲರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೊಳಕಾಲ್ಮೂರು, ಇವರ ಪತ್ರ ಸಂಖ್ಯೆ: 158/2021-22ದಿನಾಂಕ: 31.03.2022.
3) ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಶಿವಮೊಗ್ಗ, ಇವರ ಪತ್ರ ಸಂಖ್ಯೆ: 275/2019-20 ದಿನಾಂಕ: 27.05.2022.

ಶ್ರೀಮತಿ ಲಲಿತ, ಸಮಾಜಕಾರ್ಯ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೊಳಕಾಲ್ಮೂರು, ಚಿತ್ರದುರ್ಗ ಆದ ನಿಮಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ತಾವು ದಿನಾಂಕ: 10.01.2018 ರಂದು ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ನೇಮಕಾತಿಗೊಂಡು ಕರ್ತವ್ಯಕ್ಕೆ ಹಾಜರಾಗಿರುತ್ತೀರಿ. ನಿಯಮಾನುಸಾರ 02 ವರ್ಷಗಳ ಪರೀಕ್ಷಾರ್ಥ ಸೇವಾವಧಿಯಲ್ಲಿ ಇಲಾಖಾ ಪರೀಕ್ಷೆಗಳಾದ ಓರಿಯೆಂಟೇಷನ್ ಕೋರ್ಸ್, ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ, ವೃತ್ತಿ ಬುನಾದಿ ತರಬೇತಿ ಪೂರೈಸಿ ಪರೀಕ್ಷಾರ್ಥ ಸೇವಾ ಅವಧಿ ಘೋಷಣೆಗೆ ಇದುವರೆಗೂ ಪ್ರಸ್ತಾವನೆಯನ್ನು ಸಲ್ಲಿಸಿರುವುದಿಲ್ಲ, ಉಲ್ಲೇಖ (2) ಮತ್ತು (3) ರನ್ವಯ ತಾವು ದಿನಾಂಕ: 19.10.2020 ರಿಂದ ಅನಧಿಕೃತ ಗೈರು ಹಾಜರಿಯಾಗಿರುವುದು ಕಂಡು ಬಂದಿರುತ್ತದೆ. ಆದುದರಿಂದ ಕರ್ನಾಟಕ ನಾಗರಿಕ ಸೇವಾ (ಪರಿವೀಕ್ಷಣಾ) ನಿಯಮಗಳೂ 1977ರ ನಿಯಮ 5(ಬಿ) ಪ್ರಕಾರ ತಮ್ಮ ವಿರುದ್ಧ ಏಕೆ ಕ್ರಮ ಕೈಗೊಳ್ಳಬಾರದು? ಎಂಬ ಬಗ್ಗೆ ಸೂಕ್ತ ಸಮಜಾಯಿಷಿಯನ್ನು ಈ ನೋಟೀಸ್ ತಲುಪಿದ 07 ದಿನಗಳೊಳಗಾಗಿ ಈ ಕಛೇರಿಗೆ ಸಲ್ಲಿಸುವಂತೆ ಒಂದೊಮ್ಮೆ ಈ ನೋಟೀಸಿಗೆ ಉತ್ತರಿಸದಿದ್ದಲ್ಲಿ ತಮ್ಮ ಹೇಳಿಕೆ ಯಾವುದೂ ಇರುವುದಿಲ್ಲವೆಂದು ಭಾವಿಸಿ ತಮ್ಮ ವಿರುದ್ಧ ನಿಯಮಾನುಸಾರ ಕ್ರಮ ವಹಿಸಲಾಗುವುದೆಂದು ಈ ಮೂಲಕ ಸೂಚಿಸಲಾಗಿದೆ.

ಇವರಿಗೆ:
ಶ್ರೀಮತಿ ಲಲಿತ
ಸಮಾಜಕಾರ್ಯ ಸಹಾಯಕ ಪ್ರಾಧ್ಯಾಪಕರು,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಮೊಳಕಾಲ್ಮೂರು-577535, ಚಿತ್ರದುರ್ಗ (ಪ್ರಾಂಶುಪಾಲರ ಮುಖಾಂತರ)

ಸಹಿ/-
ಮುಖ್ಯ ಆಡಳಿತಾಧಿಕಾರಿಗಳು
ಕಾಲೇಜು ಶಿಕ್ಷಣ ಇಲಾಖೆ
ವಾ.ಸಾ.ಸಂ.ಇ/ವಾಪ್ರ/1756/ಆಕಾರ್/2024-25

ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆ
ಕಾರ್ಯಪಾಲಕ ಅಭಿಯಂತರರ ಕಛೇರಿ,
ಗ್ರಾ.ಕು.ನೀ. & ನೈ. ವಿಭಾಗ, ಬೆಂಗಳೂರು ಗ್ರಾಮಾಂತರ.
ದೂರವಾಣಿ : 080-2978 7463, ಇಮೇಲ್: eerwsd.bngr1@gmail.com

ಟೆಂಡರ್ ಪ್ರಕಟಣೆ ಸಂಖ್ಯೆ : 01/2024-25/487 ದಿನಾಂಕ : 30-08-2024

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆ.ಪಿ.ಪಿ.ಪಿ. ಪೋರ್ಟಲ್ ಮೂಲಕ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ಗ್ರಾಮಾಂತರ ರವರಿಂದ ವಿಭಾಗ ವ್ಯಾಪ್ತಿಯ ವಿವಿಧ ಲೆಕ್ಕ ಶೀರ್ಷಿಕೆಗಳಡಿ ಈ ಕೆಳಕಂಡ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿಯಾಗಿರುವ ಹಾಗೂ ಕೆ.ಪಿ.ಪಿ.ಪಿ.ಯಲ್ಲಿ ಅರ್ಹ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಕೆ.ಪಿ.ಪಿ.ಪಿ. ಪೋರ್ಟಲ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ಅನ್ವಯವಾಗುವ ಸ್ಟ್ಯಾಂಡರ್ಡ್ ಟೆಂಡರ್ ಬಿಡ್ ಡಾಕ್ಯೂಮೆಂಟ್ ಕೆಡಬ್ಲ್ಯೂ - 1, 2, 3, 4, ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಅರ್ಜಿ ಮತ್ತು ಇ.ಎಂ.ಡಿ.ಯನ್ನು ಈ ಪೇಮೆಂಟ್ ಮುಖಾಂತರ ಕೆ.ಪಿ.ಪಿ.ಪಿ. ಪೋರ್ಟಲ್‌ನಲ್ಲಿ ಸಲ್ಲಿಸುವುದು.

ಸಾಮಾನ್ಯ ಸೂಚನೆಗಳು : **1) ಗುತ್ತಿಗೆದಾರರು ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2) ಅರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರ ಆನ್‌ಲೈನ್ ಮೂಲಕ ಸಲ್ಲಿಸಬೇಕು.**

1) ಟೆಂಡರ್ ದಸ್ತಾವೇಜುಗಳನ್ನು ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ : 31-08-2024 ರ ಸಂಜೆ 4.00 ಗಂಟೆಯ ನಂತರ. 2) ಪೂರ್ವ ಭಾವಿ ಸಭೆ ನಡೆಯುವ ಸ್ಥಳ ಮತ್ತು ದಿನಾಂಕ : ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ಗ್ರಾಮಾಂತರ, ಜಿಲ್ಲಾಡಳಿತ ಭವನ, ಬೀರಸಂದ್ರ ಗ್ರಾಮ, ದೇವನಹಳ್ಳಿ ದಿನಾಂಕ : 03-09-2024 ರ ಬೆಳಿಗ್ಗೆ 11.00 ಗಂಟೆಗೆ. 3) ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 09-09-2024 ರ ಸಂಜೆ 4.05 ಗಂಟೆಯವರೆಗೆ. 4) ಟೆಂಡರ್ / ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 10-09-2024 ರ ಸಂಜೆ 4.05 ಗಂಟೆಯ ನಂತರ. 5) ಆರ್ಥಿಕ ಬಿಡ್ ತೆರೆಯುವ ದಿನಾಂಕ : 11-09-2024 ರ ಸಂಜೆ 4.05 ಗಂಟೆಯ ನಂತರ.

ಸಹಿ/- ಕಾರ್ಯಪಾಲಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ,
ಬೆಂಗಳೂರು ಗ್ರಾಮಾಂತರ.
ವಾಸಾಸಂಇ/ಬೆಂಗ್ರಾಜಿ/ಮಣಿಪಾಲ್/1765/2024-25

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ತುಮಕೂರು ವಿಭಾಗ: ತುಮಕೂರು - 572101

ಸಂ: ಕರಾಸಾ/ತುವಿ/ಸಂ/ವಾ/2194/2195/2024-25 ದಿನಾಂಕ:30.08.2024

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕ.ರಾ.ರ.ಸಾ ನಿಗಮ, ತುಮಕೂರು ವಿಭಾಗದ ವ್ಯಾಪ್ತಿಗೆ ಒಳಪಡುವ ಡಿ. ದೇವರಾಜು ಅರಸು ಬಸ್ ನಿಲ್ದಾಣ ಮತ್ತು ಇತರೆ 18 (ಗುಬ್ಬಿ, ನಿಟ್ಟೂರು, ಕಡಬ, ದಾಬಸಪೇಟೆ, ಕೊರಟಗೆರೆ, ಕುಣಿಗಲ್, ಅಮೃತೂರು, ಹೆಬ್ಬೂರು, ಹುಲಿಯೂರುದುರ್ಗ, ಸೋಲೂರು, ತುರುವೇಕೆರೆ, ಚಿಕ್ಕನಾಯಕನಹಳ್ಳಿ, ಮಧುಗಿರಿ, ತಿಪಟೂರು, ನೊಣವಿನಕೆರೆ, ಚಂದ್ರಶೇಖರಪುರ, ಸಿರಾ ಮತ್ತು ಕಳ್ಳಂಬೆಳ್ಳ) ಬಸ್ ನಿಲ್ದಾಣಗಳ ಆವರಣ, ಶೌಚಾಲಯ / ಮೂತ್ರಾಲಯಗಳು ಹಾಗೂ ಸಿಬ್ಬಂದಿಗಳ ವಿಶ್ರಾಂತಿ ಕೊಠಡಿ ಮತ್ತು ತುಮಕೂರು ಘಟಕ-1 & 2, ಕುಣಿಗಲ್, ತಿಪಟೂರು, ತುರುವೇಕೆರೆ, ಸಿರಾ, ಮಧುಗಿರಿ ಘಟಕ ಹಾಗೂ ವಿಭಾಗೀಯ ಕಾರ್ಯಾಗಾರ & ವಿಭಾಗೀಯ ಕಛೇರಿಯಲ್ಲಿರುವ ಶೌಚಾಲಯ / ಮೂತ್ರಾಲಯಗಳ ಸ್ವಚ್ಛತಾ ನಿರ್ವಹಣೆ ಕಾರ್ಯದ ಗುತ್ತಿಗೆಯನ್ನು ಯಾಂತ್ರಿಕೃತ / ಯಾಂತ್ರೀಕೃತ ರಹಿತ ಹೌಸ್ ಕೀಪಿಂಗ್ ಪದ್ಧತಿಗನುಗುಣವಾಗಿ ನಿರ್ವಹಿಸಲು ಅರ್ಹ ಸ್ವಚ್ಛತಾ ಗುತ್ತಿಗೆದಾರರಿಂದ ಅರ್ಜಿಗಳನ್ನು ಕೆಪಿಪಿ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ.
ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 08.09.2024ರ ಸಂಜೆ 5:00 ಗಂಟೆಯವರೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 10.09.2024ರ ಬೆಳಿಗ್ಗೆ 11:00 ಗಂಟೆಗೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ: 14.09.2024ರ ಬೆಳಿಗ್ಗೆ 11:00 ಗಂಟೆಗೆ.
ಅರ್ಜಿದಾರರು ನಿಗದಿಪಡಿಸಿರುವ ಅರ್ಜಿ ಶುಲ್ಕದ ಮೂಲ ಡಿಡಿಯನ್ನು ಅಗತ್ಯ ದಾಖಲಾತಿಗಳೊಂದಿಗೆ ತುಮಕೂರು ವಿಭಾಗೀಯ ಕಛೇರಿಯಲ್ಲಿ ಸಂಚಾರ ಶಾಖೆಯಲ್ಲಿ ಸಲ್ಲಿಸುವ **ದಿನಾಂಕ ಮತ್ತು ಸಮಯ: 10.09.2024ರ ಬೆಳಿಗ್ಗೆ 11:00 ಗಂಟೆಯೊಳಗೆ.**
1) ಅರ್ಹ ತಾಂತ್ರಿಕ ಬಿಡ್ದುದಾರರ ಆರ್ಥಿಕ ಬಿಡ್‌ಗಳನ್ನು ಮಾತ್ರ ತೆರೆಯಲಾಗುತ್ತದೆ. 2) ಎಲ್ಲಾ ನಿಯಮ ನಿಬಂಧನೆಗಳನ್ನು ಅನುಬಂಧಗಳಲ್ಲಿ ತಿಳಿಸಲಾಗಿರುತ್ತದೆ. ಸದರಿ ನಿಯಮ ನಿಬಂಧನೆಗಳನ್ನು ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾಗಿದ್ದು, ಸದರಿ ದಾಖಲಾತಿಗಳನ್ನು ಇ-ಪೋರ್ಟಲ್‌ನ ವೆಬ್‌ಸೈಟ್ **https://kppp.karnataka.gov.in** : ಹಾಗೂ ನಿಗಮದ ವೆಬ್‌ಸೈಟ್ **ksrtc.karnataka.gov.in** 'ಇಲ್ಲಿ **ದಿನಾಂಕ:31.08.2024** ರಿಂದ ಡೌನ್‌ಲೋಡ್ ಮಾಡಿಕೊಂಡು ಬಿಡ್‌ದಾರರು ಅರ್ಜಿ ಸಲ್ಲಿಸಲು ತಿಳಿಸಲಾಗಿದೆ.
1) ಇ.ಎಂ.ಡಿ ಮೊತ್ತವನ್ನು ಪೋರ್ಟಲ್ ಮುಖಾಂತರ ಸಲ್ಲಿಸಬೇಕು. 2) ಸದರಿ ಟೆಂಡರ್‌ನ್ನು ಅಂಗೀಕರಿಸುವ/ ನಿರಾಕರಿಸುವ/ ಮಾರ್ಪಾಡು ಮಾಡುವ ಹಕ್ಕನ್ನು ನಿಗಮವು ಕಾಯಿರಿಸಿಕೊಂಡಿದೆ. 3) ಬಿಡ್ದುದಾರರು ಅಪ್‌ಲೋಡ್ ಮಾಡಿರುವ ಅನುಬಂಧಗಳ ನಿಬಂಧನೆಗಳನ್ನು ತಿಳಿದುಕೊಂಡು ಪ್ರತಿ ಅನುಬಂಧಗಳಿಗೆ ತಮ್ಮ ಸಹಿ ನೀಡಬೇಕಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ/ವಿವರಗಳಿಗಾಗಿ ಸಂಪರ್ಕಿಸಿ: ಸಹಾಯವಾಣಿ ಸಂಖ್ಯೆ: 7760990902

ಸಹಿ/-
ಕಾರ್ಯನಿರ್ವಾಹಕ ಅಭಿಯಂತರರು,
ತುಮಕೂರು ವಿಭಾಗ, ತುಮಕೂರು
ವಾಸಾಸಂಇ/ವಾಪ್ರ/ಜಿಎ/1766/2024-25

ಶಿಕ್ಷಣ ಕ್ಷೇತ್ರ: ‘ಬೇರು’ ಸಡಿಲ

ಒಂದನೇ ಪುಟದಿಂದ

ಇದರಿಂದ ಒಟ್ಟಾರೆ ಶಿಕ್ಷಣ ವ್ಯವಸ್ಥೆಗೆ ‘ಅತಿಥಿ ಶಿಕ್ಷಕ’ ಎನ್ನುವ ವರ್ಗವೇ ಆಧಾರವಾಗಿದೆ.

ಊಟ, ಬಟ್ಟೆ, ಬೂಟು, ಪುಸ್ತಕ, ಹಾಲು, ಚೀಲ... ಎಲ್ಲವನ್ನೂ ನೀಡಿ ಮನೆ ಬಾಗಿಲಿಗೆ ಹೋಗಿ ಕರೆದರೂ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸುವವರಿಲ್ಲ. ಇನ್ನೊಂದೆಡೆ, ಲಕ್ಷಾಂತರ ರೂಪಾಯಿ ಸಾಲ ಮಾಡಿ ಡೊನೇಷನ್ ಸುರಿದು ಖಾಸಗಿ ಶಾಲೆಗೆ ಸೇರಿಸುವ ಪಾಲಕರಿದ್ದಾರೆ. ಈ ವೈರುಧ್ಯಕ್ಕೆ ಶಿಕ್ಷಕ ಸಂಪನ್ಮೂಲದ ಕೊರತೆಯೂ ಕಾರಣ ಎಂಬ ಮಾತು ಶಿಕ್ಷಣ ವಲಯದಲ್ಲಿದೆ.

‘ಅತಿಥಿ ಶಿಕ್ಷಕರನ್ನು ಗೌರವದಿಂದ ನಡೆಸಿಕೊಳ್ಳದ ಸರ್ಕಾರವು ಸೂಕ್ತ ರೀತಿ ಸಂಬಳ, ಸೌಲಭ್ಯ ನೀಡುತ್ತಿಲ್ಲ. ಅವರಿಂದ ಗುಣಮಟ್ಟದ ಶಿಕ್ಷಣ ನಿರೀಕ್ಷಿಸಲು ಆಗದು. ಅದಕ್ಕೆ ಸರ್ಕಾರಿ ಶಾಲೆಗಳ ಫಲಿತಾಂಶ ಕುಸಿಯುತ್ತಿದೆ’ ಎಂಬ ವಾದವೂ ಇದೆ. ಇದಕ್ಕೆ ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯ ಎಸ್ಎಸ್ಎಲ್‌ಸಿ ಫಲಿತಾಂಶವೇ ಉದಾಹರಣೆ. ಕೆಲ ವರ್ಷಗಳ ಹಿಂದೆ ರಾಜ್ಯದ ಮೊದಲ ಐದು ಸ್ಥಾನಗಳಲ್ಲಿ ಇರುತ್ತಿದ್ದ ಚಿಕ್ಕೋಡಿ 2021-22ರಲ್ಲಿ 16ನೇ ಸ್ಥಾನ, 2022-23ರಲ್ಲಿ 12ನೇ ಸ್ಥಾನ ಮತ್ತು 2023-24ನೇ ಸಾಲಿನಲ್ಲಿ 25ನೇ ಸ್ಥಾನಕ್ಕೆ ಕುಸಿಯಿತು.

‘ಕೆಲಸದಲ್ಲಿ ನೈಪುಣ್ಯ ಮತ್ತು ಉತ್ತಮ ವಿದ್ಯಾರ್ಹತೆಯುಳ್ಳ ಅತಿಥಿ ಶಿಕ್ಷಕರನ್ನೇ ಅಮಾನವೀಯವಾಗಿ ಕಾಣಲಾಗುತ್ತದೆ. ಇದು ತಾರತಮ್ಯ ಅಲ್ಲದೇ ಮತ್ತೇನೂ ಅಲ್ಲ’ ಎಂದು ಶಿಕ್ಷಣ ತಜ್ಞ, ಬೆಂಗಳೂರಿನ ಶ್ರೀಪಾದ ಭಟ್ ಹೇಳುತ್ತಾರೆ.

ಇದಕ್ಕೆ ದನಿಗೂಡಿಸುವ ದಾವಣಗೆರೆ ವಿಶ್ವವಿದ್ಯಾಲಯದ ಪ್ರೊ. ಶಿಶುಪಾಲ ಎಸ್, ‘ಹೊಸ ವಿಶ್ವವಿದ್ಯಾಲಯಗಳನ್ನು ಆರಂಭಿಸುವ ಸರ್ಕಾರಕ್ಕೆ ಅತಿಥಿ ಉಪನ್ಯಾಸಕರ ಎಂಬ ಪರಿಕಲ್ಪನೆ ತೊಡೆದು ಹಾಕಲು ಆಗುತ್ತಿಲ್ಲ. ಉದ್ಯೋಗ ಅಭದ್ರತೆ ಇರುವಾಗ, ಶೈಕ್ಷಣಿಕ ಅನನ್ಯತೆ ಕಾಪಾಡುವಂತೆ ಅವರಿಗೆ ಹೇಳುವುದು ಎಷ್ಟು ಸರಿ’ ಎಂದು ಪ್ರಶ್ನಿಸುತ್ತಾರೆ.

ಕಾಯಂ ಉಪನ್ಯಾಸಕರು ಇಲ್ಲದ್ದಕ್ಕೆ ಆಗಿರುವ ಸಮಸ್ಯೆ ವಿವರಿಸುವ ಬೆಳಗಾವಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಸಿ.ಎಂ. ತ್ಯಾಗರಾಜ, ‘ಕಾಯಂ ಉಪನ್ಯಾಸಕರಿಲ್ಲದೇ ಅಭ್ಯಾಸ ನಡೆಸಬಹುದು. ಆದರೆ, ಅಧ್ಯಯನ ಮತ್ತು ಸಂಶೋಧನೆ ಕಷ್ಟ. ನೈಜ ಸಂಶೋಧನೆಗಳ ಕೊರತೆಗೆ ಇದೇ ಕಾರಣ’ ಎನ್ನುತ್ತಾರೆ. ಈ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ 352 ಕಾಲೇಜುಗಳಿವೆ. ಸಂಗೊಳ್ಳಿ ರಾಯಣ್ಣ ಪದವಿ ಕಾಲೇಜಿನಲ್ಲೇ 57 ಅತಿಥಿ ಉಪನ್ಯಾಸಕರು ಇದ್ದಾರೆ.

ಶಾಲೆಗಳಲ್ಲಿ ಶಿಕ್ಷಕರಿಗೆ ಮತ್ತು ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ಉಪನ್ಯಾಸಕರಿಗೆ ಬೇಡಿಕೆ ಇದೆ. ಉದ್ಯೋಗ ಆಕಾಂಕ್ಷಿಗಳ ಸಂಖ್ಯೆ ಹೆಚ್ಚಿದೆ. ಆದರೆ, ಬೇಡಿಕೆ ಮತ್ತು ಪೂರೈಕೆ ನಡುವೆ ಅಸಮತೋಲನವಿದೆ. ಅತಿಥಿ ಪದ್ಧತಿಯಿಂದ ಗುರು ಪರಂಪರೆಯ ಕೊಂಡಿ ಕಳಚಿದೆ ಎಂಬ ಅಭಿಪ್ರಾಯವೂ ಇದೆ.

‘30 ವರ್ಷಗಳಿಂದ ಉಪನ್ಯಾಸಕರ ನೇಮಕವೇ ಆಗಿಲ್ಲ. 20 ವರ್ಷ ಸೇವೆ ಸಲ್ಲಿಸಿದ ಬಳಿಕ ಒಬ್ಬ ಉಪನ್ಯಾಸಕ ವಿಭಾಗದ ಮುಖ್ಯಸ್ಥ ಆಗುತ್ತಿದ್ದರು. ಆ ಸರಣಿಯೇ ಕಳಚಿದ್ದು ಅಪಾಯಕಾರಿ. ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಒಂದು ಕಾಲದಲ್ಲಿ 300ಕ್ಕೂ ಹೆಚ್ಚು ಕಾಯಂ ಉಪನ್ಯಾಸಕರಿದ್ದೆವು. ಈಗ 38 ಮಂದಿ ಮಾತ್ರ ಇದ್ದೇವೆ. ಒಂದು ಪ್ರದೇಶವನ್ನು ಹಾಳು ಮಾಡಲು ಯುದ್ಧ ಸಾರಬೇಕಿಲ್ಲ. ಅಲ್ಲಿನ ವಿಶ್ವವಿದ್ಯಾಲಯ ನಾಶಪಡಿಸಿದರೆ ಸಾಕು ಎಂಬುದು ಚಿಂತಕರ ಮಾತು. ಇದು ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳಿಗೂ ಅನ್ವಯವಾಗುತ್ತದೆ’ ಎಂದು ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಪ್ರೊ.ಎಚ್.ಟಿ.ಪೋತೆ ಹೇಳುತ್ತಾರೆ.

ಕಾಯಂ ಶಿಕ್ಷಕರ ನೇಮಕಾತಿಗೆ ಸಿಇಟಿಗೂ ಮುನ್ನ ಟಿಇಟಿ ನಡೆಯುತ್ತದೆ. ಒಂದು ಸಾಮಾನ್ಯ ಪ್ರವೇಶ, ಇನ್ನೊಂದು ಅರ್ಹತಾ ಪರೀಕ್ಷೆ. ಡಿ.ಇಡಿ, ಬಿ.ಎ, ಬಿ.ಇಡಿ ಆದ ಬಳಿಕವೂ ಅರ್ಹತೆಯ ಮಾಪನ ನಡೆಯುತ್ತದೆ. ಆದರೆ, ಇವೆರಡೂ ಪರೀಕ್ಷೆಗಳು ಅತಿಥಿ ಶಿಕ್ಷಕರು ಅಥವಾ ಉಪನ್ಯಾಸಕರಿಗೆ ಅನ್ವಯ ಆಗುವುದಿಲ್ಲ. ಅವರ ಅರ್ಹತೆ, ಸಾಮರ್ಥ್ಯ, ಕೌಶಲ, ಮಾನಸಿಕ ಬೆಳವಣಿಗೆ ಎಲ್ಲವನ್ನೂ ಪರೀಕ್ಷಿಸುವುದಿಲ್ಲ. ಸಂಬಳದ ಆಧಾರದ ಮೇಲೆ ನೇಮಕಾತಿ ಪ್ರಕ್ರಿಯೆ ನಡೆಯುತ್ತದೆ.

‘ಉತ್ಪಾದನಾ ಕೇಂದ್ರಕ್ಕೆ ಹೆಚ್ಚು ಆದ್ಯತೆ ನೀಡುವ ಸರ್ಕಾರಕ್ಕೆ ಶಿಕ್ಷಣ ಎಂಬುದು ಅನುತ್ಪಾದನಾ ಕೇಂದ್ರ. ದೇಶದ ಅಭಿವೃದ್ಧಿಗೆ ಶಿಕ್ಷಣವೇ ಮೂಲಬೇರು ಎಂಬುದನ್ನು ಮರೆತಿದೆ. ಕೆಲ ವಿಶ್ವವಿದ್ಯಾಲಯಗಳ ವಿವಿಧ ವಿಭಾಗಗಳಿಗೆ ಅತಿಥಿ ಉಪನ್ಯಾಸಕರೇ ಆಧಾರ. ಇದು ಒಳ್ಳೆಯ ಬೆಳವಣಿಯಲ್ಲ. ಇಂದಿನ ಕೊರತೆ ನೀಗಿಸೋಣ; ಭವಿಷ್ಯದ್ದು ಆಮೇಲೆ ಯೋಚಿಸೋಣ ಎಂಬ ಧೋರಣೆಯೇ ಈ ಬೆಳವಣಿಗೆಗೆ ಕಾರಣ’ ಎನ್ನುತ್ತಾರೆ ಅತಿಥಿ ಉಪನ್ಯಾಸಕ ಜಗಪ್ಪ ತಳವಾರ.

ಎಷ್ಟಿದ್ದರೂ, ಏನಿದ್ದರೂ ತಾತ್ಕಾಲಿಕ: ‘ಅತಿಥಿ ಶಿಕ್ಷಕರದ್ದು ಒಂದರ್ಥದಲ್ಲಿ ಏನನ್ನೂ ಹೇಳಲಾಗದ ಮತ್ತು ತೋರಲಾಗದ ಮೌನ ರೋದನ. ₹50 ಸಾವಿರ ಪಡೆಯುವ ಕಾಯಂ ಶಿಕ್ಷಕನನ್ನು ನೇಮಿಸಿಕೊಳ್ಳುವ ಬದಲು ₹10 ಸಾವಿರ ಸಂಬಳಕ್ಕೆ ಒಬ್ಬರಂತೆ ಐವರನ್ನು ನೇಮಿಸಿಕೊಳ್ಳಬಹುದು ಎಂಬ ಲೆಕ್ಕಾಚಾರವೇ ಪ್ರಧಾನವಾಗಿದೆ. ಶಿಕ್ಷಕರಿಗೆ ವಿದ್ಯಾರ್ಥಿಗಳು, ಶಾಲೆ ಮತ್ತು ಪಾಲಕರ ಮೇಲೆ ಹಿಡಿತ ಇರಬೇಕು. ಆದರೆ, ಅದು ಅತಿಥಿ ಶಿಕ್ಷಕರಿಗೆ ಸಾಧ್ಯವಾಗುತ್ತಿಲ್ಲ. ಎಷ್ಟೇ ಆದರೂ ಅವರು ತಾತ್ಕಾಲಿಕ ಎಂಬ ಅಸಡ್ಡೆ ವಿದ್ಯಾರ್ಥಿಗಳು ಅಲ್ಲದೇ ಪಾಲಕರಲ್ಲೂ ಇದೆ’ ಎಂಬ ಬೇಸರ ಅತಿಥಿ ಶಿಕ್ಷಕರದ್ದು.

‘ಕಾಲೇಜುಗಳಲ್ಲಿ ಕಾಯಂ ಉಪನ್ಯಾಸಕರಿಗೆ ಮೂಲವೇತನವೇ ₹50,800 ಇದೆ. ಒಟ್ಟಾರೆ ₹3 ಲಕ್ಷದವರೆಗೆ ಸಂಬಳ. ಆದರೆ, ಅತಿಥಿ ಉಪನ್ಯಾಸಕರಿಗೆ ಒಟ್ಟಾರೆ ವೇತನವೇ ಗರಿಷ್ಠ ₹35 ಸಾವಿರ. ಈ ಇಬ್ಬರ ಮಧ್ಯೆ ಸಮಾನವಾದ ಶ್ರಮ, ಫಲಿತಾಂಶ ಹೇಗೆ ನಿರೀಕ್ಷಿಸಲು ಸಾಧ್ಯ? ಸಂಶೋಧಕರನ್ನು ಹುಟ್ಟು ಹಾಕಬೇಕಿದ್ದ ವಿಶ್ವವಿದ್ಯಾಲಯಗಳು ನಿರುದ್ಯೋಗಿಗಳನ್ನು ತಯಾರಿಸುವ ಕಾರ್ಖಾನೆಗಳಾಗಿವೆ’ ಎಂಬ ಆತಂಕ ಅತಿಥಿ ಉಪನ್ಯಾಸಕರದ್ದು.

ವಿಶ್ವವಿದ್ಯಾಲಯಗಳಲ್ಲಿ ಶೇ 70ರಷ್ಟು ಅತಿಥಿಗಳು: ಗುಲಬರ್ಗಾ ವಿಶ್ವವಿದ್ಯಾಲಯದ ಹಿಂದಿ, ಮರಾಠಿ, ಸಂಗೀತ, ಲಲಿತಕಲೆ, ಇತಿಹಾಸ, ಎಂಎಸ್‌ಡಬ್ಲ್ಯು, ಸಮಾಜಶಾಸ್ತ್ರ ರಾಜನೀತಿ ಶಾಸ್ತ್ರ, ಕಾನೂನು, ದೈಹಿಕ ಶಿಕ್ಷಣ, ಸೂಕ್ಷ್ಮಜೀವಿ ವಿಜ್ಞಾನ, ಸಸ್ಯ ವಿಜ್ಞಾನ, ಲೈಬ್ರರಿ ಸೈನ್ಸ್ ವಿಭಾಗಗಳಲ್ಲಿ ಒಬ್ಬರೂ ಖಾಯಂ ಸಿಬ್ಬಂದಿ ಇಲ್ಲ. ಕನ್ನಡ, ಉರ್ದು, ಕಂಪ್ಯೂಟರ್ ಸೈನ್ಸ್, ಪರಿಸರ ವಿಜ್ಞಾನ, ವಿಭಾಗಗಳಲ್ಲಿ ಒಬ್ಬೊಬ್ಬರು; ಇಂಗ್ಲಿಷ್, ಎಲೆಕ್ಟ್ರಾನಿಕ್ಸ್, ರಸಾಯನಶಾಸ್ತ್ರ ವಿಭಾಗಗಳಲ್ಲಿ ತಲಾ ಇಬ್ಬರು ಉಪನ್ಯಾಸಕರು ಮಾತ್ರ ಇದ್ದಾರೆ. ಇದೇ ರೀತಿ ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳ ಸ್ಥಿತಿಯೂ ಆಗಿದೆ. ಒಟ್ಟಾರೆಯಾಗಿ ವಿಶ್ವವಿದ್ಯಾಲಯಗಳು ಶೇ 70ರಷ್ಟು ಅತಿಥಿ ಉಪನ್ಯಾಸಕರನ್ನೇ ಅವಲಂಬಿಸಿವೆ.

‘ಅತಿಥಿ ಉಪನ್ಯಾಸಕರ ನೇಮಕಾತಿ ವಿಶ್ವವಿದ್ಯಾಲಯಗಳ ಅನುದಾನ ಆಯೋಗದ (ಯುಜಿಸಿ) ನಿಯಮಕ್ಕೆ ವಿರುದ್ಧವಿದೆ. ಆದರೆ, 2005ರಿಂದಲೂ ಸರ್ಕಾರಗಳು ಈ ನಿಯಮ ಗಾಳಿಗೆ ತೂರುತ್ತಲೇ ಬಂದಿವೆ. ಯುಜಿಸಿ ನಿಯಮದಂತೆ ತಮ್ಮನ್ನೇ ಕಾಯಂ ಮಾಡಿಕೊಳ್ಳಬೇಕು’ ಎಂದು ಕೋರಿ 53 ಅತಿಥಿ ಉಪನ್ಯಾಸಕರು ಹೈಕೋರ್ಟ್ ಮೊರೆ ಹೋಗಿದ್ದರು. ಅಗತ್ಯಕ್ಕೆ ಅನುಗುಣವಾಗಿ ಇವರನ್ನೇ ನೇಮಿಸಿಕೊಳ್ಳಿ ಎಂದು ಹೈಕೋರ್ಟ್ 2022ರಲ್ಲಿ ಆದೇಶ ನೀಡಿದೆ. ಆದರೆ, ಸರ್ಕಾರ ಇದಕ್ಕೆ ಹಿಂಬದಿ ಬರಹ ಬರೆದುಕೊಟ್ಟಿದೆ. ಈ ಹುದ್ದೆಗಳನ್ನು ತಾತ್ಕಾಲಿಕವಾಗಿ ಮಾತ್ರ ನೇಮಿಸಿಕೊಳ್ಳಲಾಗುವುದು ಎಂದು ಹೇಳಿ ಜವಾಬ್ದಾರಿಯಿಂದ ನುಣಚಿಕೊಂಡಿದೆ’ ಎಂದು ಹೋರಾಟಗಾರರು ಹೇಳುತ್ತಾರೆ.

ವಸತಿ ಶಾಲೆಗಳಲ್ಲೂ ಕೊರಗು: ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ (ಕ್ರೈಸ್) ಅಧೀನದ ವಸತಿ ಶಾಲೆಗಳಲ್ಲಿ ಸುಮಾರು 2,000 ಅತಿಥಿ ಶಿಕ್ಷಕರು, 220 ಅತಿಥಿ ಉಪನ್ಯಾಸಕರು ಹಾಗೂ ಬೋಧಕೇತರ ಸಿಬ್ಬಂದಿ ಸೇರಿ 3,500ಕ್ಕೂ ಹೆಚ್ಚು ಜನ ಹೊರಗುತ್ತಿಗೆ ಮೇಲೆ ಕೆಲಸ ಮಾಡುತ್ತಾರೆ. ಕಾಯಂ ಶಿಕ್ಷಕರಿಗಿಂತ ಹೆಚ್ಚಿನ ಆಸಕ್ತಿ ವಹಿಸಿ ಬೋಧಿಸುತ್ತಿದ್ದರೂ ಶ್ರಮಕ್ಕೆ ತಕ್ಕಷ್ಟು ಪ್ರತಿಫಲ ಸಿಗುತ್ತಿಲ್ಲ. ಇದರ ನೇರ ಪರಿಣಾಮ ವಿದ್ಯಾರ್ಥಿಗಳ ಕಲಿಕೆ ಮೇಲೆ ಬೀರುತ್ತಿದೆ.

‘ಕಾಯಂ ಶಿಕ್ಷಕರಷ್ಟೇ ಕಾರ್ಯವನ್ನು ನಾವೂ ಮಾಡುತ್ತಿದ್ದೇವೆ. ಬೆಳಿಗ್ಗೆ 9ರಿಂದ ಸಂಜೆ 5ರ ವರೆಗೆ ತರಗತಿಗಳ ಬೋಧನೆ ಮಾಡಿ, ಸಂಜೆ 5ರಿಂದ ರಾತ್ರಿ 8ರ ವರೆಗೆ ಮಾಸ್ಟರ್ ಆನ್ ಡ್ಯೂಟಿ (ಎಂಒಡಿ) ನಿರ್ವಹಿಸುತ್ತೇವೆ. ಸರ್ಕಾರ ತಿಂಗಳಿಗೆ ನೀಡುವ ಗೌರವಧನ, ದುಬಾರಿ ದಿನಗಳಲ್ಲಿ ಯಾತಕ್ಕೂ ಸಾಲುವುದಿಲ್ಲ. ಫಲಿತಾಂಶದಲ್ಲಿ ವ್ಯತ್ಯಾಸವಾದರೆ ಅತಿಥಿ ಶಿಕ್ಷಕರನ್ನೇ ಹೊಣೆಗಾರರನ್ನಾಗಿ ಮಾಡುತ್ತಾರೆ’ ಎಂದು ಅತಿಥಿ ಶಿಕ್ಷಕ ಸತೀಶ ಯಳಸಂಗಿ ಮತ್ತು ರಾಜ್ಯ ಸರ್ಕಾರಿ ಹಾಸ್ಟೆಲ್ ಮತ್ತು ವಸತಿ ಶಾಲಾ ಹೊರಗುತ್ತಿಗೆ ನೌಕರರ ಸಂಘದ ಅಧ್ಯಕ್ಷ ಭೀಮಶೆಟ್ಟಿ ಯಂಪಳ್ಳಿ ಬೇಸರದಿಂದ ನುಡಿದರು.

ಹೆರಿಗೆ ರಜೆ, ಭತ್ಯೆ ಇಲ್ಲ–ಮಗುವಿನ ಪಾಲನೆ ಕಷ್ಟ: ಅತಿಥಿ ಶಿಕ್ಷಕರು ಅಥವಾ ಉಪನ್ಯಾಸಕರಾದ ಮಹಿಳೆಯರ ಸಂಕಷ್ಟ ಹೇಳತೀರದು. ಹೆರಿಗೆ ರಜೆ ಸೇರಿ ಯಾವ ಸೌಲಭ್ಯ ಇಲ್ಲ. ಕುಟುಂಬ ನಿರ್ವಹಣೆಗೆ ಬೇರೆ ದಾರಿ ಇಲ್ಲದ ಅನೇಕರು ಹಸುಗೂಸು ಎತ್ತಿಕೊಂಡು ಕಾಲೇಜಿಗೆ ಹೋಗುತ್ತಾರೆ.

‘ದೇಶದ ಭವಿಷ್ಯ ಭದ್ರಗೊಳಿಸುವ ಪ್ರಜೆಗಳನ್ನು ರೂಪಿಸುವ ಉಪನ್ಯಾಕರ ಬದುಕೇ ಅಭದ್ರವಾಗಿದೆ. ಮಹಿಳೆಯರು ಕೆಲಸದ ಜತೆಗೆ ಅತ್ತೆ, ಮಾವ, ಗಂಡ, ಮಕ್ಕಳು ಎಲ್ಲರನ್ನೂ ನಿಭಾಯಿಸಲೇಬೇಕು. ಬೇರೆ ಊರುಗಳಿಗೆ ಹೋಗಿ ಬರಲು ಕಷ್ಟವಾಗುತ್ತದೆ. ಪ್ರಯಾಣದಲ್ಲಿಯೇ ಬಹುಪಾಲು ಸಮಯ ಕಳೆದು ಹೋಗುವುದರಿಂದ ಒತ್ತಡಕ್ಕೆ ಸಿಲುಕಿದ್ದೇವೆ’ ಎಂದು ಹೊಸದುರ್ಗ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕಿ ಡಿ.ಎಂ. ಮಮತಾ ತಿಳಿಸಿದರು.

‘ಖಾಸಗಿ ಕಂಪನಿಗಳಲ್ಲಿ ಕೆಲಸ ನಿರ್ವಹಿಸುವವರಿಗೂ ಭವಿಷ್ಯ ನಿಧಿ, ಹೆರಿಗೆ ರಜೆ, ಇತರೆ ರಜೆ ಸೌಲಭ್ಯವಿದೆ. ಆದರೆ, ನಮಗೆ ಇಲ್ಲ. ಹೆರಿಗೆ ಸಂದರ್ಭದಲ್ಲಿ ಕೆಲಸಕ್ಕೆ ತೆರಳಲು ಸಾಧ್ಯವಾಗದ ಕಾರಣ ಹಲವರು ಕುಟುಂಬ ನಿಭಾಯಿಸಲು ಹೆಣಗಾಡುತ್ತಾರೆ. ಮಗುವಿನ ಲಾಲನೆ–ಪಾಲನೆಗೆ ಹಣ ಬೇಕು. ಆದರೆ, ನಮ್ಮ ಬಳಿ ಹಣ ಇರಲ್ಲ’ ಎಂದರು.

ಶಿಕ್ಷಣ ಗುಣಮಟ್ಟ ಕುಸಿತ: ಮುಖ್ಯಮಂತ್ರಿ ಸಿದ್ದರಾಮಯ್ಯ ತವರೂರು ಮೈಸೂರು ತಾಲ್ಲೂಕಿನ ಸಿದ್ದರಾಮನ ಹುಂಡಿಯಲ್ಲಿನ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಈ ವರ್ಷ ಪ್ರಾಥಮಿಕ ಹಾಗೂ ಪ್ರೌಢಶಾಲೆ ಎರಡೂ ಸೇರಿ ವಿದ್ಯಾರ್ಥಿಗಳ ಸಂಖ್ಯೆ 1,000ಕ್ಕೆ ಸಮೀಪಿಸಿದೆ. ಸ್ಮಾರ್ಟ್‌ಕ್ಲಾಸ್ ಸೌಕರ್ಯವಿದೆ. ಆದರೆ, ಪಾಠ ಮಾಡಲು ಅಗತ್ಯ ಪ್ರಮಾಣದಲ್ಲಿ ಕಾಯಂ ಶಿಕ್ಷಕರೇ ಇಲ್ಲ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕನಿಷ್ಠ ವೇತನ ಕಾಯ್ದೆ ಜಾರಿಗೊಳಿಸಿವೆ. ಅದರಂತೆ ದಿನಕ್ಕೆ ಕನಿಷ್ಠ 6 ಗಂಟೆ ದುಡಿಯುವ ವ್ಯಕ್ತಿಗೆ ತಿಂಗಳಿಗೆ ಕನಿಷ್ಠ ₹18 ಸಾವಿರದಿಂದ ₹21 ಸಾವಿರ ವೇತನ ನಿಗದಿಪಡಿಸಿದೆ. ಆದರೆ ಸರ್ಕಾರಿ ಶಾಲೆಗಳಲ್ಲಿ ಬೆಳಿಗ್ಗೆ 9ರಿಂದ ಸಂಜೆ 4ರವರೆಗೆ ದುಡಿಮೆ ಮಾಡುವ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಸರ್ಕಾರ ನಿಗದಿಪಡಿಸಿದ ಗೌರವ ಧನ ₹10 ಸಾವಿರ. ಇತರೆ ಕಾರ್ಮಿಕರಿಗೆ ಸಿಗುವಷ್ಟು ಕನಿಷ್ಠ ವೇತನವೂ ಸಿಗುವುದಿಲ್ಲ.

‘ಅಲ್ಪ ವೇತನದ ಕಾರಣಕ್ಕೆ ಅತಿಥಿ ಶಿಕ್ಷಕರು ಬೇರೆ ಬೇರೆ ಉದ್ಯೋಗಗಳಲ್ಲೂ ತೊಡಗಿಸಿಕೊಂಡಿದ್ದಾರೆ. ಮಕ್ಕಳ ಕಲಿಕೆಗೆ ಸಂಪೂರ್ಣವಾಗಿ ಗಮನ ಹರಿಸುತ್ತಿಲ್ಲ. ಇದು ಸರ್ಕಾರಿ ಶಾಲೆಗಳ ಶಿಕ್ಷಣದ ಗುಣಮಟ್ಟದ ಮೇಲೆ ಪ್ರಭಾವ ಬೀರುತ್ತದೆ. ಹೀಗಾಗಿ ಅತಿಥಿ ಶಿಕ್ಷಕರು ಹೆಚ್ಚಿರುವ ಶಾಲೆಗಳಲ್ಲಿ ಫಲಿತಾಂಶವೂ ಏರುಪೇರಾಗುತ್ತಿದೆ’ ಎಂದು ಶಿಕ್ಷಣ ಇಲಾಖೆಯ ಅಧಿಕಾರಿಯೊಬ್ಬರು ಹೇಳುತ್ತಾರೆ.

ಹಂತಹಂತವಾಗಿ ಅತಿಥಿ ಶಿಕ್ಷಕ ಎನ್ನುವ ವ್ಯವಸ್ಥೆಯನ್ನು ತೆಗೆದು ಖಾಲಿ ಇರುವ ಜಾಗಕ್ಕೆ ಕಾಯಂ ಶಿಕ್ಷಕ ಅಥವಾ ಉಪನ್ಯಾಸಕರನ್ನು ನೇಮಿಸಿಕೊಳ್ಳದಿದ್ದರೆ ಶಿಕ್ಷಣ ವ್ಯವಸ್ಥೆ ಮತ್ತಷ್ಟು ಅವ್ಯವಸ್ಥೆಯತ್ತ ಹೋಗಲಿದೆ. ಇದಕ್ಕೆ ರಾಜ್ಯ ಸರ್ಕಾರವೇ ಉತ್ತರ ಹುಡುಕಬೇಕು.

ಪೂರಕ ಮಾಹಿತಿ: ಆರ್.ಜಿತೇಂದ್ರ, ಮಲ್ಲಿಕಾರ್ಜುನ ನಾಲವಾರ, ಅನಿತಾ ಎಚ್, ವಿಕ್ರಂ ಕಾಂತಿಕೆರೆ, ಚಂದ್ರಹಾಸ ಹಿರೇಮಳಲಿ
ಪರಿಕಲ್ಪನೆ: ಯತೀಶ್ ಕುಮಾರ್ ಜಿ.ಡಿ.


ಚಿತ್ರ: ಭಾವು ಪತ್ತಾರ್

ಅಂಕಿ ಸಂಖ್ಯೆ

12 ಲಕ್ಷ ರಾಜ್ಯದಲ್ಲಿರುವ ಬಿ.ಇಡಿ ಪದವೀಧರರು

43,863 ಅತಿಥಿ ಶಿಕ್ಷಕರಾಗಿ ಕೆಲಸದಲ್ಲಿರುವವರು

2,81,862 ಮಂಜೂರಾದ ಒಟ್ಟು ಶಿಕ್ಷಕ ಹುದ್ದೆಗಳು

2,28,803 ಹಾಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು ಶಿಕ್ಷಕರ ಸಂಖ್ಯೆ

53,059 ಇನ್ನೂ ಖಾಲಿ ಇರುವ ಹುದ್ದೆಗಳು

‘ಅತಿಥಿಗಳ’ ಬೇಡಿಕೆ..

- ಸೇವಾ ಅಥವಾ ಉದ್ಯೋಗ ಭದ್ರತೆ ಕಲ್ಪಿಸಬೇಕು
- ಅತಿಥಿ ಶಿಕ್ಷಕ ಬದಲು ಗೌರವ ಅಥವಾ ಅರೆಕಾಲಿಕ ಶಿಕ್ಷಕ ಎನ್ನಬೇಕು
- 9 ತಿಂಗಳಿಗೆ ಸೀಮಿತಗೊಳಿಸದೇ ಬೇಸಿಗೆ ರಜೆಯಲ್ಲೂ ಸಂಬಳ ನೀಡಬೇಕು
- ಪ್ರತಿ ತಿಂಗಳ ಸಂಬಳ ಬ್ಯಾಂಕ್ ಖಾತೆಗೆ ಜಮೆ ಆಗಬೇಕು
- ನೇಮಕಾತಿಯಲ್ಲಿ ಮೆರಿಟ್ ಪದ್ಧತಿ ಕೈಬಿಟ್ಟು ಸೇವಾಧಾರಿತ ಮಾಡಬೇಕು
- ಶೇ 5 ರಷ್ಟು ಕೃಪಾಂಕ ನೀಡಬೇಕು
- ಪ್ರತಿ ವರ್ಷ ಸೇವಾ ದೃಢೀಕರಣ ಪ್ರಮಾಣಪತ್ರ ನೀಡಬೇಕು
- ರಜೆಯೂ ಸೇರಿ ಕಾಯಂ ಶಿಕ್ಷಕರಿಗೆ ಇರುವ ಎಲ್ಲ ಸೌಲಭ್ಯ ನೀಡಬೇಕು.
- ಮಧ್ಯದಲ್ಲೇ ವರ್ಗಾವಣೆ ಅಥವಾ ಬೇರೆ ಶಿಕ್ಷಕರ ಕಾರಣಕ್ಕೆ ಇದ್ದವರನ್ನು ವಜಾ ಮಾಡಬಾರದು.

ಪ್ರತಿ ಬಾರಿ ಬೇರೆಬೇರೆ ಶಾಲೆಗಳಿಗೆ ನೇಮಕಾತಿ ಬಯಸಿ ಅಲೆಯಬೇಕಿದೆ. ಶಿಕ್ಷಕರಿಗೆ ವಿದ್ಯಾರ್ಥಿಗಳು ಹೊಂದಿಕೊಳ್ಳಲು 3 ತಿಂಗಳು ಬೇಕು. ಇದು ಗುಣಮಟ್ಟದ ಮೇಲೂ ದುಷ್ಪರಿಣಾಮ ಬೀರುತ್ತದೆ
ಅಶೋಕ ಪೋಳಾ, ಅತಿಥಿ ಶಿಕ್ಷಕ, ಕಲಬುರಗಿ

ವರ್ಷಪೂರ್ತಿ ಒಂದೂ ರಜೆ ಇಲ್ಲ. ಹೆರಿಗೆ ರಜೆ ಇಲ್ಲ. ಅಪಘಾತವಾದರೂ ವಿಶ್ರಾಂತಿಗೆ ಅವಕಾಶವಿಲ್ಲ. ನಿವೃತ್ತಿವರೆಗೆ ಅತಿಥಿ ಶಿಕ್ಷಕಿ– ಉಪನ್ಯಾಸಕಿ ಆಗಿಯೇ ದುಡಿಯಲು ಸಾಧ್ಯವೇ ಇಲ್ಲ.
ಟಿ.ಲೋಲಾಕ್ಷಿ, ಸಂಘಟನಾ ಕಾರ್ಯದರ್ಶಿ, ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆ ಅತಿಥಿ ಶಿಕ್ಷಕರ ಸಂಘ

ಎಲ್ಲರಿಗೂ ಸರ್ಕಾರಿ ನೌಕರಿ ಕೊಡಲು ಸಾಧ್ಯವಿಲ್ಲ ನಿಜ. ಆದರೆ, ಶೇ 80ರಷ್ಟು ಅತಿಥಿಗಳನ್ನೇ ಇಟ್ಟುಕೊಂಡು ಗುಣಮಟ್ಟ ಕಾಯ್ದುಕೊಳ್ಳಲು ಹೇಗೆ ಸಾಧ್ಯ? ಸರ್ಕಾರ ಈ ಗಂಭೀರತೆ ಅರಿಯಬೇಕು
ಜಗಪ್ಪ ತಳವಾರ, ಅತಿಥಿ ಉಪನ್ಯಾಸಕ, ಸರ್ಕಾರಿ ಪ್ರಥಮದರ್ಜೆ ಕಾಲೇಜು, ಕಮಲಾಪುರ, ಕಲುಬುರಗಿ ಜಿಲ್ಲೆ

ಈಗಿನ ಸ್ವರೂಪದಲ್ಲಿ ಶೈಕ್ಷಣಿಕ ಅನನ್ಯತೆಯನ್ನು ಉಳಿಸಿಕೊಳ್ಳಲು ಅತಿಥಿ ಶಿಕ್ಷಕರು ಏನಾದರೂ ಮಾಡಬಲ್ಲರು ಎಂದು ಬಯಸುವುದು ಸರಿಯಲ್ಲ. ಅವರ ಬದುಕಿಗೆ ಭದ್ರತೆ ಕಲ್ಪಿಸಲು ಆದ್ಯತೆ ನೀಡಬೇಕಿದೆ.
ಚೈತ್ರ, ಸಹಪ್ರಾಧ್ಯಾಪಕ, ಮತ್ತಿಘಟ್ಟ, ಬೆಂಗಳೂರು

ಅಸ್ತಿತ್ವ ಉಳಿಸಿಕೊಳ್ಳಲು ಹೆಣಗಾಟ



ಕಲಿತ ವಿಷಯಗಳನ್ನು ಸಮಾಜಕ್ಕಾಗಿ ಬಳಸುವುದು ಮತ್ತು ಬೆರೆಯುವುದೇ ಶಿಕ್ಷಣ ಆಗಬೇಕು. ಅತಿಥಿ ಶಿಕ್ಷಕರು ಅಸ್ತಿತ್ವ ಉಳಿಸಿಕೊಂಡು ಜೀವನ ನಿರ್ವಹಿಸಲು ಹೆಣಗಾಡುತ್ತಿದ್ದಾರೆ. ಶೈಕ್ಷಣಿಕ ಅನನ್ಯತೆಯನ್ನು ಸೂಕ್ಷ್ಮವಾಗಿ ವಿಂಗಡಿಸಿದರೆ ಶಿಕ್ಷಣವು ಬದುಕಿಗೆ, ವಿದ್ಯೆಯು ಸಂಸ್ಕಾರಕ್ಕೆ ಸಂಬಂಧಪಟ್ಟಿದೆ.
ಎ.ಎಂ.ನರಹರಿ, ನಿವೃತ್ತ ಉಪನ್ಯಾಸಕ, ಸಾಗರ

ಬದುಕಿನ ಅನುಭವ ಇಲ್ಲ



ಕೇವಲ ಅಕ್ಷರಜ್ಞಾನದ ಕಡೆಗೆ ಮಾತ್ರ ಗಮನ ನೀಡುವುದರಿಂದ ಈಗ ಶಿಕ್ಷಣದಲ್ಲಿ ನಿಜ ಜೀವನದ ಪರಿಚಯ ಆಗುತ್ತಿಲ್ಲ. ಕಲಿಯುವವರಿಗೂ ಕಲಿಸುವರಿಗೂ ಬದುಕಿನ ಅನುಭವ ಇಲ್ಲ. ಪಠ್ಯವನ್ನು ಮೀರಿ ಹೊರಗಿನ ಪ್ರಪಂಚವನ್ನು ತೋರಿಸುವ ಕೆಲಸ ಆಗಬೇಕು.
ಮಹಾಬಲೇಶ್ವರ ರಾವ್, ಸಮನ್ವಯಾಧಿಕಾರಿ, ಟಿಎಂಎ ಪೈ ಶಿಕ್ಷಣ ಮಹಾವಿದ್ಯಾಲಯ, ಉಡುಪಿ

‘ಅತಿಥಿ’ಗಳಿಗೆ ಯುಜಿಸಿ ತೂಗುಗತ್ತಿ

ಒಂದನೇ ಪುಟದಿಂದ...

ಇದಕ್ಕೆ ಸ್ಪಂದಿಸಿದ್ದ ಸರ್ಕಾರ ಮೂರು ವರ್ಷಗಳ ಕಾಲಾವಧಿ ನೀಡಿ, 2022ರ ಜನವರಿ 14ರಂದು ಆದೇಶ ಹೊರಡಿಸಿತ್ತು. ಬರುವ ಜನವರಿ 13ಕ್ಕೆ ಮೂರು ವರ್ಷಗಳ ಅವಧಿ ಮುಕ್ತಾಯವಾಗಲಿದೆ. ಅಂದು ಹೊರಡಿಸಿದ ಆದೇಶವನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಕಾಲೇಜು ಶಿಕ್ಷಣ ಇಲಾಖೆ ನೆನಪಿಸಿದೆ.

‘ಸಹಾಯಕ ಪ್ರಾಧ್ಯಾಪಕರ ನೇಮಕಾತಿಯಲ್ಲಿ ಅವಕಾಶ ನೀಡಲು ಸಾಧ್ಯವಿಲ್ಲದಿದ್ದರೂ ಸೇವಾ ಭದ್ರತೆಗೆ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಸರ್ಕಾರ ಭರವಸೆ ನೀಡಿತ್ತು. ಹಾಗಾಗಿ, ಅತಿಥಿ ಉಪನ್ಯಾಸಕರಿಗೆ ಯುಜಿಸಿ ನಿಯಮ ಕಡ್ಡಾಯ ಮಾಡಬಾರದು. ವಿದ್ಯಾರ್ಹತೆ ನೆಪದಲ್ಲಿ ದಶಕಗಳಿಂದ ಕೆಲಸ ಮಾಡುತ್ತಿರುವವರಿಗೆ ಅನ್ಯಾಯ ಮಾಡಬಾರದು. ಅವರ ಅನುಭವ ಪರಿಗಣಿಸಿ, ಅವಕಾಶ ಮುಂದುವರಿಸಬೇಕು’ ಎಂದು ರಾಜ್ಯ ಅತಿಥಿ ಉಪನ್ಯಾಸಕರ ಸಂಘದ ಅಧ್ಯಕ್ಷ ಹನುಮಂತಗೌಡ ಕಲ್ಮನಿ ಒತ್ತಾಯಿಸಿದ್ದಾರೆ.

ವಿದ್ಯಾರ್ಹತೆಯ ವಿಷಯದಲ್ಲಿ 2022ರಲ್ಲಿ ಹೊರಡಿಸಿದ್ದ ಆದೇಶ ಪಾಲಿಸಿದ್ದೇವೆ. ಸರ್ಕಾರ ಮುಂದೆ ತೆಗೆದುಕೊಳ್ಳುವ ನಿರ್ಧಾರದಂತೆ ಕ್ರಮಕೈಗೊಳ್ಳಲಾಗುವುದು
ಜಿ. ಜಗದೀಶ್
ಕಾಲೇಜು ಶಿಕ್ಷಣ ಇಲಾಖೆ ಆಯುಕ್ತ

ಯುಜಿಸಿ ಹಿಂದೆ ಎಂ.ಫಿಲ್ ಅನ್ನು ಎನ್ಇಟಿ, ಕೆ–ಸೆಟ್‌ಗೆ ಸಮ ಎಂದಿತ್ತು. ಸಹಾಯಕ ಪ್ರಾಧ್ಯಾಪಕರ ನೇಮಕಾತಿಗೂ ಪರಿಗಣಿಸಲಾಗಿತ್ತು. ಅತಿಥಿ ಉಪನ್ಯಾಸಕರಿಗೂ ಇದೇ ಅನ್ವಯಿಸಲಿ
ಹನುಮಂತಗೌಡ ಕಲ್ಮನಿ
ರಾಜ್ಯ ಅತಿಥಿ ಉಪನ್ಯಾಸಕರ ಸಂಘದ ಅಧ್ಯಕ್ಷ

ರಾಜಭವನಕ್ಕೆ ‘ಕೈ’ ನಾಯಕರ ಚಲೋ


ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಕಾಂಗ್ರೆಸ್ ಮುಖಂಡರು ಶನಿವಾರ ರಾಜಭವನ ಚಲೋ ನಡೆಸಿದರು. ಶಾಸಕ ಆರ್.ವಿ. ದೇಶಪಾಂಡೆ, ಸಚಿವರಾದ ಎಚ್.ಕೆ. ಪಾಟೀಲ, ಜಿ. ಪರಮೇಶ್ವರ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

ಒಂದನೇ ಪುಟದಿಂದ...

ರಾಜ್ಯಪಾಲರ ವಿರುದ್ಧ ಧಿಕ್ಕಾರ: ವಿಧಾನಸೌಧದ ಆವರಣದಲ್ಲಿರುವ ಗಾಂಧಿ ಪ್ರತಿಮೆ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ನಾಯಕರು, ರಾಜ್ಯಪಾಲರ ವಿರುದ್ಧ ಧಿಕ್ಕಾರ ಕೂಗಿದರು. ಕೇಂದ್ರದ ಚುಕ್ಕಾಣಿಯಂತೆ, ಬಿಜೆಪಿ ಏಜೆಂಟರಂತೆ ರಾಜ್ಯಪಾಲರು ಕೆಲಸ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಪ್ರಜಾತಾಂತ್ರಿಕವಾಗಿ ಚುನಾಯಿತ ಸರ್ಕಾರವನ್ನು ಅಪ್ರಜಾತಾಂತ್ರಿಕ ಮಾರ್ಗದಲ್ಲಿ ಅಸ್ಥಿರಗೊಳಿಸಲು ಕೇಂದ್ರ ಸರ್ಕಾರ ಮತ್ತು ರಾಜಭವನ ಷಡ್ಯಂತ್ರ ಮಾಡುತ್ತಿದೆ ಎಂದು ಆರೋಪಿಸಿದರು.

ವಿಧಾನಸೌಧದಲ್ಲಿ ಮಾತನಾಡಿದ ಡಿ.ಕೆ. ಶಿವಕುಮಾರ್, ‘ಸಿದ್ದರಾಮಯ್ಯ ಪರವಾಗಿ ನಾವು ರಾಜಭವನ ಚಲೋ ಮಾಡುತ್ತಿಲ್ಲ. ಅವರ ವಿರುದ್ಧದ ರಾಜ್ಯಪಾಲರ ನಡೆಯನ್ನು ಪ್ರಶ್ನಿಸಿ ನ್ಯಾಯಾಲಯದಲ್ಲಿ ಹೋರಾಟ ನಡೆಸುತ್ತಿದ್ದೇವೆ. ರಾಜ್ಯಪಾಲರ ಕಚೇರಿ ದುರುಪಯೋಗ ಆಗುತ್ತಿದೆ. ಇದರ ವಿರುದ್ಧ ನಮ್ಮ ಹೋರಾಟ’ ಎಂದರು.

‘ರಾಜ್ಯಪಾಲರು ಸರ್ಕಾರದ ಪ್ರತಿನಿಧಿಯಾಗಿ ಕೆಲಸ ಮಾಡಬೇಕು. ಪಕ್ಷದ ಪ್ರತಿನಿಧಿಯಾಗಿ ಕೆಲಸ ಮಾಡಬಾರದು’ ಎಂದೂ ಹೇಳಿದರು.

ಸೌದಿಗೆ ಹೊರಟಿದ್ದ ಶಂಕಿತ ಉಗ್ರ ಸೆರೆ

ಒಂದನೇ ಪುಟದಿಂದ...

‘ಈತ, ಹಿಜ್ಬ್ -ಉತ್-ತಹ್ರೀರ್ ಸಂಘಟನೆ ನಡೆಸುತ್ತಿದ್ದ ಉಗ್ರಗಾಮಿ ಚಟುವಟಿಕೆಯಿಂದ ಪ್ರಭಾವಿತನಾಗಿದ್ದ. ಇಸ್ಲಾಮಿಕ್ ಕಾನೂನು ಸ್ಥಾಪಿಸಲು ಕೆಲಸ ಮಾಡುತ್ತಿದ್ದವರ ಜತೆಗೆ ಅಜೀಜ್ ಸಹ ಕೈಜೋಡಿಸಿದ್ದ. ಅಜೀಜ್ ಸೇರಿದಂತೆ ಆರು ಶಂಕಿತರ ವಿರುದ್ಧ ಎನ್ಐಎ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿತ್ತು. ಹಿಜ್ಬ್–ಉತ್–ತಹ್ರೀರ್ ಸಂಸ್ಥಾಪಕ ತಾಕಿ ಅಲ್ ದಿನ್–ಅಲ್ ನಬಾನಿ ರಚಿಸಿದ್ದ ಸಂವಿಧಾನವನ್ನು ಭಾರತದಲ್ಲಿ ಜಾರಿಗೊಳಿಸುವ ಕುರಿತು ಸಂಘಟನೆ ಮಾಡುತ್ತಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದು ಎನ್ಐಎ ಮೂಲಗಳು ತಿಳಿಸಿವೆ.

‘ಆರು ಮಂದಿ ಶಂಕಿತರು, ಹಿಜ್ಬ್ -ಉತ್-ತಹ್ರೀರ್ ಸಂಘಟನೆಗೆ ಹಲವು ಯುವಕರನ್ನು ಸೆಳೆಯಲು ಪ್ರಯತ್ನ ಮಾಡಿದ್ದರು. ತಮ್ಮ ಗುರಿ ಸಾಧಿಸಲು ಶಿಬಿರಗಳನ್ನು ಆರಂಭಿಸಿದ್ದರು. ಅಂತಹ ಶಿಬಿರಗಳನ್ನು ಸ್ಥಾಪಿಸುವಲ್ಲಿ ಶಂಕಿತ ಉಗ್ರ ಅಜೀಜ್ ಪ್ರಮುಖ ಪಾತ್ರ ವಹಿಸಿದ್ದ’ ಎಂದು ಮೂಲಗಳು ಹೇಳಿವೆ.

‘ಭಾರತದ ವಿರುದ್ಧ ಮುಸ್ಲಿಂ ರಾಷ್ಟ್ರಗಳ ಯುವಕರನ್ನು ಮೂಲಭೂತವಾದಿಗಳನ್ನಾಗಿ ಮಾಡುತ್ತಿದ್ದ ಉಗ್ರ ಸಂಘಟನೆಯ ಪ್ರಮುಖ ಭಾಷಣಕಾರ ಹಾಗೂ ಸಂಚುಕೋರನಾಗಿ ಅಜೀಜ್ ಕೆಲಸ ಮಾಡುತ್ತಿದ್ದ. ಪದವಿ ಪೂರ್ಣಗೊಂಡ ಬಳಿಕ ಬರ್ಮಿಂಗ್‌ಹ್ಯಾಮ್‌ಗೆ ತೆರಳಿದ್ದ. ಅಲ್ಲಿ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡಿಕೊಂಡಿದ್ದ. ಹೀಗಾಗಿ, ಅಲ್ಲಿನ ಪೌರತ್ವ ಪಡೆದುಕೊಂಡಿದ್ದ. ಸಂಘಟನೆಯ ಸಿದ್ಧಾಂತಗಳನ್ನು ದಕ್ಷಿಣ ಭಾರತದಲ್ಲಿ ಪಸರಿಸಲು ಪ್ರಯತ್ನಿಸುತ್ತಿದ್ದ. ಪಾಕಿಸ್ತಾನ, ತಮಿಳುನಾಡಿನ ಕೆಲವರು ಉಗ್ರ ಸಂಘಟನೆ ಸೇರಿಕೊಂಡಿದ್ದರು’ ಎಂದು ಮೂಲಗಳು ಹೇಳಿವೆ.

ಗುಂಡಣ್ಣ



25 ವರ್ಷಗಳ ಹಿಂದೆ

ಬುಧವಾರ, 01-09-1999

- **ಆಂಧ್ರ: ಹಿಂಸೆ, ಸ್ಫೋಟಕ ಪತ್ತೆ: ಚುನಾವಣೆ ಮುಂದಕ್ಕೆ**

ನವದೆಹಲಿ ಆ.31 (ಪಿಟಿಐ, ಯುಎನ್ಐ)– ವ್ಯಾಪಕ ಹಿಂಸಾಚಾರ ಮತ್ತು ಭಾರೀ ಪ್ರಮಾಣದಲ್ಲಿ ಸ್ಫೋಟಕಗಳು ಪತ್ತೆಯಾಗಿರುವ ಹಿನ್ನೆಲೆಯಲ್ಲಿ ಆಂಧ್ರಪ್ರದೇಶದ ನರಸರಾವ್‌ಪೇಟೆ ಲೋಕಸಭಾ ಚುನಾವಣೆಯನ್ನು ಮುಂದೂಡಲಾಗಿದೆ.

ಆ.29ರಂದು ಸಂಭವಿಸಿದ ಬಾಂಬ್‌ಸ್ಫೋಟದಲ್ಲಿ ಪಕ್ಷೇತರ ಅಭ್ಯರ್ಥಿಯೊಬ್ಬರು ಸೇರಿದಂತೆ ನಾಲ್ವರು ಸತ್ತಿದ್ದರು. ಆ ಪ್ರದೇಶದಲ್ಲಿ ಭಾರೀ ಪ್ರಮಾಣದಲ್ಲಿ ಬಾಂಬ್ ಮತ್ತು ಸ್ಫೋಟಕಗಳು ಪತ್ತೆಯಾದ ಹಿನ್ನೆಲೆಯಲ್ಲಿ ಚುನಾವಣಾ ಆಯೋಗವು ಈ ಕ್ರಮ ತೆಗೆದುಕೊಂಡಿದೆ.

50 ವರ್ಷಗಳ ಹಿಂದೆ

ಭಾನುವಾರ, 01-09-1974

- **ಉಪರಾಷ್ಟ್ರಪತಿಯಾಗಿ ಜತ್ತಿ ಪ್ರಮಾಣ**

ನವದೆಹಲಿ. ಆ.30– ಭಾರತದ ನೂತನ ಉಪರಾಷ್ಟ್ರಪತಿಯಾಗಿ ಶ್ರೀ ಬಸಪ್ಪ ದಾನಪ್ಪ ಜತ್ತಿ ಅವರು ಇಂದು ಬೆಳಿಗ್ಗೆ ಪ್ರಮಾಣವಚನ ಸ್ವೀಕರಿಸಿದರು.

ರಾಷ್ಟ್ರಪತಿಭವನದ ಆಶೋಕ ಸಭಾಂಗಣದಲ್ಲಿ ನಡೆದ ಸರಳ ಸಮಾರಂಭದಲ್ಲಿ ರಾಷ್ಟ್ರಪತಿ ಫಕ್ರುದ್ದೀನ್ ಆಲೀ ಅಹಮದ್ ಅವರು ಜತ್ತಿ ಅವರಿಗೆ ಪ್ರಮಾಣವಚನ ಉಪದೇಶಿಸಿದರು.

ಅನೇಕಮಂದಿ ಸಂಸತ್ ಸದಸ್ಯರ ಜತೆಗೆ ಪ್ರಧಾನಿ ಇಂದಿರಾಗಾಂಧಿ ಅವರ ಸಂಪುಟದ ಸಹೋದ್ಯೋಗಿಗಳು ಸೇನೆ ಹಾಗೂ ಹಿರಿಯ ಅಧಿಕಾರಿಗಳು ಸಮಾರಂಭದಲ್ಲಿ ಹಾಜರಿದ್ದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಭಾನುವಾರ ಸೆಪ್ಟೆಂಬರ್ 1, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ಚತುರ್ದಶಿ ಗಂ. 29-22 ನಕ್ಷತ್ರ: ಆಶ್ಲೇಷ ಗಂ. 21-49 ಯೋಗ: ಪರಿಘ ಗಂ. 17-50 ಕರಣ: ವಿಷ್ಟಿ ಗಂ. 16-29, ಸಿಂಹ ಮಾಸದ 15 ನೇ ದಿನ, ಮಳೆನಕ್ಷತ್ರ: ಪೂರ್ವಫಲ್ಗುಣಿ 1.
ರಾಹುಕಾಲ: ಸಾಯಂಕಾಲ 04-30 – 06-00
ಸೂರ್ಯೋದಯ: 06-23 ಸೂರ್ಯಾಸ್ತ: 06-38
ಮುಸ್ಲಿಂ ದಿನಾಂಕ: 27 ಸಫರ್
ಅದೃಷ್ಟ ಸಂಖ್ಯೆ: 2, 9

ಮೇಷ: ಆತುರದ ಸ್ವಭಾವವನ್ನು ಕೊಂಚ ಸುಧಾರಿಸಿಕೊಂಡು ಮತ್ತೊಬ್ಬರ ಭಾವನೆಗಳಿಗೆ ಹೇಗೆ ಪ್ರತಿಕ್ರಿಯಿಸಬೇಕೆಂಬುದನ್ನು ತಿಳಿದುಕೊಂಡರೆ ಉತ್ತಮ ವ್ಯಕ್ತಿಯಾಗುವಿರಿ. ಲೇವಾದೇವಿ ವ್ಯವಹಾರಗಳು ಮುಂದುವರಿಯುವುದು.

ವೃಷಭ: ಕಷ್ಟ–ಕಾರ್ಪಣ್ಯಗಳ ಜೀವನವನ್ನು ಈಗಷ್ಟೇ ಕಳೆದ ನಿಮಗೆ ಈಗ ಮಗನು ಹೊಸ ತಲೆನೋವನ್ನು ತರುವಂತಹ ಸಾಧ್ಯತೆ ಇದೆ. ಈ ಮಾಸದ ಪ್ರಯುಕ್ತವಾಗಿ ದಾನ ಧರ್ಮದಂತಹಾ ಉತ್ತಮ ಕಾರ್ಯಗಳನ್ನು ಮಾಡುವಿರಿ.

ಮಿಥುನ: ವಾಹನ ಮಾರಾಟದ ಯೋಚನೆಯನ್ನು ಸದ್ಯದ ಮಟ್ಟಿಗೆ ಕೈಬಿಡುವುದೇ ಸರಿಯಾದ ಮಾರ್ಗ. ನಿಮಗಿರುವ ಶತ್ರು ಬಾಧೆ ಈ ದಿನದಿಂದ ಹಂತ ಹಂತವಾಗಿ ನಿವಾರಣೆ ಆಗಲಿದೆ. ಮಕ್ಕಳ ಉನ್ನತಿಯನ್ನು ಕಾಣುವಿರಿ.

ಕರ್ಕಾಟಕ: ಮಹತ್ತರವಾದುದನ್ನು ಸಾಧಿಸಲಿಕ್ಕಾಗಿ ಕುಟುಂಬ ಹಾಗೂ ಸ್ವಸ್ಥಾನದಿಂದ ದೂರವಾಗುವ ಸಾಧ್ಯತೆಗಳಿವೆ. ವೈಯಕ್ತಿಕ ಮನೋಭಾವವನ್ನು ಬದಲಿಸಿಕೊಳ್ಳುವಿರಿ. ರಾಜಕೀಯದಲ್ಲಿ ವಿಶೇಷ ಪ್ರಭಾವ ಗಳಿಸಿಕೊಳ್ಳುವಿರಿ.

ಸಿಂಹ: ಉಳಿಸಿಕೊಂಡಿರುವ ಸರ್ಕಾರಿ ಕೆಲಸಗಳನ್ನು ಆದಷ್ಟು ಬೇಗ ಪೂರ್ಣಗೊಳಿಸಿಕೊಳ್ಳುವ ಯೋಚನೆಯನ್ನು ಮಾಡಿ. ಕುಟುಂಬದಲ್ಲಿನ ನೂತನ ಶಿಶುವಿನ ಜನನ ಕುಟುಂಬದ ಸರ್ವರ ಸಂತೋಷಕ್ಕೆ ಕಾರಣವಾಗುತ್ತದೆ.

ಕನ್ಯಾ: ಜವಳಿ ಮಾರಾಟಗಾರರು ಹೊಸ ದಾಸ್ತಾನು ತರಲು ಒಪ್ಪಂದಗಳನ್ನು ಮಾಡಿಕೊಳ್ಳಬಹುದು. ನಿಮ್ಮನ್ನು ಅವಲಂಬಿಸಿಕೊಂಡು ಕೆಲಸ ಮಾಡುತ್ತಿರುವವರ ಕಡೆಗಣನೆ ಸರಿಯಲ್ಲ. ಹೊಸತನದಲ್ಲಿ ಜಯ ಕಾಣುವಿರಿ.

ತುಲಾ: ನಿಮ್ಮ ಹೊಸ ಜವಾಬ್ದಾರಿಗಳು ನೀವು ಅಂದುಕೊಂಡಷ್ಟು ಸುಲಭವಾದದ್ದಲ್ಲದೇ ಇರುವುದರಿಂದ ಹೊಂದಿಕೊಳ್ಳಲು ಅಧಿಕ ಪರಿಶ್ರಮ ಬೇಕಾಗುತ್ತದೆ. ಮನೆಯಲ್ಲಿ ಸೌಹಾರ್ದಯುತವಾದ ವಾತಾವರಣ ಸೃಷ್ಟಿಯಾಗಲಿದೆ.

ವೃಶ್ಚಿಕ: ಮಕ್ಕಳ ಆರೋಗ್ಯದ ಏರುಪೇರಿನಿಂದಾಗಿ ನಿಮಗೆ ಮಾನಸಿಕವಾಗಿ ಕಿರಿಕಿರಿ ಉಂಟಾಗಲಿದೆ. ಚರ್ಮಕ್ಕೆ ಸಂಬಂಧಿಸಿದ ಅಪರೂಪದ ಕಾಯಿಲೆ ಕಾಣಿಸಿಕೊಳ್ಳುವ ಸಾಧ್ಯತೆ ಇದೆ. ಆರ್ಥಿಕ ಸ್ಥಿತಿ ಸುಧಾರಿಸುವುದು.

ಧನು: ಅರಿಷಡ್ವರ್ಗಗಳ ನಿವಾರಣೆಗಾಗಿ ಅಧಿಕ ಮಟ್ಟದಲ್ಲಿ ಸಾಧನೆ ಮಾಡಲು ಪ್ರಾರಂಭಿಸಬಹುದು. ಶ್ರೀಕೃಷ್ಣನ ಸ್ಮರಣೆಯನ್ನು ನಿರಂತರವಾಗಿ ಮಾಡುವುದರಿಂದ ಸಕಲ ದುರಿತಗಳು ದೂರವಾಗುವುದು.

ಮಕರ: ಅಧಿಕ ತಂಡಿಯ ವಾತವರಣದಿಂದಾಗಿ ಮನೆಯಲ್ಲಿನ ಸೂಕ್ಷ್ಮ ವ್ಯಕ್ತಿಯ ನಿಗಾವಹಿಸುವುದು ನಿಮ್ಮ ಪ್ರಮುಖ ಕಾರ್ಯವಾಗುವುದು. ಪ್ರಾಧ್ಯಾಪಕರಿಗೆ ಮತ್ತು ತಾಂತ್ರಿಕ ವಿಷಯಗಳ ಸಲಹೆಗಾರರಿಗೆ ಇದು ಶುಭ ದಿನವಾಗಿದೆ.

ಕುಂಭ: ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದಲ್ಲಿ ಉತ್ತಮವಾದ ಯಶಸ್ಸು ಪ್ರಾಪ್ತಿ. ಶಸ್ತ್ರ ಚಿಕಿತ್ಸಾ ವೈದ್ಯರಿಗೆ ರೋಗಿಯ ಕುಟುಂಬಸ್ಥರ ಕಡೆಯಿಂದ ಪ್ರಶಂಸೆಯ ಮಾತುಗಳು ಕೇಳಿ ಬರುವುದು. ಕುಟುಂಬದ ಸಂತೋಷ ವೃದ್ಧಿಯಾಗುವುದು.


ಮೀನ: ಇಷ್ಟವಿಲ್ಲದ ಸಂಬಂಧವನ್ನು ಹೊತ್ತು ತಂದ ಮಗಳ ಮೇಲೆ ಕೋಪ ಸಹಜವಾದರು ಜೀವನ ಆಕೆಯದ್ದು ಎಂಬುವುದನ್ನು ಅರ್ಥೈಸಿಕೊಳ್ಳುವುದು ಸೂಕ್ತ. ನಿಸ್ವಾರ್ಥ, ತ್ಯಾಗದ ಮನೋಭಾವ ಬೆಳೆಸಿಕೊಳ್ಳುವಿರಿ.

ಪದಬಂಧ 5790

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಬಾಣ ಬಿದ್ದಿರುವ ಸಮುದ್ರ! (3)
3.ಪ್ರಶಸ್ತ ಸಮಯದಲ್ಲಿ ನಡೆದ ಶುಭ ಸಮಾರಂಭ (2)
5.ಶಾಶ್ವತವಾದ ನೆಮ್ಮದಿ (4)
6.ಸಲೀಸಾಗಿ ಹಿಡಿದಿಟ್ಟಿರುವ ನೀರು (3)
7.ರಾಮನ ಮಗನಿವನು (2)
9.ಗದುಗಿನ ನಾರಾಣಪ್ಪನವರ ಕಾವ್ಯನಾಮ (5)
11.ತಮ್ಮ ಬಂದಾಗ ಆವರಿಸಿದ ಕತ್ತಲು (2)
13.ಪಾಂಡುರಾಜನ ತಮ್ಮ (3)
14.ಸಿದ್ಧಯ್ಯ ಪುರಾಣಿಕರ ಕಾವ್ಯನಾಮ (4)
15.ಕಿವಿಗೆ ಇಂಪಾದುದು (2)
16.ಪಚ್ಚೆಯ ಬಣ್ಣ(3)

ಮೇಲಿಂದ ಕೆಳಕ್ಕೆ
2.ಮನೆತನದ ಉದ್ಯೋಗವಿಲ್ಲಿ ಉಲ್ಟಾ ಕಾಣುತ್ತಿದೆ (5)
3.ಮಾಡಿದ ಕಾರ್ಯಕ್ಕೆ ದೊರೆತ ಲಾಭ (4)
4.ನಂಬಿದವರಿಗೆ ಮಾಡುವ ದ್ರೋಹ (5)
5.ಜ್ಞಾನಪೀಠ ಪ್ರಶಸ್ತಿ ಪಡೆದ ಮಾಸ್ತಿಯವರ ಐತಿಹಾಸಿಕ ಕಾದಂಬರಿ (7)
8.ವಜ್ರಗಳನ್ನು ಕುಂದಣಿಸಿದಕಿರೀಟ (5)
10.ಮಧುರವಾದ ಸ್ವಪ್ನ (5)
12.ಶ್ರೇಷ್ಠವಾದ ಕಾವ್ಯವಿದು (4)



5789ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿಶ್ವಾಸ 3.ಸಾರಾಂಶ 6.ದರ್ಬಾರು 7.ರಥಾಂಗ 8.ಕುಟೀರ 9.ಪಾರ್ಥಿವ 10.ಗಡಸು 12.ಸಂಗಾತಿ 16.ಅಸುರ 17.ನಿಕ್ಷೇಪ 18.ಬರ್ಬರ 19.ಟಮಾಳ 20.ಸಪ್ತಾಹ

ಮೇಲಿಂದ ಕೆಳಕ್ಕೆ:
1.ವಿಶ್ವಕುಟುಂಬಿ 2.ಸದರ 3.ಸಾರುವೆ 4.ಶರಣಾರ್ಥಿ 5.ಅಂಗಡಿ 9.ಪಾಸು 10.ಗತಿ 11.ಸಮರಸಿಂಹ 13.ಗಾಳಿಪಟ 14.ವನಿತೆ 15.ಸಿಂಬಳ 16.ಅರಸ

ಸುಡೊಕು 6175

4		7		8			2	
	3							
6		5		9		4	1	
	2		6				3	5
5			2		1	8		
	1				9		4	2
	6			2		3		
		8	9				5	7
	5			3	4		9	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6174 ಸುಡೊಕು

1	8	3	5	2	6	9	4	7
2	9	5	3	4	7	1	8	6
7	6	4	9	8	1	5	2	3
9	1	6	4	7	5	2	3	8
3	4	7	2	9	8	6	1	5
5	2	8	6	1	3	7	9	4
8	3	1	7	5	9	4	6	2
6	5	2	1	3	4	8	7	9
4	7	9	8	6	2	3	5	1

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬಳ್ಳಾರಿ ಜೈಲು ಪರಿಶೀಲಿಸಿದ ಕಾರಾಗೃಹ ಇಲಾಖೆ ಉತ್ತರ ವಲಯದ ಡಿಐಜಿ ಟಿ.ಪಿ.ಶೇಷ

ಶೌಚಕ್ಕೆ 'ಸರ್ಜಿಕಲ್ ಚೇರ್' ಕೋರಿದ ದರ್ಶನ್

ಪ್ರಜಾವಾಣಿ ವಾರ್ತೆ

ಬಳ್ಳಾರಿ: ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿ ನಟ ದರ್ಶನ್ ಅವರು ಶೌಚಕ್ಕಾಗಿ 'ಸರ್ಜಿಕಲ್ ಚೇರ್' ಒದಗಿಸಲು ಮನವಿ ಮಾಡಿದ್ದಾರೆ. ಬೆನ್ನೆಲುಬು (ಎಲ್–5) ಸಮಸ್ಯೆಯಿರುವ ಕಾರಣ ಶೌಚಕ್ಕೆ ಕಷ್ಟವಾಗುತ್ತಿದೆ ಎಂದಿದ್ದಾರೆ.

ಬಳ್ಳಾರಿ ಕೇಂದ್ರ ಕಾರಾಗೃಹಕ್ಕೆ ಶನಿವಾರ ಭೇಟಿ ನೀಡಿ, ಪರಿಶೀಲಿಸಿದ ಸಂದರ್ಭದಲ್ಲಿ ಕಾರಾಗೃಹ ಇಲಾಖೆಯ ಉತ್ತರ ವಲಯ ಉಪ ಮಹಾನಿರೀಕ್ಷಕ ಟಿ.ಪಿ.ಶೇಷ ಅವರು ದರ್ಶನ್ ಬೇಡಿಕೆಯನ್ನು ಖಚಿತ ಪಡಿಸಿದರು.

'ಆಹಾರ ಸೇವಿಸದಿರುವ ಬಗ್ಗೆ ಕಾರಣ ಕೇಳಿದಾಗ, ಜೈಲಿನಲ್ಲಿ ಇಂಡಿಯನ್ ಟಾಯ್ಲೆಟ್ ಇದೆ. ಬೆನ್ನೆಲುಬು (ಎಲ್–5) ಸಮಸ್ಯೆ ಕಾರಣ ಶೌಚಕ್ಕೆ ಕಷ್ಟವಾಗುತ್ತದೆ ಎಂದು ದರ್ಶನ್ ಹೇಳಿದರು. ವೆಸ್ಟರ್ನ್ ಕಮೋಡ್ (ಪಾಶ್ಚಾತ್ಯ ಮಾದರಿ ಶೌಚಾಲಯ) ಅಥವಾ ಸರ್ಜಿಕಲ್ ಚೇರ್‌ಗೆ ಕೋರಿದರು. ಆ ಸೌಲಭ್ಯ ನೀಡಲು ವೈದ್ಯಕೀಯ ದಾಖಲೆ ಕೊಡಲು ತಿಳಿಸಲಾಗಿದೆ. ಅವರ ರಕ್ತ ಸಂಬಂಧಿಕರು ಮತ್ತು ವಕೀಲರು ಹೊರತುಪಡಿಸಿ ಬೇರೆ ಯಾರಿಗೂ ದರ್ಶನ್ ಅವರನ್ನು ನೋಡಲು ಅವಕಾಶ ನೀಡುವುದಿಲ್ಲ' ಎಂದು ಅವರು ಅವರು ಸುದ್ದಿಗಾರರಿಗೆ ತಿಳಿಸಿದರು.


ಬಳ್ಳಾರಿ ಕಾರಾಗೃಹದಲ್ಲಿ ನಟ ದರ್ಶನ್ ಶನಿವಾರ ತಮ್ಮ ಪತ್ನಿ ವಿಜಯಲಕ್ಷ್ಮಿ ಅವರನ್ನು ಭೇಟಿಯಾಗಲು ಪೊಲೀಸ್ ಸಿಬ್ಬಂದಿ ಜತೆ ಸಮಾಲೋಚನಾ ಕೊಠಡಿಗೆ ತೆರಳಿದರು

'ದರ್ಶನ್ ಟಿ.ವಿ ಕೇಳಿದರೆ ಕೊಡಲಾಗುವುದು. ಇತರ ಕೈದಿಗಳಿಗೂ ಈ ವ್ಯವಸ್ಥೆ ಇದೆ. ವಿಶೇಷ ಭದ್ರತಾ ಜೈಲಿನಲ್ಲಿ 15 ಸೆಲ್‌ಗಳಿವೆ. ದರ್ಶನ್ ಸೇರಿ ನಾಲ್ಕು ಕೈದಿಗಳನ್ನು ಅಲ್ಲಿ ಪ್ರತ್ಯೇಕವಾಗಿ ಇರಿಸಲಾಗಿದೆ. ಅದಕ್ಕೆ 3 ಸಿಸಿಟಿವಿ ಕ್ಯಾಮೆರಾ ಇವೆ. ದರ್ಶನ್ ಕೊಠಡಿ ಬಳಿಗೆ ಹೋಗುವ ಸಿಬ್ಬಂದಿ ಬಾಡಿವೋರ್ನ್ ಕ್ಯಾಮೆರಾ ಧರಿಸುವುದು ಕಡ್ಡಾಯ. ಅಲ್ಲಿಯ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಸಂಗ್ರಹಿಸಿಡಲು ಸೂಚಿಸಿರುವೆ' ಎಂದು ತಿಳಿಸಿದರು.

'ದರ್ಶನ್‌ಗೆ ಎಲ್ಲ ವ್ಯವಸ್ಥೆ ಮಾಡಿಕೊಡಲು ಯಾವ ರಾಜಕಾರಣಿಯೂ ಹೇಳಿಲ್ಲ. ರಾಜಕೀಯ ಒತ್ತಡಕ್ಕೆ ನಾನು ಮಣಿಯೊಲ್ಲ. ಒಂದುವೇಳೆ ಯಾರಾದರೂ ನನಗೆ



ದರ್ಶನ್ ಮೇಲೆ ಹೇಗೆ ನಿಗಾ ವಹಿಸಬೇಕೆಂದು ಜೈಲು ಅಧಿಕಾರಿಗಳಿಗೆ ಸೂಚಿಸಿದ್ದೆ. ಸೂಚನೆ ಸಮರ್ಪಕವಾಗಿ ಪಾಲನೆ ಆಗುತ್ತಿದೆ

ಟಿ.ಪಿ.ಶೇಷ, ಉಪಮಹಾನಿರೀಕ್ಷಕ, ಕಾರಗೃಹ ಇಲಾಖೆ ಉತ್ತರ ವಲಯ

ಸೂಚಿಸಿದರೆ, ಅವರ ವಿರುದ್ಧ ಪ್ರಕರಣ ದಾಖಲಿಸುವೆ' ಎಂದರು.

'ಜೈಲಿನಲ್ಲಿ ಮೊಬೈಲ್ ಒಯ್ಯಲು ಸಿಬ್ಬಂದಿ ಸೇರಿ ಯಾರಿಗೂ ಅವಕಾಶವಿಲ್ಲ. ಬಳ್ಳಾರಿ ಜೈಲಿನಲ್ಲಿ ಮೊಬೈಲ್ ಜಾಮಾರ್ ಇಲ್ಲ. ಅತ್ಯಾಧುನಿಕ ಜಾಮರ್ ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ' ಎಂದರು.

ಗೂಗಲ್ ಅರ್ಥ್ ಬಳಸದಿರಿ: 'ಕೆಲ ಮಾಧ್ಯಮದವರು ಈಚೆಗೆ 'ಗೂಗಲ್ ಅರ್ಥ್' ನೆರವಿನಿಂದ ಬಳ್ಳಾರಿ ಜೈಲಿನ ಭಾಗಗಳನ್ನು ತೋರಿಸಿದ್ದಾರೆ. ಇದರಿಂದ ಭದ್ರತೆಗೆ ದಕ್ಕೆಯಾಗಲಿದೆ. ಯಾರೂ ಗೂಗಲ್ ಅರ್ಥ್ ಚಿತ್ರ ಬಳಸಿ ಬಳ್ಳಾರಿ ಜೈಲಿನ ಮಾಹಿತಿ ತೋರಿಸಬಾರದು' ಎಂದು ತಾಕೀತು ಮಾಡಿದರು.

ವಿಜಯಲಕ್ಷ್ಮಿ ಭೇಟಿ

ದರ್ಶನ್ ಪತ್ನಿ ವಿಜಯಲಕ್ಷ್ಮಿ ಶನಿವಾರ ಸಂಜೆ 4.15ಕ್ಕೆ ಬಳ್ಳಾರಿ ಜೈಲಿಗೆ ಭೇಟಿ ನೀಡಿದರು. ಜೊತೆಗೆ ಬಟ್ಟೆ, ತಿಂಡಿ ತಿನಿಸುಗಳುಳ್ಳ ಮೂರು ಬ್ಯಾಗ್‌ಗಳನ್ನು ತಂದರು. ದರ್ಶನ್ ಜೊತೆ ಅರ್ಧ ಗಂಟೆ ಚರ್ಚಿಸಿ, ಸಂಜೆ 5.39ಕ್ಕೆ ಜೈಲಿನಿಂದ ನಿರ್ಗಮಿಸಿದರು. ಸುದ್ದಿಗಾರರ ಜೊತೆ ಮಾತನಾಡಲಿಲ್ಲ. ಈ ವೇಳೆ ದರ್ಶನ್ ವಕೀಲರ ತಂಡವೂ ಜೊತೆಯಿತ್ತು. ವಿಜಯಲಕ್ಷ್ಮಿ ಬಂದಿದ್ದು ಗೊತ್ತಾದ ಕೂಡಲೇ ಕಾರಾಗೃಹದ ಸುತ್ತಮುತ್ತ ಅಭಿಮಾನಿಗಳ ದಂಡೇ ಜಮಾಯಿಸಿತ್ತು.


ಬಳ್ಳಾರಿ ಕಾರಾಗೃಹದಲ್ಲಿ ದರ್ಶನ್ ಭೇಟಿಯಾಗಲು ಬಂದ ವಿಜಯಲಕ್ಷ್ಮಿ

ಕಲಬುರಗಿ ಜೈಲಿಗೆ ನಾಗರಾಜ್

ಕಲಬುರಗಿ: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿ, ನಟ ದರ್ಶನ್ ಮ್ಯಾನೇಜರ್ ನಾಗರಾಜ್‌ನನ್ನು ಕಲಬುರಗಿ ಕೇಂದ್ರ ಕಾರಾಗೃಹಕ್ಕೆ ಶನಿವಾರ ಸ್ಥಳಾಂತರಿಸಲಾಯಿತು.

ಆರೋಗ್ಯ ತಪಾಸಣೆ ಮಾಡಿ, ಕಾನೂನು ಪ್ರಕ್ರಿಯೆ ಪೂರ್ಣಗೊಳಿಸಿ ಸೆಲ್ ನಂಬರ್ 14ರಲ್ಲಿ ಇರಿಸಿ 2394 ವಿಚಾರಣಾಧೀನ ಕೈದಿ ಸಂಖ್ಯೆ ನೀಡಲಾಗಿದೆ.

ವಿಜಯಪುರ ಜೈಲು ಸೇರಿದ ವಿನಯ್

ವಿಜಯಪುರ: ರೇಣುಕಸ್ವಾಮಿ ಕೊಲೆ ಪ್ರಕರಣದ 10ನೇ ಆರೋಪಿ, ನಟ ದರ್ಶನ್ ಆಪ್ತ ವಿನಯ್‌ಗೆ ಬೆಂಗಳೂರಿನಿಂದ ಶನಿವಾರ ಮಧ್ಯಾಹ್ನ 2ಕ್ಕೆ ವಿಜಯಪುರ ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರಿಸಲಾಯಿತು. ಆರೋಗ್ಯ ತಪಾಸಣೆ ಮತ್ತು ಕಾನೂನು ಪ್ರಕ್ರಿಯೆ ನಡೆದವು.

'ಕಾರಾಗೃಹದ ಸೆಲ್ ನಂಬರ್ 1ರಲ್ಲಿ ಆರೋಪಿ ವಿನಯ್‌ಗೆ ಇರಿಸಿ, ವಿಚಾರಣಾಧೀನ ಕೈದಿ ಸಂಖ್ಯೆ 14433 ನೀಡಲಾಗಿದೆ. ಸೆಲ್‌ನಲ್ಲಿ ಶೌಚಾಲಯ ಸೌಲಭ್ಯ ಇದೆ. ಸಿಸಿಟಿವಿ ಕ್ಯಾಮೆರಾ ಕಣ್ಗಾವಲು ಇದೆ. ಇಬ್ಬರು ಸಿಬ್ಬಂದಿಯನ್ನು ಭದ್ರತೆಗೆ ನಿಯೋಜಿಸಲಾಗಿದೆ. ವಾರದಲ್ಲಿ ಒಮ್ಮೆ ಕುಟುಂಬಸ್ಥರಿಗೆ ಮತ್ತು ಅವರ ಪರ ವಕೀಲರಿಗೆ ಭೇಟಿಗೆ ಅವಕಾಶ ಕಲ್ಪಿಸಲಾಗುವುದು' ಎಂದು ಜೈಲು ಅಧೀಕ್ಷಕ ಐ.ಜೆ.ಮ್ಯಾಗೇರಿ 'ಪ್ರಜಾವಾಣಿ'ಗೆ ತಿಳಿಸಿದರು.

6,346 ಗ್ರಾ.ಪಂ. ಸದಸ್ಯರಿಗೆ ಅಕ್ಷರಾಭ್ಯಾಸ: ಪ್ರಿಯಾಂಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮ ಪಂಚಾಯಿತಿಗಳ 6,346 ಅನಕ್ಷರಸ್ಥ ಚುನಾಯಿತ ಪ್ರತಿನಿಧಿಗಳನ್ನು ಸಾಕ್ಷರರನ್ನಾಗಿಸುವ 'ಸಾಕ್ಷರ ಸನ್ಮಾನ' ಕಾರ್ಯಕ್ರಮವು ಭಾನುವಾರದಿಂದ (ಸೆ.1) ಆರಂಭವಾಗಲಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

'ಗ್ರಾಮ ಪಂಚಾಯಿತಿಗಳಲ್ಲಿ 94,775 ಚುನಾಯಿತ ಪ್ರತಿನಿಧಿಗಳಿದ್ದು, ಅವರಲ್ಲಿ 9,357 ಮಂದಿ ಅನಕ್ಷರಸ್ಥ ರಿದ್ದರು. ಇವರನ್ನು ಸಾಕ್ಷರರನ್ನಾಗಿಸುವ ಮೊದಲ ಹಂತದ ಕಾರ್ಯಕ್ರಮ ಹಿಂದಿನ ವರ್ಷದಲ್ಲಿ ನಡೆದಿತ್ತು. ಆಗ 2,403 ಮಹಿಳೆಯರು ಮತ್ತು 608 ಪುರುಷರು ಸೇರಿ ಒಟ್ಟು 3,011 ಪ್ರತಿನಿಧಿಗಳಿಗೆ ತರಬೇತಿ ನೀಡಲಾಗಿತ್ತು. ಎರಡನೇ ಹಂತದ ಕಾರ್ಯಕ್ರಮ ಈಗ ಆರಂಭವಾಗಲಿದೆ' ಎಂದು ಮಾಹಿತಿ ನೀಡಿದರು.


'21 ಜಿಲ್ಲೆಗಳಲ್ಲಿ ಅಕ್ಟೋಬರ್ 20ರವರೆಗೆ, ಪ್ರತಿದಿನ 2 ಗಂಟೆಗಳಂತೆ 50 ದಿನ ಒಟ್ಟು 100 ಗಂಟೆ ತರಬೇತಿ ನೀಡಲಾಗುತ್ತದೆ' ಎಂದರು.

'ಈ ಸದಸ್ಯರಿಗೆ ಓದು–ಬರಹ ಕಲಿಸಲಾಗುವುದು. ಸಭಾ ನೋಟಿಸ್, ನಡಾವಳಿ ಮತ್ತು ಮಾರ್ಗಸೂಚಿ ಸ್ವತಃ ಓದಿ ಅರ್ಥಮಾಡಿಕೊಳ್ಳುವಂತೆ ಸಜ್ಜುಗೊಳಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶ' ಎಂದರು.



'ಸಾಕ್ಷರ ಸನ್ಮಾನ' ಅಕ್ಷರಾಭ್ಯಾಸ ಕಾರ್ಯಕ್ರಮದಲ್ಲಿ ಭಾಗಿಯಾಗುವವರಿಗೆ ತರಬೇತಿ ಕಿಟ್ ಮತ್ತು ಗೌರವಧನ, ಬೋಧಕರಿಗೆ ಗೌರವಧನ ನೀಡಲಾಗುತ್ತದೆ

ಪ್ರಿಯಾಂಕ್ ಖರ್ಗೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ



ಕಾಳಿ ನದಿ: ಇನ್ನೂ ತೆರವಾಗದ ಅವಶೇಷ

ಘಟನೆ ನಡೆದು ತಿಂಗಳು ಸಮೀಪಿಸಿದರೂ ನೆರವೇರದ ಕಾರ್ಯಾಚರಣೆ

● ಗಣಪತಿ ಹೆಗಡೆ

ಕಾರವಾರ: ಕಾಳಿನದಿಯ ಹಳೆ ಸೇತುವೆ ಕುಸಿದು ಬಿದ್ದು ತಿಂಗಳು ಸಮೀಪಿಸುತ್ತಿದ್ದರೂ ಅದರ ಅವಶೇಷ ತೆರವು ಆಗಿಲ್ಲ. ಮುರಿದು ಬಿದ್ದ ಸೇತುವೆಯು ಜನರಲ್ಲಿ ಭೀತಿ ಸೃಷ್ಟಿಸುವ ಜತೆಗೆ ನದಿಯಲ್ಲಿ ಮೀನುಗಾರಿಕೆಗೆ ಅಡ್ಡಿಯಾಗಿದೆ.

ಸಂಚಾರಕ್ಕೆ ಆಸರೆಯಾದ ಹೊಸ ಸೇತುವೆ ಮೇಲೆ ವಾಹನ ದಟ್ಟಣೆ ಹೆಚ್ಚಿದೆ. ಪಕ್ಕದಲ್ಲೇ ಮುರಿದು ಬಿದ್ದ ಹಳೆಯ ಸೇತುವೆಯತ್ತ ಸವಾರರ ದೃಷ್ಟಿ ಹರಿಯುತ್ತಿದೆ. ಮತ್ತೊಂದು ಅವಘಡ ಸಂಭವಿಸುವುದೇ ಎಂಬ ಆತಂಕದಲ್ಲಿ ಸಾಗುತ್ತಾರೆ.

1983ರಲ್ಲಿ ಉದ್ಘಾಟನೆಗೊಂಡಿದ್ದ ಸೇತುವೆಯು, ಆಗಸ್ಟ್ 6ರ ತಡರಾತ್ರಿ ಲಾರಿ ಸಮೇತ ಕುಸಿದು ಬಿತ್ತು. 665 ಮೀಟರ್ ಉದ್ದದ ಸೇತುವೆಯಲ್ಲಿ 300 ಮೀ.ನಷ್ಟು ಭಾಗ ಕುಸಿದು ನದಿಗೆ ಬಿದ್ದಿದೆ. ವ್ಯಾಪಕ ಪ್ರಮಾಣದ ಕಾಂಕ್ರೀಟ್ ಸ್ಲ್ಯಾಬ್, ಸೇತುವೆಗೆ ಅಳವಡಿಸಿದ್ದ ಕೇಬಲ್, ಡಾಂಬರು ರಸ್ತೆ, ಕಬ್ಬಿಣದ ಸರಳು ನದಿಯಲ್ಲಿ ಸಿಲುಕಿಕೊಂಡಿವೆ.

'ಹಳೆಯ ಸೇತುವೆಯ ಅರ್ಧಕ್ಕೂ ಹೆಚ್ಚು ಭಾಗ ಕುಸಿಯದೆ ನಿಂತಿದ್ದು, ಯಾವುದೇ ಕ್ಷಣ ಕುಸಿದು ಬೀಳಬಹುದು. ಈ ಸೇತುವೆ ಕುಸಿದರೆ ಪಕ್ಕದ ಹೊಸ ಸೇತುವೆಗೆ ಧಕ್ಕೆ ಆಗಬಹುದು. ಆದಷ್ಟು ಬೇಗ ಕುಸಿದು ಬಿದ್ದ ಸೇತುವೆಯ ಅವಶೇಷ, ಹಳೆಯ ಸೇತುವೆ ಭಾಗ ತೆರವುಗೊಳಿಸುವುದು ಸೂಕ್ತ' ಎಂದು ಸ್ಥಳೀಯರಾದ ರೂಪೇಶ ಕೊಠಾರಕರ್ ತಿಳಿಸಿದರು.

'ಸೇತುವೆ ನಿರ್ಮಾಣದ ವೇಳೆ ಅಳವಡಿಸಿದ್ದ ಸಣ್ಣ ಕೇಬಲ್ ರಾಶಿಗಳು ಜೋತಾಡುತ್ತಿರುವ ಕಾರಣ ದೋಣಿಗಳು ಸುಗಮವಾಗಿ ಸಾಗಲು ಆಗುತ್ತಿಲ್ಲ. ಸೇತುವೆಯ ಉಳಿದ ಭಾಗ ಕುಸಿದು ಬೀಳುವ ಆತಂಕದಿಂದ ಮೀನುಗಾರರು ಸಮೀಪ ಸಾಗಲು ಭಯಪಡುತ್ತಾರೆ' ಎಂದು ಮೀನುಗಾರ ಮುಖಂಡ ರವಿ ತಾರಿ 'ಪ್ರಜಾವಾಣಿ'ಗೆ ತಿಳಿಸಿದರು.


ಕಾರವಾರದ ಕಾಳಿನದಿಯಲ್ಲಿರುವ ಹಳೆಯ ಸೇತುವೆ ಕುಸಿದು ಬಿದ್ದ ಅವಶೇಷ ಪ್ರಜಾವಾಣಿ ಚಿತ್ರ

ಸೇತುವೆಯ ಅವಶೇಷ ತ್ವರಿತವಾಗಿ ತೆರವುಗೊಳಿಸಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಸೂಚಿಸಲಾಗಿದೆ. ಅವರು ಆದಷ್ಟು ಬೇಗ ಕ್ರಮ ಕೈಗೊಳ್ಳಬಹುದು.

ಕೆ.ಲಕ್ಷ್ಮಿಪ್ರಿಯಾ, ಜಿಲ್ಲಾಧಿಕಾರಿ

'ವಿಲೇವಾರಿಗೆ ಸಿಗದ ಜಾಗ'

'ಸೇತುವೆ ಅವಶೇಷ ತೆರವಿಗೆ ಹೆದ್ದಾರಿ ನಿರ್ಮಾಣದ ಗುತ್ತಿಗೆ ಪಡೆದಿರುವ ಐಆರ್‌ಬಿ ಕಂಪನಿಗೆ ಸೂಚಿಸಲಾಗಿದೆ. ಸೇತುವೆಯ ಉಳಿದ ಭಾಗ ಒಡೆದು ತೆರವಿಗೆ ಅಗತ್ಯ ಉಪಕರಣ, ಅವಶೇಷ ಎತ್ತಿ ಸಾಗಿಸಲು ಕ್ರೇನ್ ಸಹಿತ ಬಾರ್ಜ್ ತರಿಸಲು ಕಂಪನಿ ಪ್ರಕ್ರಿಯೆ ಆರಂಭಿಸಿದೆ. ಆದರೆ, ತೆರವುಗೊಳಿಸಿದ ಅವಶೇಷ ಎಲ್ಲಿ ವಿಲೇವಾರಿ ಮಾಡಬೇಕೆಂದು ಜಿಲ್ಲಾಡಳಿತಕ್ಕೆ ಕೇಳಲಾಗಿದೆ. ಜಾಗ ಇನ್ನೂ ಅಂತಿಮವಾಗಿಲ್ಲ' ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಯೊಬ್ಬರು ತಿಳಿಸಿದರು.

ಕಲ್ಯಾಣ ಕರ್ನಾಟಕದ ವಿವಿಧೆಡೆ ಉತ್ತಮ ಮಳೆ

ಕೊಚ್ಚಿಹೋದ ಹಳ್ಳದ ಸೇತುವೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಕಲ್ಯಾಣ ಕರ್ನಾಟಕದ ಕಲಬುರಗಿ, ರಾಯಚೂರು, ಬೀದರ್, ಯಾದಗಿರಿ ಜಿಲ್ಲೆಯಾದ್ಯಂತ ಶನಿವಾರ ಉತ್ತಮ ಮಳೆಯಾಗಿದೆ.

ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಜಾಲಹಳ್ಳಿಯಲ್ಲಿ ಮಳೆ ಅಬ್ಬರಿಸಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಎದುರಿನ ಹಳ್ಳ ಉಕ್ಕಿ ಹರಿದು ನೆಲಮಟ್ಟದ ಸೇತುವೆ ಕೊಚ್ಚಿಕೊಂಡು ಹೋಗಿದೆ. ಶಾಲೆ ಸಂಪೂರ್ಣ ಜಲಾವೃತಗೊಂಡಿದೆ. ಕೃಷಿ ಜಮೀನುಗಳಿಗೆ ನೀರು ನುಗ್ಗಿದೆ.

ರಾಯಚೂರು ನಗರ, ತಾಲ್ಲೂಕು, ದೇವದುರ್ಗ, ಜಾಲಹಳ್ಳಿ ಹಾಗೂ ಮಾನ್ವಿಯಲ್ಲಿ ಸಾಧಾರಣ ಮಳೆಯಾಗಿದೆ.

ಕಲಬುರಗಿ ನಗರದಲ್ಲಿ ಮಳೆ ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಅಬ್ಬರದಿಂದ ಸುರಿಯಿತು. ಚಿತ್ತಾಪುರ, ಆಳಂದ, ಕಾಳಗಿ, ಚಿಂಚೋಳಿ ತಾಲ್ಲೂಕಿನಲ್ಲಿಯೂ ಉತ್ತಮ ಮಳೆಯಾಗಿದೆ.

ಬೀದರ್, ಹುಲಸೂರ, ಬಸವಕಲ್ಯಾಣ, ಭಾಲ್ಕಿ, ಔರಾದ್, ಹುಮನಾಬಾದ್, ಚಿಟಗುಪ್ಪ, ಕಮಲನಗರ ತಾಲ್ಲೂಕುಗಳಲ್ಲಿ ಮಳೆಯಾಗಿದೆ. ಸತತ ಮಳೆಗೆ ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ.

ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಆಲ್ದಾಳ ಗ್ರಾಮದಲ್ಲಿ 12.1 ಸೆಂ.ಮೀ, ಗುರುಮಠಕಲ್ ತಾಲ್ಲೂಕಿನ ಚಂಡ್ರಿಕಿಯಲ್ಲಿ 9.7 ಸೆಂ.ಮೀ ಮಳೆಯಾಗಿದೆ. ಆಲ್ದಾಳದಲ್ಲಿ ಎರಡು ಮನೆಗಳು ಭಾಗಶಃ ಕುಸಿದಿವೆ. ಶುಕ್ರವಾರ ಮಧ್ಯರಾತ್ರಿ ಧಾರಾಕಾರ ಮಳೆ ಸುರಿದಿದ್ದರಿಂದ ನದಿ, ಹಳ್ಳ, ಕೆರೆ ಪಕ್ಕದ ಜಮೀನುಗಳಿಗೆ ನೀರು ನುಗ್ಗಿದೆ. ಶನಿವಾರ ಬೆಳಿಗ್ಗೆಯಿಂದಲೂ ಜಿಟಿಜಿಟಿ ಮಳೆಯಾಗಿದೆ.


ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಜಾಲಹಳ್ಳಿಯಲ್ಲಿ ಮಳೆಯಿಂದಾಗಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಎದುರಿನ ಹಳ್ಳ ಉಕ್ಕಿ ಹರಿದು ನೆಲಮಟ್ಟದ ಸೇತುವೆ ಕೊಚ್ಚಿಕೊಂಡು ಹೋಗಿದೆ

ಮಡಿಕೇರಿಯಲ್ಲಿ ಬಿರುಸಿನ ಮಳೆ

ಮಡಿಕೇರಿ: ನಗರದಲ್ಲಿ ಶನಿವಾರ ಬಿರುಸಿನ ಮಳೆ ಬಿದ್ದಿತು. ಶುಕ್ರವಾರ ರಾತ್ರಿಯಿಂದಲೇ ಆರಂಭವಾದ ಜೋರು ಮಳೆಯು ಶನಿವಾರ ಬೆಳಿಗ್ಗೆ ಹೊತ್ತಿಗೆ ಮತ್ತಷ್ಟು ಬಿರುಸು ಪಡೆದುಕೊಂಡಿತು.

ಹವಾಮಾನ ಇಲಾಖೆಯು ಕೊಡಗು ಜಿಲ್ಲೆಯಲ್ಲಿ ಭಾರಿ ಮಳೆ ಬೀಳುವ ಮುನ್ಸೂಚನೆ ನೀಡಿದ್ದು, ಆರೆಂಜ್ ಅಲರ್ಟ್ ಘೋಷಿಸಿದೆ.

ಭಾಗಮಂಡಲದಲ್ಲಿ 4 ಸೆಂ.ಮೀ ಹಾಗೂ ಸಂಪಾಜೆಯಲ್ಲಿ 3 ಸೆಂ.ಮೀ. ಮಳೆಯಾಗಿದೆ.

ಉಡುಪಿ, ಮಂಗಳೂರಲ್ಲಿ ಮಳೆ (ಉಡುಪಿ ವರದಿ): ಉಡುಪಿ ಜಿಲ್ಲೆಯಲ್ಲಿ ಶನಿವಾರ ಬಿಟ್ಟು ಬಿಟ್ಟು ಬಿರುಸಿನ ಮಳೆ ಸುರಿಯಿತು. ಮಡಮಕ್ಕಿ ಭಾಗದಲ್ಲಿ ಉತ್ತಮ ಮಳೆಯಾಯಿತು.

ಮಂಗಳೂರು ನಗರದಲ್ಲಿ ಬೆಳಿಗ್ಗೆ 7 ಗಂಟೆ ಸುಮಾರು ಆರಂಭವಾದ ಮಳೆ ಬೆಳಿಗ್ಗೆ 11ರ ವರೆಗೆ ನಿರಂತರವಾಗಿ ಸುರಿಯಿತು.

ತುಂಗಭದ್ರಾ: ನದಿಗೆ ನೀರು ಹರಿಸುವ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ತುಂಗಭದ್ರಾ ಜಲಾಶಯದ ಒಳಹರಿವಿನ ಪ್ರಮಾಣ ಹೆಚ್ಚುತ್ತಿದ್ದು, ಅಣೆಕಟ್ಟೆ ಮತ್ತೊಮ್ಮೆ ತುಂಬುವ ಹಂತಕ್ಕೆ ಬಂದಿದೆ. ಯಾವುದೇ ಕ್ಷಣದಲ್ಲಿ ಅಣೆಕಟ್ಟೆಯಿಂದ ನೀರನ್ನು ನದಿಗೆ ಹರಿಸುವ ಸಾಧ್ಯತೆಯಿದ್ದು, ನದಿ ತೀರದ ನಿವಾಸಿಗಳು ಎಚ್ಚರವಹಿಸಬೇಕು ಎಂದು ತುಂಗಭದ್ರಾ ಮಂಡಳಿ ಸೂಚನೆ ನೀಡಿದೆ.

'ತುಂಗಾ ಮತ್ತು ವರದಾ ನದಿಯಲ್ಲಿ ನೀರಿನ ಹರಿವು ಹೆಚ್ಚಳವಾಗಿರುವ ಪರಿಣಾಮ ಜಲಾಶಯದ ಒಳಹರಿವಿನ ಪ್ರಮಾಣ ಹೆಚ್ಚುತ್ತಿದೆ. ಜಲವಿದ್ಯುದಾಗಾರದಲ್ಲಿ ಹೆಚ್ಚುವರಿ ವಿದ್ಯುತ್ ಉತ್ಪಾದಿಸುವ ಮೂಲಕ 5 ಸಾವಿರ ಕ್ಯುಸೆಕ್ ನೀರನ್ನು ನದಿಗೆ ಹರಿಸಲಾಗುವುದು. ಒಳಹರಿವಿನ ಪ್ರಮಾಣ ಹೆಚ್ಚಾದಲ್ಲಿ ನದಿಗೆ ನೀರು ಹರಿಸುವ ಪ್ರಮಾಣವೂ ಹೆಚ್ಚಬಹುದು' ಎಂದಿದೆ.

ತುಂಗಭದ್ರಾ ಅಣೆಕಟ್ಟೆಯ ಗರಿಷ್ಠ ಮಟ್ಟ 1,633 ಅಡಿಯಿದ್ದು, ಸದ್ಯ ನೀರಿನ ಮಟ್ಟ 1,630.13 ಅಡಿ ಇದೆ. 105.78 ಟಿಎಂಸಿ ಅಡಿ ನೀರು ಸಂಗ್ರಹ ಸಾಮರ್ಥ್ಯದ ಜಲಾಶಯದಲ್ಲಿ ಸದ್ಯ 94.55 ಟಿಎಂಸಿ ಅಡಿ ನೀರು ಸಂಗ್ರಹವಾಗಿದೆ. ರೈತರಿಗೆ ಈಗ ಒಂದು ಬೆಳೆಗೆ ನೀರು ಸಿಗುತ್ತದೆ. ಮಳೆ, ಒಳಹರಿವು ಹೆಚ್ಚಳ ಮುಂದುವರಿದರೆ ಹಾಗೂ ಹಿಂಗಾರು ಮಳೆಯಾದರೆ, ಎರಡನೇ ಬೆಳೆಗೂ ನೀರು ಸಿಗಲಿದೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	124.34	18,834	19,328
ಹಾರಂಗಿ	2,859	2,858.62	2,381	1,800
ಕಬಿನಿ	2,284.00	2,283.46	8,802	6,350
ಹೇಮಾವತಿ	2,922	2,921.75	6,742	8,375
ಲಿಂಗನಮಕ್ಕಿ	1,819	1,817.35	12,527	9,589
ಸೂಪಾ (ಮೀ)	564	560.47	11,460	4,422
ಮಾಣಿ	595	590.18	2,348	-
ತುಂಗಭದ್ರಾ	1,633	1,630.13	34,983	10,067
ಮಲಪ್ರಭಾ	2,079.5	2,078.45	5,331	5,544
ಘಟಪ್ರಭಾ	2175	2,173.83	10,754	12,351
ಭದ್ರಾ *	186	182.9	11,253	4,193
ಆಲಮಟ್ಟಿ (ಮೀ)	519.6	519.27	1,78,574	1,76,618
ನಾರಾಯಣಪುರ (ಮೀ)	492.25	490.99	1,85,000	1,78,500

* ನೆಲಮಟ್ಟದಿಂದ

ಕಾಲೇಜು ಆಯ್ಕೆ ಮಾಡಿಕೊಂಡ 16 ಸಾವಿರ ವಿದ್ಯಾರ್ಥಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಪ್ರಕ್ರಿಯೆ ಶನಿವಾರ ಆರಂಭವಾಗಿದ್ದು, ಮೊದಲ ದಿನವೇ 16 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಕೋರ್ಸ್ ಹಾಗೂ ಕಾಲೇಜುಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ.

ಚಲನ್ ಡೌನ್‌ಲೋಡ್ ಮಾಡಿಕೊಂಡು ಶುಲ್ಕ ಪಾವತಿಸುವ ವಿಧಾನದ ಜೊತೆಗೆ ಇದೇ ಮೊದಲ ಬಾರಿ ಇಂಟರ್‌ನೆಟ್ ಬ್ಯಾಂಕಿಂಗ್, ಡೆಬಿಟ್/ಕೆಡಿಟ್ ಕಾರ್ಡ್‌ಗಳ ಮೂಲಕ ಶುಲ್ಕ ಪಾವತಿಗೆ ಅವಕಾಶ ಕಲ್ಪಿಸಲಾಗಿತ್ತು. ಈ ಸೌಲಭ್ಯ ಬಳಸಿಕೊಂಡು ಮೂರು ಸಾವಿರಕ್ಕೂ ಹೆಚ್ಚು ಮಂದಿ ಶುಲ್ಕ ಪಾವತಿ ಮಾಡಿ, ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಂಡಿದ್ದಾರೆ.

ಎಚ್‌ಡಿಎಫ್‌ಸಿ ಸೇರಿ ಕೆಲ ಬ್ಯಾಂಕ್‌ಗಳು ತನ್ನ ಗ್ರಾಹಕರಿಗೆ ಒಮ್ಮೆಗೇ ಗರಿಷ್ಠ ₹50 ಲಕ್ಷ ವರ್ಗಾಯಿಸಲು ಅವಕಾಶ ನೀಡಿವೆ. ವೈದ್ಯಕೀಯ ಕೋರ್ಸ್ ಪ್ರವೇಶ ಪಡೆದ ಕೆಲವರು ತಮ್ಮ ಗರಿಷ್ಠ ಮೊತ್ತದ ಶುಲ್ಕ ₹6.09 ಲಕ್ಷ ಮೊತ್ತವನ್ನು ಇಂಟರ್‌ನೆಟ್ ಬ್ಯಾಂಕಿಂಗ್ ಮೂಲಕ ಪಾವತಿಸಿದ್ದಾರೆ.

ಹಣಪಾವತಿಗೆ ಸರ್ವರ್ ಸಮಸ್ಯೆ: ಕಾಲೇಜುಗಳ ಆಯ್ಕೆಯ ನಂತರ ಶುಲ್ಕ ಪಾವತಿಸಲು ಹೆಚ್ಚಿನ ವಿದ್ಯಾರ್ಥಿಗಳು ಒಮ್ಮೆಗೇ ಪ್ರಯತ್ನ ನಡೆಸಿದ್ದರಿಂದ ಸರ್ವರ್ ನಿಧಾನವಾಗಿ, ಸಮಸ್ಯೆಯಾಯಿತು. ಸಮಸ್ಯೆಯನ್ನು ತಾಂತ್ರಿಕ ಸಿಬ್ಬಂದಿ ಸರಿಪಡಿಸಿದರು.

'ಕೆಪಿಎಸ್‌ಸಿ ಮರುಪರೀಕ್ಷೆ ನಡೆಸಲಿ'

ಬೆಂಗಳೂರು: 'ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗಾಗಿ ಕೆಪಿಎಸ್‌ಸಿ ಈಚೆಗೆ ನಡೆಸಿದ ಪರೀಕ್ಷೆಯಲ್ಲಿ ಭಾಷಾಂತರದ ತಪ್ಪುಗಳ ಕಾರಣದಿಂದ ಕನ್ನಡದ ಅಭ್ಯರ್ಥಿಗಳಿಗೆ ಅನ್ಯಾಯವಾಗಿದೆ. ಹೀಗಾಗಿ ಮರುಪರೀಕ್ಷೆ ನಡೆಸಬೇಕು' ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಒತ್ತಾಯಿಸಿದ್ದಾರೆ.

'ಇದು ಬೇಜವಾಬ್ದಾರಿಯಿಂದ ಆಗಿರುವ ಅನ್ಯಾಯ. ಕೆಪಿಎಸ್‌ಸಿಯಂತಹ ಪ್ರತಿಷ್ಠಿತ ಸಂಸ್ಥೆಯು ಸೂಕ್ತ ಭಾಷಾಂತರಕಾರರ ನೆರವು ಪಡೆಯದೆ ಬೇಕಾಬಿಟ್ಟಿ ನಡೆದುಕೊಂಡಿದೆ. ಇದು ಸರ್ಕಾರಕ್ಕೂ ಕೆಟ್ಟ ಹೆಸರು ತರುತ್ತದೆ. ಹೀಗಾಗಿ ಸರ್ಕಾರ ಕೂಡಲೇ ತನಿಖೆಗೆ ಆದೇಶಿಸಬೇಕು. ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಬೇಕು' ಎಂದು ಆಗ್ರಹಿಸಿದ್ದಾರೆ.

ಬಿಆರ್‌ಟಿ: ಮತ್ತೊಂದು ಆನೆ ಕಳೇಬರ ಪತ್ತೆ

ಹನೂರು (ಚಾಮರಾಜನಗರ ಜಿಲ್ಲೆ): ಬಿಳಿಗಿರಿ ರಂಗನಾಥಸ್ವಾಮಿ ಹುಲಿ ಸಂರಕ್ಷಿತ ಅರಣ್ಯ ವ್ಯಾಪ್ತಿಯ ಬೈಲೂರು ವನ್ಯಜೀವಿ ವಲಯದಲ್ಲಿ ಮತ್ತೊಂದು ಆನೆಯ ಮೃತದೇಹ ಶನಿವಾರ ಪತ್ತೆಯಾಗಿದ್ದು, ಒಂದು ವಾರದ ಅವಧಿಯಲ್ಲಿ ಮೂರು ಆನೆಗಳು ಸಾವಿಗೀಡಾಗಿವೆ.

ಬೈಲೂರು ಮತ್ತು ಯಳಂದೂರು ವ್ಯಾಪ್ತಿಯಲ್ಲಿ ಕೆಲವು ದಿನಗಳ ಹಿಂದೆ ಎರಡು ಆನೆಗಳ ಮೃತದೇಹಗಳು ಪತ್ತೆಯಾಗಿದ್ದವು. ಅರಣ್ಯ ಸಿಬ್ಬಂದಿ ಗಸ್ತು ಕಾರ್ಯಾಚರಣೆ ಚುರುಕುಗೊಳಿಸಿದಾಗ, ಮುಳ್ಳಿನ ಪೊದೆಯೊಳಗೆ 60 ರಿಂದ 65 ವರ್ಷ ವಯಸ್ಸಿನ ಹೆಣ್ಣಾನೆಯ ಕಳೇಬರ ಪತ್ತೆಯಾಗಿದೆ.

ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಆನೆಯ ಶವಪರೀಕ್ಷೆ ನಡೆಸಲಾಗಿದ್ದು, 'ಏಳೆಂಟು ದಿನಗಳ ಹಿಂದೆ ಸ್ವಾಭಾವಿಕವಾಗಿ ಸಾವನ್ನಪ್ಪಿದೆ. ಈ ಮುಂಚೆ ಎರಡು ಆನೆಗಳೂ ಸ್ವಾಭಾವಿಕವಾಗಿ ಮೃತಪಟ್ಟಿವೆ' ಎಂದು ಪಶುವೈದ್ಯಾಧಿಕಾರಿಗಳು ದೃಢಪಡಿಸಿದ್ದಾರೆ.

'ವಾರದಲ್ಲಿ ಮೂರು ಆನೆಗಳ ಮೃತದೇಹ ಪತ್ತೆಯಾಗಿರುವುದು ಹಲವು ಅನುಮಾನಗಳಿಗೂ ಎಡೆಮಾಡಿಕೊಟ್ಟಿದೆ. ಸಾಂಕ್ರಾಮಿಕ ರೋಗ ಕಾಣಿಸಿಕೊಂಡಿದೆಯೇ ಅಥವಾ ಆನೆಗಳಿಗೆ ವಿಷ ಇಕ್ಕಲಾಗುತ್ತಿದೆಯೇ' ಎಂಬ ಅನುಮಾನಗಳು ವ್ಯಕ್ತವಾಗಿವೆ.

ತನಿಖೆ ನಡೆಸಿರುವ ಜಾನ್ ಮೈಕೆಲ್ ಡಿಕುನ್ಹಾ ನೇತೃತ್ವದ ವಿಚಾರಣಾ ಆಯೋಗ

ಕೋವಿಡ್ ಭ್ರಷ್ಟಾಚಾರ: ತನಿಖಾ ವರದಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಅಧಿಕಾರದ ಅವಧಿಯಲ್ಲಿ ಕೋವಿಡ್ ನಿರ್ವಹಣೆ ಹೆಸರಿನಲ್ಲಿ ಆರೋಗ್ಯ ಇಲಾಖೆ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರ ಕುರಿತು ತನಿಖೆಗೆ ರಚಿಸಲಾಗಿದ್ದ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕೆಲ್ ಡಿಕುನ್ಹಾ ನೇತೃತ್ವದ ವಿಚಾರಣಾ ಆಯೋಗ 1,722 ಪುಟಗಳ ತನ್ನ ತನಿಖಾ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮುಚ್ಚಿದ ಪೆಟ್ಟಿಗೆಯಲ್ಲಿ ಶನಿವಾರ ಸಲ್ಲಿಸಿತು.

ಲಾಕ್‌ಡೌನ್ ಆರಂಭವಾದ ದಿನದಿಂದ 2022ರ ಡಿಸೆಂಬರ್ 31ರವರೆಗಿನ ಅವಧಿಯಲ್ಲಿನ ಆರೋಪ, ನಿಯಮ ಉಲ್ಲಂಘನೆ, ಲೋಪಗಳ ಕುರಿತು ತನಿಖೆಗೆ 2023ರ ಆ.26ರಂದು ಆಯೋಗ ನೇಮಿಸಲಾಗಿತ್ತು.

ವಿಧಾನಸಭೆಯ ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿ (2020–21) ಸಲ್ಲಿಸಿದ್ದ ವರದಿಯಲ್ಲಿ ಪ್ರಸ್ತಾಪಿಸಿದ ವಿಷಯಗಳು, ಸಕ್ಷಮ ಅಧಿಕಾರಿಗಳು ಕೆಟಿಪಿಪಿ ಕಾಯ್ದೆ ಮತ್ತು ನಿಯಮಗಳನ್ನು ಉಲ್ಲಂಘಿಸಿ ನೀಡಿದ್ದ ಅನುಮೋದನೆ, ಆರೋಗ್ಯ ಇಲಾಖೆ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ಮತ್ತು ಇತರ ಇಲಾಖೆಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ಸಂಸ್ಥೆಗಳಲ್ಲಿ ಔಷಧ, ಆಮ್ಲಜನಕ ಉಪಕರಣಗಳು, ಸಾಮಗ್ರಿಗಳ ಖರೀದಿ, ವಿತರಣೆಯ ನಿರ್ವಹಣೆಯಲ್ಲಿ ನಡೆದಿರುವ ಅವ್ಯವಹಾರ, ಲೋಪದೋಷಗಳ ಕುರಿತು ಆಯೋಗವು 11 ತಿಂಗಳಲ್ಲಿ ವಿಸ್ತೃತ ತನಿಖೆ ನಡೆಸಿ, ವರದಿ ನೀಡಿದೆ.


ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕೆಲ್ ಡಿಕುನ್ಹಾ ನೇತೃತ್ವದ ವಿಚಾರಣಾ ಆಯೋಗ ತನ್ನ ತನಿಖಾ ವರದಿಯನ್ನು ಶನಿವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಲ್ಲಿಸಿತು. ಎ.ಎಸ್.ಪೊನ್ನಣ್ಣ, ಪ್ರಿಯಾಂಕ್ ಖರ್ಗೆ, ನಸೀರ್ ಅಹಮದ್ ಅವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು

11 ಭಾಗ; ₹7,220 ಕೋಟಿ ಮೊತ್ತದ ವ್ಯವಹಾರ

ಕೋವಿಡ್ ಭ್ರಷ್ಟಾಚಾರದ ಕುರಿತು ಒಟ್ಟು 11 ಭಾಗಗಳಲ್ಲಿ ವರದಿ ಸಿದ್ಧಪಡಿಸಲಾಗಿದೆ. ಒಟ್ಟು ₹7,220 ಕೋಟಿ ಮೊತ್ತದ ವ್ಯವಹಾರದ ಕುರಿತು ವಿವರಗಳನ್ನು ವರದಿ ಒಳಗೊಂಡಿದೆ.

ಮೊದಲ ಆರು ಭಾಗ ಆರೋಗ್ಯ ಇಲಾಖೆ, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ರಾಷ್ಟ್ರೀಯ ಆರೋಗ್ಯ ಮಿಷನ್, ಕರ್ನಾಟಕ ರಾಜ್ಯ ವೈದ್ಯಕೀಯ ಪರಿಕರಗಳ ಸರಬರಾಜು ನಿಗಮ ಮತ್ತು ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆಗಳ ಮೂಲಕ ಔಷಧ, ವೈದ್ಯಕೀಯ ಸಾಮಗ್ರಿಗಳ ಖರೀದಿ, ಟೆಂಡರ್ ವಿವರಗಳನ್ನು ಒಳಗೊಂಡಿದೆ. ಉಳಿದ ಐದು ಭಾಗಗಳಲ್ಲಿ ಬಿಬಿಎಂಪಿ ಕೇಂದ್ರ ಕಚೇರಿ ಮತ್ತು ನಾಲ್ಕು ವಲಯ ಕಚೇರಿಗಳಲ್ಲಿ ನಡೆದಿದ್ದ ಟೆಂಡರ್, ಖರೀದಿ ಕುರಿತು ಮಾಹಿತಿ ಒಳಗೊಂಡಿದೆ. ಬಿಬಿಎಂಪಿಯ ಉಳಿದ ನಾಲ್ಕು ವಲಯ ಕಚೇರಿಗಳಲ್ಲಿ ಮತ್ತು 31 ಜಿಲ್ಲೆಗಳಲ್ಲಿ ನಡೆದ ಖರೀದಿ ವ್ಯವಹಾರಗಳ ವರದಿ ನೀಡುವುದು ಬಾಕಿ ಇದೆ ಎಂದು ನಮೂದಿಸಲಾಗಿದೆ.

ಬೆಂಗಳೂರು ನಗರ ವಿಶ್ವವಿದ್ಯಾನಿಲಯ BENGALURU CITY UNIVERSITY
ಆಗು ನೀ ಅನಿಕೇತನ BE BOUNDLESS
ಜ್ಞಾನ ಜ್ಯೋತಿ ಸೆಂಟ್ರಲ್ ಕಾಲೇಜು ಆವರಣ, ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು– 560 001.
Ph.No. 080-22961016 / 22131385 E-Mail ID: registrarbcu@gmail.com

ಸಂಖ್ಯೆ: ಬೆಂ.ನ.ವಿ./ಸಿಬ್ಬಂದಿ/ಅ.ಉ.ನೇ/2024–25 ದಿನಾಂಕ: 31–08–2024

ಪತ್ರಿಕಾ ಪ್ರಕಟಣೆ

ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಹಾಗೂ ವಿಶ್ವವಿದ್ಯಾನಿಲಯದ ಮಹಿಳಾ ಕಾಲೇಜು, ಮಲ್ಲೇಶ್ವರಂನಲ್ಲಿ ಈ ಕೆಳಕಂಡ ವಿವಿಧ ಸ್ನಾತಕೋತ್ತರ / ಸ್ನಾತಕ ವಿಷಯಗಳಿಗೆ 2024–25ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಸ್ನಾತಕ / ಸ್ನಾತಕೋತ್ತರ ವಿಷಯಗಳ ಬೋಧನಾ ಕಾರ್ಯದ ನಿರ್ವಹಣೆಗಾಗಿ ಅತಿಥಿ ಉಪನ್ಯಾಸಕರ ಸೇವೆಯನ್ನು ಪಡೆಯಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿಗಳನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್ **www.bcu.ac.in** ನಲ್ಲಿ ತೋರಿಸಿರುವ **bcugfportal.in** ಲಿಂಕ್‌ನ್ನು ಆಯ್ಕೆ ಮಾಡಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ: 02.09.2024 ರಿಂದ 21.09.2024 ಸಂಜೆ 5.00 ಗಂಟೆಯೊಳಗೆ ನಿರ್ವಹಣಾ ಶುಲ್ಕ ರೂ. 200/– (SC/ST/CAT-1 Rs.100/-) ಗಳೊಂದಿಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಳಿಗಾಗಿ ವಿಶ್ವವಿದ್ಯಾನಿಲಯದ ವೆಬ್‌ಸೈಟ್ **www.bcu.ac.in** ನೋಡಬಹುದು.

ಭರ್ತಿ ಮಾಡಿದ ಅರ್ಜಿಯ ಭೌತಿಕ ಪ್ರತಿಯನ್ನು ದಿನಾಂಕ: 26.09.2024 ರೊಳಗೆ ಕುಲಸಚಿವರ ಕಛೇರಿ, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಜ್ಞಾನಜ್ಯೋತಿ ಸೆಂಟ್ರಲ್ ಕಾಲೇಜ್ ಆವರಣ, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು – 560 001ರಲ್ಲಿ ಸಲ್ಲಿಸಬಹುದಾಗಿದೆ.

ವಿಜ್ಞಾನ ವಿಷಯಗಳು : 1. ರಸಾಯನಶಾಸ್ತ್ರ 2. ಜೀವರಸಾಯನಶಾಸ್ತ್ರ 3. ಸಸ್ಯವಿಜ್ಞಾನ 4. ಪ್ರಾಣಿವಿಜ್ಞಾನ 5. ಗಣಿತಶಾಸ್ತ್ರ 6. ಭೌತಶಾಸ್ತ್ರ 7. ಉಡುಪು ಮತ್ತು ತಂತ್ರಜ್ಞಾನ (UG&PG) 8. ಪರಿಸರ ವಿಜ್ಞಾನ 9. ಗಣಕ ವಿಜ್ಞಾನ (ಎಂ.ಎಸ್ಸಿ. & ಬಿಸಿಎ) (UG&PG).

ಕಲಾ ವಿಷಯಗಳು: 1. ಕನ್ನಡ 2. ಇಂಗ್ಲೀಷ್ 3. ಅರ್ಥಶಾಸ್ತ್ರ 4. ಇತಿಹಾಸ 5. ರಾಜ್ಯಶಾಸ್ತ್ರ 6. ಸಮಾಜಶಾಸ್ತ್ರ 7. ಸಮಾಜಕಾರ್ಯ 8. ಸಂವಹನ ಮತ್ತು ಪತ್ರಿಕೋದ್ಯಮ 9. ಜಾಗತಿಕ ಭಾಷೆಗಳು, (ಜರ್ಮನ್, ಫ್ರೆಂಚ್, ಸ್ಪ್ಯಾನಿಷ್, ಜಪಾನೀಸ್, ಕೊರಿಯನ್, ಚೈನೀಸ್) 10. ಹಿಂದಿ

ವಾಣಿಜ್ಯ ವಿಷಯಗಳು: ಎಂ.ಕಾಂ., ಎಂ.ಕಾಂ.(ಫೈನಾನ್ಸ್ ಮತ್ತು ಅಕೌಂಟಿಂಗ್), ಎಂ.ಕಾಂ (ಇಂಟರ್‌ನ್ಯಾಷನಲ್ ಬಿಸಿನೆಸ್), ಎಂ.ಟಿ.ಟಿ.ಎಂ.(ಮಾಸ್ಟರ್ ಆಫ್ ಟೂರಿಸಂ ಅಂಡ್ ಟ್ರಾವಲ್ ಮ್ಯಾನೇಜ್‌ಮೆಂಟ್). ಬಿ.ಕಾಂ, ಬಿ.ಕಾಂ (Accounting & Finance), ಬಿ.ಕಾಂ (Financial Technology) (UG&PG) ಮತ್ತು ಪಿ.ಜಿ. ಡಿಪ್ಲೋಮಾ

ಮ್ಯಾನೇಜ್‌ಮೆಂಟ್: ಬಿಬಿಎ, ಬಿಬಿಎ –Financial Analysis ಮತ್ತು ಎಂ.ಬಿ.ಎ. (Day and Evening),

ಮೇಲಿನ ವಿಷಯಗಳ ಮುಂದುವರೆದ ಭಾಗವಾಗಿ, ತಾತ್ಕಾಲಿಕ ಹುದ್ದೆಗಳಾದ ಪ್ರಾಂಶುಪಾಲರು (ಸಮಾಲೋಚಕರು), ಸಹಾಯಕ ನಿರ್ದೇಶಕರು–ದೈಹಿಕ ಶಿಕ್ಷಣ, ಸಹಾಯಕ ಗ್ರಂಥಪಾಲಕರು, ಸಂಯೋಜಕರು – ಸ್ನಾತಕ ಪದವಿ ಕೋರ್ಸುಗಳಿಗೆ, ಉಪನಿರ್ದೇಶಕರು – ಪ್ರಸಾರಾಂಗ (ಸಮಾಲೋಚಕರು) ಮತ್ತು ದೈಹಿಕ ಶಿಕ್ಷಣ ಶಿಕ್ಷಕರ (ವಿಶ್ವವಿದ್ಯಾನಿಲಯದ ಮಹಿಳಾ ಕಾಲೇಜು ಮತ್ತು ಸೆಂಟ್ರಲ್ ಕಾಲೇಜು ಆವರಣ) ಹುದ್ದೆಗಳಿಗೆ ಯುಜಿಸಿ ನಿಯಮಾವಳಿಗಳ ಪ್ರಕಾರ ಅರ್ಹತೆ ಪಡೆದ ಅನುಭವ ಅಧ್ಯಾಪಕರನ್ನು ನೇಮಿಸಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹಾಗೆಯೇ, ತಾತ್ಕಾಲಿಕ ಹುದ್ದೆಗಳಾದ ಲ್ಯಾಬ್ ಅಸಿಸ್ಟೆಂಟ್ (ಕಂಪ್ಯೂಟರ್ ಸೈನ್ಸ್ ಲ್ಯಾಬ್) ಮತ್ತು ತಾಂತ್ರಿಕ ಸಹಾಯಕರ ಹುದ್ದೆಗಳಿಗೆ ಸಹ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಯು ಸ್ವಯಂ (Curriculum Vitae) ವಿವರಗಳೊಂದಿಗೆ ತತ್ಸಬಂಧ ಹುದ್ದೆಯಲ್ಲಿ ಕಾರ್ಯನಿರ್ವಹಿಸಲು ಅನುಭವವುಳ್ಳ ಪ್ರಮಾಣ ಪತ್ರವನ್ನು ದಿನಾಂಕ: 26.09.2024 ರೊಳಗೆ ನೇರವಾಗಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸತಕ್ಕದ್ದು.

ಸಹಿ/–
ಕುಲಸಚಿವರು

ವಾಸಾಸಂಇ/ಬೆಂ.ನಗರ/1781/ಆಕಾರ್/2024–25

ಎನ್.ಆರ್.ಪುರ ರಬ್ಬರ್




ಆರ್‌ಎಸ್‌ಎಸ್-4 ₹233

ಆರ್‌ಎಸ್‌ಎಸ್-5 ₹227

ಗುಡ್ ಲಾಟ್ ₹211

(ಪ್ರತಿ ಕೆ.ಜಿಗೆ)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹510
12 ಕ್ಕೆ	₹68
ಮೈಸೂರು	
100ಕ್ಕೆ	₹512

ಕಾಲುಬಾಯಿ ರೋಗ ಮುಕ್ತ ವಲಯ ಘೋಷಣೆಗೆ ನಿರ್ಧಾರ

ನವದೆಹಲಿ (ಪಿಟಿಐ): ಪ್ರಾಣಿ ಉತ್ಪನ್ನಗಳ ರಫ್ತಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ದೇಶದ ಎಂಟು ರಾಜ್ಯಗಳಲ್ಲಿ ಕಾಲುಬಾಯಿ ರೋಗ ಮುಕ್ತ ವಲಯಗಳ ಘೋಷಣೆಗೆ ಕೇಂದ್ರ ಸರ್ಕಾರ ತೀರ್ಮಾನಿಸಿದೆ.

ಆಹಾರ ಮತ್ತು ಕೃಷಿ ಸಂಘಟನೆಯಿಂದ (ಎಫ್‌ಎಒ) ಪ್ರಾಣಿಗಳ ಸಾಂಕ್ರಾಮಿಕ ರೋಗ ತಡೆಗಟ್ಟುವ ಸಂಬಂಧ ಇತ್ತೀಚೆಗೆ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು.

'ರಾಷ್ಟ್ರೀಯ ರೋಗ ನಿಯಂತ್ರಣ ಕಾರ್ಯಕ್ರಮದಡಿ ಪ್ರಾಣಿಗಳಿಗೆ ಕಾಡುವ ಕಾಲುಬಾಯಿ, ಪೆಸ್ಟೆ ಡೆಸ್ ಪೆಟಿಟ್ಸ್ ರೂಮಿನಂಟ್ಸ್ (ಪಿಪಿಆರ್), ಕಂದು ಹಾಕುವ ರೋಗ (ಬ್ರುಸೆಲ್ಲೋಸಿಸ್) ಹಾಗೂ ಹಂದಿ ಜ್ವರದ ಹತೋಟಿಗೆ ಕ್ರಮವಹಿಸಲಾಗಿದೆ' ಎಂದು ಕೇಂದ್ರ ಪಶುಪಾಲನಾ ಮತ್ತು ಹೈನುಗಾರಿಕೆ ಇಲಾಖೆಯ ಕಾರ್ಯದರ್ಶಿ ಅಲ್ಕಾ ಉಪಾಧ್ಯಾಯ ತಿಳಿಸಿದ್ದಾರೆ.

ಕಾಲುಬಾಯಿ ಮುಕ್ತ ವಲಯಗಳ ಘೋಷಣೆಗೆ ಸಂಬಂಧಿಸಿದಂತೆ ಪ್ರಾಣಿಗಳಿಗೆ ಲಸಿಕೆ ಹಾಕುವ ಕಾರ್ಯ ಪ್ರಗತಿಯಲ್ಲಿದೆ. ಇದರಿಂದ ಜಾಗತಿಕ ಮಾರುಕಟ್ಟೆಯಲ್ಲಿ ಭಾರತದ ಪ್ರಾಣಿ ಉತ್ಪನ್ನಗಳ ಮಾರಾಟಕ್ಕೆ ಅನುಕೂಲವಾಗಲಿದೆ ಎಂದು ತಿಳಿಸಿದ್ದಾರೆ.

ಮಾಸಿಕ ಪಿಂಚಣಿ ಹೆಚ್ಚಳಕ್ಕೆ ಒತ್ತಾಯ

ನವದೆಹಲಿ (ಪಿಟಿಐ): ಕೈಗಾರಿಕೆ, ಸಾರ್ವಜನಿಕ, ಸಹಕಾರ ಮತ್ತು ಖಾಸಗಿ ವಲಯದ ಪಿಂಚಣಿದಾರರಿಗೆ ಕನಿಷ್ಠ ಮಾಸಿಕ ₹7,500 ಪಿಂಚಣಿ ಹೆಚ್ಚಿಸುವಂತೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ, ಇಪಿಎಸ್–95 ರಾಷ್ಟ್ರೀಯ ಆಂದೋಲನ ಸಮಿತಿ (ಎನ್‌ಎಸಿ) ಮನವಿ ಮಾಡಿದೆ.

ನಿರ್ಮಲಾ ಅವರನ್ನು ಭೇಟಿ ಮಾಡಿದ ಸಮಿತಿಯ ಪ್ರತಿನಿಧಿಗಳು, ಈ ಕುರಿತು ಮಾತುಕತೆ ನಡೆಸಿದರು. ಪಿಂಚಣಿದಾರರ ಹಿತಕಾಯುವ ನಿಟ್ಟಿನಲ್ಲಿ ಸರ್ಕಾರ ಈ ಕುರಿತು ಪರಿಶೀಲನೆ ನಡೆಸಿ ಅಗತ್ಯ ಕ್ರಮಕೈಗೊಳ್ಳುವ ಬಗ್ಗೆ ಸಚಿವೆ ಭರವಸೆ ನೀಡಿದ್ದಾರೆ ಎಂದು ಸಮಿತಿ ತಿಳಿಸಿದೆ.

'ಪಿಂಚಣಿದಾರರಿಗೆ ಆರ್ಥಿಕ ಭದ್ರತೆ ಒದಗಿಸುವ ಬಗ್ಗೆ ಸೂಕ್ತ ಮಾರ್ಗೋಪಾಯವನ್ನು ರೂಪಿಸುವ ಬಗ್ಗೆ ನಿರ್ಮಲಾ ಭರವಸೆ ನೀಡಿದ್ದಾರೆ' ಎಂದು ತಿಳಿಸಿದೆ.

ಈ ಸಮಿತಿ ವ್ಯಾಪ್ತಿಯಲ್ಲಿ 78 ಲಕ್ಷ ಪಿಂಚಣಿದಾರರು ಹಾಗೂ ಕೈಗಾರಿಕಾ ವಲಯದಲ್ಲಿ ದುಡಿಯುತ್ತಿರುವ 7.5 ಕೋಟಿ ಕಾರ್ಮಿಕರು ಇದ್ದಾರೆ.

ಇತ್ತೀಚೆಗೆ ಕೇಂದ್ರ ಕಾರ್ಮಿಕ ಸಚಿವ ಮನ್ಸುಖ್ ಮಾಂಡವೀಯಾ ಅವರನ್ನು ಭೇಟಿ ಮಾಡಿದ್ದ ಸಮಿತಿಯ ಪ್ರತಿನಿಧಿಗಳು, ಪಿಂಚಣಿ ಹೆಚ್ಚಿಸುವಂತೆ ಒತ್ತಾಯಿಸಿದ್ದರು. ಪ್ರಸ್ತುತ ಪಿಂಚಣಿದಾರರಿಗೆ ಮಾಸಿಕ ₹1,450 ಪಿಂಚಣಿ ಲಭಿಸುತ್ತಿದೆ.

ತೊರವಿ: 10 ಸಾವಿರ ಟನ್ ಸಾಮರ್ಥ್ಯದ ಶೀತಲಗೃಹ ನಿರ್ಮಾಣ


ವೈನ್ ಪಾರ್ಕ್‌ಗೆ ಪಿಪಿಪಿ ಮೊರೆ

• ಕೆ.ಎಸ್.ಸುನಿಲ್

ಬೆಂಗಳೂರು: ಅನುದಾನದ ಕೊರತೆಯಿಂದಾಗಿ ದಶಕದಿಂದ ನನೆಗುದಿಗೆ ಬಿದ್ದಿರುವ ವಿಜಯಪುರ ಜಿಲ್ಲೆಯ ತೊರವಿ ವೈನ್ ಪಾರ್ಕ್ ಸ್ಥಾಪನೆ ಯೋಜನೆಯನ್ನು ಸರ್ಕಾರಿ ಮತ್ತು ಖಾಸಗಿ ಸಹಭಾಗಿತ್ವ ದಡಿ (ಪಿಪಿಪಿ) ಅನುಷ್ಠಾನಕ್ಕೆ ತರಲು ಕರ್ನಾಟಕ ದ್ರಾಕ್ಷಿ ಮತ್ತು ವೈನ್ ಮಂಡಳಿ ಮುಂದಾಗಿದೆ. ಯೋಜನೆಗೆ ಹೂಡಿಕೆದಾರರಿಗೆ ಆಹ್ವಾನವನ್ನೂ ನೀಡಿದೆ.

ವೈನ್ ಪಾರ್ಕ್ ಸ್ಥಾಪನೆಗೆ ತೊರವಿಯಲ್ಲಿ 141 ಎಕರೆ ಜಮೀನನ್ನು ದಶಕದ ಹಿಂದೆಯೇ ಕಾಯ್ದಿರಿಸಲಾಗಿತ್ತು. ಆದರೆ, ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆದಿರಲಿಲ್ಲ. ಮೊದಲ ಹಂತದಲ್ಲಿ ಶೀತಲಗೃಹ ನಿರ್ಮಾಣ ಕಾರ್ಯ ಆರಂಭಿಸಿದ್ದು, ಯೋಜನೆ ಅಗತ್ಯವಿರುವ ₹100 ಕೋಟಿಗಿಂತ ಹೆಚ್ಚು ಮೊತ್ತದ ಹೂಡಿಕೆಗೆ ಹೂಡಿಕೆದಾರರನ್ನು ಆಕರ್ಷಿಸುವ ಪ್ರಯತ್ನ ಆರಂಭವಾಗಿದೆ.

ವಿಜಯಪುರ, ಬೆಳಗಾವಿ, ಬಾಗಲಕೋಟೆ, ಮತ್ತಿತರ ಜಿಲ್ಲೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ದ್ರಾಕ್ಷಿ ಬೆಳೆಯಲಾಗುತ್ತಿದೆ. ಅಂದಾಜು ₹3 ಸಾವಿರ ಕೋಟಿಯಿಂದ ₹4 ಸಾವಿರ ಕೋಟಿ ಮೌಲ್ಯದ ವಹಿವಾಟು ನಡೆಯುತ್ತದೆ.



ಮಹಾರಾಷ್ಟ್ರಕ್ಕೆ ದ್ರಾಕ್ಷಿ ಪೂರೈಕೆಯಾಗುವುದರಿಂದ ಆದಾಯವೂ ಆ ರಾಜ್ಯದ ಪಾಲಾಗುತ್ತಿದೆ. ರಾಜ್ಯಕ್ಕೆ ವರಮಾನ ಹೆಚ್ಚಿಸುವುದು ಹಾಗೂ ಸ್ಥಳೀಯರಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ವೈನ್ ಪಾರ್ಕ್ ನಿರ್ಮಿಸುವ ಪ್ರಸ್ತಾವವಿದೆ.

ವೈನ್ ಪಾರ್ಕ್‌ನಲ್ಲಿ ಏನೇನು?: ವೈನ್ ತಯಾರಿಕಾ ಘಟಕ, ಒಣ ದ್ರಾಕ್ಷಿ ಸಂಸ್ಕರಣಾ ಘಟಕ, ವಿವಿಧ ಮಾದರಿಯ ವೈನ್‌ಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳದಲ್ಲೇ ದ್ರಾಕ್ಷಿ ತುಳಿದು ಸಾಂಪ್ರದಾಯಿಕ ಮಾದರಿಯಲ್ಲಿ ವೈನ್ ತಯಾರಿಸುವುದು, ರೆಸ್ಟೋರೆಂಟ್, ದ್ರಾಕ್ಷಾರಸ ತಯಾರಿಕೆ ಪ್ರಾತ್ಯಕ್ಷಿಕೆ, ಗ್ರಂಥಾಲಯ ಹಾಗೂ ಕ್ರೀಡಾ ಚಟುವಟಿಕೆಗಳು ಈ ವೈನ್ ಪಾರ್ಕ್ ಯೋಜನೆಯಲ್ಲಿವೆ.

'ವಿಜಯಪುರದ ಗೋಳಗುಮ್ಮಟ ಹಾಗೂ ನೆರೆ ಜಿಲ್ಲೆಯ ಆಲಮಟ್ಟಿ ಅಣೆಕಟ್ಟು, ಬಾದಾಮಿ, ಐಹೊಳೆ ಪ್ರವಾಸಿ ತಾಣಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಭೇಟಿ ನೀಡುತ್ತಾರೆ. ಪ್ರವಾಸಿಗರನ್ನು ಗಮನದಲ್ಲಿಟ್ಟುಕೊಂಡು ವಿಜಯಪುರ ಜಿಲ್ಲೆಯಲ್ಲಿ ಪಿಪಿಪಿ ಮಾದರಿಯಲ್ಲಿ ವೈನ್ ಪಾರ್ಕ್ ನಿರ್ಮಿಸಲಾಗುತ್ತಿದ್ದು, ಹೂಡಿಕೆದಾರರಿಗೆ ಆಹ್ವಾನ ನೀಡಲಾಗಿದೆ' ಎಂದು ದ್ರಾಕ್ಷಿ ಮತ್ತು ವೈನ್ ಮಂಡಳಿ ಅಧ್ಯಕ್ಷ ಯೋಗೇಶ್ ಬಾಬು ತಿಳಿಸಿದರು.

ರಾಜ್ಯದಲ್ಲಿ 32,473 ಹೆಕ್ಟೇರ್ ಪ್ರದೇಶಲ್ಲಿ ದ್ರಾಕ್ಷಿ ಬೆಳೆಯಲಾಗುತ್ತದೆ. ವಾರ್ಷಿಕ ಉತ್ಪಾದನೆ 8.21 ಲಕ್ಷ ಟನ್ ಇದೆ. ವಿಜಯಪುರ, ಬಾಗಲಕೋಟೆ, ಬೆಳಗಾವಿ ಭಾಗದ ಬೆಳೆಗಾರರಿಗೆ ಅನುಕೂಲವಾಗುವಂತೆ ₹39.95 ಕೋಟಿ ವೆಚ್ಚದಲ್ಲಿ 10 ಸಾವಿರ ಟನ್ ಸಾಮರ್ಥ್ಯದ ಶೀತಲಗೃಹ ಹಾಗೂ ಅತ್ಯಾಧುನಿಕ ತಂತ್ರಜ್ಞಾನದ ಒಣ ದ್ರಾಕ್ಷಿ ಸಂಸ್ಕರಣ ಘಟಕವನ್ನು ತೊರವಿಯಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ ಎಂದರು.

'ರಾಜ್ಯದಲ್ಲಿ 1.25 ಲಕ್ಷ ಟನ್ ಒಣದ್ರಾಕ್ಷಿ ಉತ್ಪಾದನೆ ಆಗುತ್ತಿದೆ. ವಿಜಯಪುರ, ಬೆಳಗಾವಿ, ಬೆಳಗಾವಿ ಜಿಲ್ಲೆಯಲ್ಲಿ ಒಣದ್ರಾಕ್ಷಿ ಸಂಗ್ರಹಣೆಗೆ 50 ಸಾವಿರ್ ಟನ್ ಶೇಖರಣಾ ಸಾಮರ್ಥ್ಯ ಹೊಂದಿರುವ ಒಟ್ಟು 38 ಶೀತಲ ಗೃಹಗಳಿವೆ. ಮಹಾರಾಷ್ಟ್ರದ ಸಾಂಗ್ಲಿ–ತಾಸ್‌ಗಾವ್‌ನಲ್ಲಿರುವ ಶೀತಲಗೃಹಗಳಲ್ಲಿ ಸುಮಾರು 70 ಸಾವಿರ ಟನ್ ದ್ರಾಕ್ಷಿ ರಕ್ಷಿಸಿಟ್ಟು ಉತ್ತಮ ಬೆಲೆ ಸಿಕ್ಕಾಗ ಮಾರಾಟ ಮಾಡುತ್ತಿದ್ದಾರೆ' ಎಂದು ಮಂಡಳಿ ವ್ಯವಸ್ಥಾಪಕ ನಿರ್ದೇಶಕ ಟಿ. ಸೋಮು ತಿಳಿಸಿದರು.

ವೈನ್ ಮೇಳಕ್ಕೆ ಅನುದಾನದ ಕೊರತೆ

ಅನುದಾನದ ಕೊರತೆಯಿಂದಾಗಿ ವೈನ್ ಮೇಳ ಆಯೋಜನೆ ಮಾಡಲಾಗುತ್ತಿಲ್ಲ. ರಾಜ್ಯಮಟ್ಟದ ಮೇಳಕ್ಕೆ ಕನಿಷ್ಠ ₹1 ಕೋಟಿ ಹಾಗೂ ಜಿಲ್ಲಾ ಮಟ್ಟಕ್ಕೆ ₹25 ಲಕ್ಷ ಅನುದಾನ ಅಗತ್ಯವಿದೆ.

'ವೈನ್ ಮೇಳ ನಡೆಸಲು ಹೆಚ್ಚಿನ ಅನುದಾನ ನೀಡುವಂತೆ ಸರ್ಕಾರಕ್ಕೆ ಮನವಿ ಮಾಡಲಾಗಿದೆ. ಲಭ್ಯವಿರುವ ಅನುದಾನದಲ್ಲಿಯೇ ನಗರದ ಮಾಲ್‌ಗಳ ಸಹಯೋಗದೊಂದಿಗೆ ಮೇಳ ಆಯೋಜಿಸಲಾಗುತ್ತಿದೆ. ದ್ರಾಕ್ಷಾರಸ ಉದ್ಯಮದ ವಹಿವಾಟು ₹200 ಕೋಟಿ ತಲುಪಿದೆ' ಎಂದು ಯೋಗೇಶ್ ಬಾಬು ತಿಳಿಸಿದರು.

ಕೋಲ್ಕತ್ತ: ವಿಮಾನ ತುರ್ತು ಭೂಸ್ಪರ್ಶ

ಕೋಲ್ಕತ್ತ (ಪಿಟಿಐ): ಬೆಂಗಳೂರಿಗೆ ಹೊರಟಿದ್ದ ಇಂಡಿಗೊ ವಿಮಾನದ ಎಂಜಿನ್ ವಿಫಲಗೊಂಡಿದ್ದರಿಂದ ಟೇಕಾಫ್ ಆದ ಕೆಲವೇ ನಿಮಿಷಗಳಲ್ಲಿ ಇಲ್ಲಿನ ನೇತಾಜಿ ಸುಭಾಷ್ ಚಂದ್ರ ಬೋಸ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ರಾತ್ರಿ 10.53ಕ್ಕೆ ತುರ್ತು ಭೂಸ್ಪರ್ಶ ಮಾಡಿದೆ.




ಧಾವಂತ ಉತ್ತರ ಪ್ರದೇಶದ ಮೀರತ್‌ನಲ್ಲಿ ಶನಿವಾರ ಪೊಲೀಸ್ ನೇಮಕಾತಿ ಪರೀಕ್ಷೆ ಬರೆದ ಅಭ್ಯರ್ಥಿಗಳು ತಮ್ಮ ಊರುಗಳಿಗೆ ತೆರಳಲು ಧಾವಂತದಿಂದ ರೈಲು ಹತ್ತಿದರು –ಪಿಟಿಐ ಚಿತ್ರ

ಸುದ್ದಿ 2 ನಿಮಿಷ

ಜಿಡಿಪಿ ಕುಸಿತ: ಸರ್ಕಾರಿ ವೆಚ್ಚ ಕಡಿಮೆ ಕಾರಣ– ಶಕ್ತಿಕಾಂತ ದಾಸ್

ಭುವನೇಶ್ವರ (ಪಿಟಿಐ): '2024–25ನೇ ಜೂನ್ ತ್ರೈಮಾಸಿಕದಲ್ಲಿ ಲೋಕಸಭಾ ಚುನಾವಣೆಯ ನೀತಿ ಸಂಹಿತೆ ಜಾರಿಯಲ್ಲಿತ್ತು. ಹಾಗಾಗಿ, ಸರ್ಕಾರದ ವೆಚ್ಚ ಕಡಿಮೆಯಾಗಿದ್ದರಿಂದ ಈ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆಯು 15 ತಿಂಗಳ ಕನಿಷ್ಠ ಮಟ್ಟಕ್ಕೆ ದಾಖಲಾಗಿದೆ' ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ ಗವರ್ನರ್ ಶಕ್ತಿಕಾಂತ ದಾಸ್ ಶನಿವಾರ ತಿಳಿಸಿದ್ದಾರೆ.

ಜೂನ್ ತ್ರೈಮಾಸಿಕದಲ್ಲಿ ಜಿಡಿಪಿಯು ಶೇ 7.1ರಷ್ಟು ಪ್ರಗತಿ ಕಾಣಲಿದೆ ಎಂದು ಆರ್‌ಬಿಐ ಅಂದಾಜಿಸಿತ್ತು. ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಪ್ರಕಟಿಸಿರುವ ವರದಿ ಪ್ರಕಾರ ಕನಿಷ್ಠ ಮಟ್ಟಕ್ಕೆ



ಇಳಿಕೆಯಾಗಿದೆ ಎಂದು ಹೇಳಿದ್ದಾರೆ.

ಸರಕು ಮತ್ತು ಸೇವೆ ವೆಚ್ಚ, ಹೂಡಿಕೆ, ತಯಾರಿಕೆ, ಸೇವಾ ಮತ್ತು ನಿರ್ಮಾಣ ವಲಯದ ಪ್ರಗತಿಯು ಶೇ 7ಕ್ಕಿಂತಲೂ ಹೆಚ್ಚಿದೆ ಎಂದು ತಿಳಿಸಿದ್ದಾರೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವೆಚ್ಚದ ಪ್ರಮಾಣದಲ್ಲಿ ಇಳಿಕೆಯಾಗಿದೆ. ಕೃಷಿ ವಲಯದ ಬೆಳವಣಿಗೆಯು ಕಡಿಮೆಯಾಗಿದೆ. ಇದು ಜಿಡಿಪಿ ಪ್ರಗತಿ ಮೇಲೆ ಪರಿಣಾಮ ಬೀರಿದೆ ಎಂದು ಹೇಳಿದ್ದಾರೆ.

'ಮುಂಬರುವ ತ್ರೈಮಾಸಿಕಗಳಲ್ಲಿ ಸರ್ಕಾರದ ವೆಚ್ಚ ಪ್ರಮಾಣದಲ್ಲಿ ಏರಿಕೆಯಾಗಲಿದ್ದು, ಜಿಡಿಪಿ ಬೆಳವಣಿಗೆಗೆ ನೆರವಾಗಲಿದೆ' ಎಂದು ಹೇಳಿದ್ದಾರೆ.

ಏಪ್ರಿಲ್–ಜೂನ್ ಅವಧಿಯಲ್ಲಿ ಕೃಷಿ ವಲಯದ ಬೆಳವಣಿಗೆಯು ಶೇ 2ರಷ್ಟು ದಾಖಲಾಗಿದೆ. ಸದ್ಯ ದೇಶದ ಕೆಲವು ಪ್ರದೇಶದ ಹೊರತುಪಡಿಸಿದರೆ ಉಳಿದೆಡೆ ಮುಂಗಾರು ಮಳೆ ಉತ್ತಮವಾಗಿ ಸುರಿದಿದೆ. ಹಾಗಾಗಿ, ಕೃಷಿ ವಲಯವು ಬೆಳವಣಿಗೆ ಮೇಲೆ ನಿರೀಕ್ಷೆ ಹೆಚ್ಚಿದೆ ಎಂದು ತಿಳಿಸಿದ್ದಾರೆ.

ಆಕಸ್ಮಿಕ ಲಾಭ ತೆರಿಗೆ ಇಳಿಕೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ದೇಶದಲ್ಲಿ ಉತ್ಪಾದನೆಯಾಗುವ ಕಚ್ಚಾ ತೈಲದ ಮೇಲಿನ ಆಕಸ್ಮಿಕ ಲಾಭದ ತೆರಿಗೆಯನ್ನು ₹2,100ರಿಂದ ₹1,850ಕ್ಕೆ ಇಳಿಸಿದೆ. ಶನಿವಾರದಿಂದ ಈ ಪರಿಷ್ಕೃತ ದರ ಜಾರಿಗೆ ಬಂದಿದೆ.

ವಿಶೇಷ ಹೆಚ್ಚುವರಿ ಅಬಕಾರಿ ಸುಂಕದ (ಎಸ್‌ಎಇಡಿ) ರೂಪದಲ್ಲಿ ಕೇಂದ್ರವು ಈ ತೆರಿಗೆ ವಿಧಿಸುತ್ತದೆ. ಆದರೆ, ರಫ್ತು ಮಾಡುವ ಡೀಸೆಲ್, ಪೆಟ್ರೋಲ್ ಮತ್ತು ವಿಮಾನ ಇಂಧನದ (ಎಟಿಎಫ್) ಮೇಲಿನ ಈ ಸುಂಕದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ.

ಪ್ರತಿ ಹದಿನೈದು ದಿನಕ್ಕೊಮ್ಮೆ ಸರಾಸರಿ ತೈಲ ದರ ಆಧರಿಸಿ ಕೇಂದ್ರ ಸರ್ಕಾರವು ಆಕಸ್ಮಿಕ ಲಾಭದ ತೆರಿಗೆ ಬೆಲೆಯನ್ನು ಪರಿಷ್ಕರಣೆ ಮಾಡುತ್ತದೆ.

ಏರ್‌ಲಿಫ್ಟ್ ವೇಳೆ ಹೆಲಿಕಾಪ್ಟರ್ ಪತನ

ರುದ್ರಪ್ರಯಾಗ (ಪಿಟಿಐ): ಭಾರತೀಯ ವಾಯುಪಡೆಯ ಎಂಐ-17 ಹೆಲಿಕಾಪ್ಟರ್‌ವೊಂದನ್ನು ದುರಸ್ತಿಗಾಗಿ ಶನಿವಾರ ಬೆಳಿಗ್ಗೆ ಗೌಚಾರ್‌ಗೆ ತರುತ್ತಿದ್ದ ವೇಳೆ, ತಾಂತ್ರಿಕ ಸಮಸ್ಯೆಯ ಕಾರಣದಿಂದಾಗಿ ಕೇದಾರನಾಥ ಬಳಿಯ ಬೆಟ್ಟದಲ್ಲಿ ಕೆಳಕ್ಕೆ ಬೀಳಿಸಲಾಗಿದೆ.

ಕೆಳಗೆ ಬಿದ್ದ ಹೆಲಿಕಾಪ್ಟರ್‌ನಲ್ಲಿ ಯಾವುದೇ ಪ್ರಯಾಣಿಕರು ಅಥವಾ ಲಗೇಜ್ ಇರಲಿಲ್ಲ ಎಂದು ರುದ್ರಪ್ರಯಾಗದ ಜಿಲ್ಲಾ ಪ್ರವಾಸೋದ್ಯಮ ಅಧಿಕಾರಿ ರಾಹುಲ್ ಚೌಬೆ ತಿಳಿಸಿದ್ದಾರೆ.

ಕ್ರಿಸ್ಟಲ್ ಏವಿಯೇಷನ್ ಪ್ರೈವೇಟ್ ಲಿಮಿಟೆಡ್‌ಗೆ ಈ ಹೆಲಿಕಾಪ್ಟರ್ ಸೇರಿದ್ದು, ತಾಂತ್ರಿಕ



ದೋಷದಿಂದ ಮೇ 24ರಂದು ಕೇದಾರನಾಥದಲ್ಲಿ ತುರ್ತು ಭೂಸ್ಪರ್ಶ ಮಾಡಿತ್ತು. ದುರಸ್ತಿಗಾಗಿ ತರುವ ವೇಳೆ ತೊಂದರೆ ಉಂಟಾಗಿದ್ದು, ಇದನ್ನು ಗ್ರಹಿಸಿದ ಎಂಐ-17ನ ಪೈಲಟ್ ಅವರು ಹೆಲಿಕಾಪ್ಟರ್ ಅನ್ನು ನಿರ್ಜನ ಪ್ರದೇಶದಲ್ಲಿ ಕೆಳಗೆ ಬೀಳಿಸಿದ್ದಾರೆ ಎಂದು ಚೌಬೆ ಹೇಳಿದ್ದಾರೆ.

ಮಾಹಿತಿ ಪಡೆದ ತಕ್ಷಣ ರಕ್ಷಣಾ ತಂಡ ಸ್ಥಳಕ್ಕೆ ಆಗಮಿಸಿದೆ. ತಂಡವು ಪರಿಸ್ಥಿತಿಯನ್ನು ಪರಿಶೀಲಿಸುತ್ತಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ

ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ

Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಬ್ರೂನೈ, ಸಿಂಗಪುರಕ್ಕೆ ಮೋದಿ ಭೇಟಿ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಬ್ರೂನೈಗೆ ಸೋಮವಾರದಿಂದ ಎರಡು ದಿನಗಳ ಪ್ರವಾಸ ಕೈಗೊಳ್ಳಲಿದ್ದಾರೆ. ಭಾರತದ ಪ್ರಧಾನಿಯೊಬ್ಬರು ಬ್ರೂನೈಗೆ ದ್ವಿಪಕ್ಷೀಯ ಸಂಬಂಧ ವರ್ಧನೆಯ ಮಾತುಕತೆಗಾಗಿ ಭೇಟಿ ನೀಡುತ್ತಿರುವುದು ಇದೇ ಮೊದಲು ಎಂದು ವಿದೇಶಾಂಗ ಇಲಾಖೆ(ಎಮ್‌ಇಎ) ತಿಳಿಸಿದೆ.

ಭಾರತ ಮತ್ತು ಬ್ರೂನೈ ನಡುವೆ ರಾಜತಾಂತ್ರಿಕ ಸಂಬಂಧ ಶುರುವಾಗಿ 40 ವರ್ಷಗಳಾಗುತ್ತಿದ್ದು, ಅದರ ಪ್ರತೀಕವೆಂಬಂತೆ ಪ್ರಧಾನಿಯವರು ಈ ಪ್ರವಾಸ ಕೈಗೊಂಡಿದ್ದಾರೆ. ಇದು ಉಭಯ ರಾಷ್ಟ್ರಗಳ ದ್ವಿಪಕ್ಷೀಯ ಬಾಂಧವ್ಯವನ್ನು ಇನ್ನಷ್ಟು ಬಲಗೊಳಿಸಲಿದೆ ಎಂದುಎಮ್‌ಇಎ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದಾರೆ.



ಬ್ರೂನೈ ಪ್ರವಾಸದ ಬಳಿಕ ಮೋದಿ ಅವರು ಸಿಂಗಪುರ ಪ್ರಧಾನಿ ಲಾರೆನ್ಸ್ ವಾಂಗ್ ಅವರ ಆಹ್ವಾನದ ಮೇರೆಗೆ ಸಿಂಗಪುರಕ್ಕೆ ಸೆಪ್ಟಂಬರ್ 4ರಂದು ತೆರಳಲಿದ್ದಾರೆ. ಈ ವೇಳೆ ಉಭಯ ನಾಯಕರು ಮಹತ್ವದ ಸಭೆ ನಡೆಸಲಿದ್ದಾರೆ ಎಂದು ಜೈಸ್ವಾಲ್ ಹೇಳಿದ್ದಾರೆ.

ಲಾರೆನ್ಸ್ ಭೇಟಿ ನಂತರ ಪ್ರಧಾನಿ ಮೋದಿಯವರು ಅಲ್ಲಿನ ಅಧ್ಯಕ್ಷ ಥರ್ಮನ್ ಷಣ್ಮುಗರತ್ನಂ ಅವರನ್ನು ಭೇಟಿಯಾಗಲಿದ್ದಾರೆ. ಸಿಂಗಪುರದ ಉದ್ಯಮಿಗಳೊಂದಿಗೂ ಸಮಾಲೋಚನೆ ನಡೆಸಲಿದ್ದಾರೆ ಎಂದು ತಿಳಿಸಿದ್ದಾರೆ.

ಲಾವೋಸ್‌ನಲ್ಲಿ 47 ಮಂದಿ ಭಾರತೀಯರ ರಕ್ಷಣೆ

ವೀಯೆಂಟಿಯಾನ್ (ಪಿಟಿಐ): ಲಾವೋಸ್‌ನ ಬೊಕಿಯೊ ಪ್ರಾಂತ್ಯದ ಸೈಬರ್ ಅಪರಾಧ ಕೇಂದ್ರಗಳಲ್ಲಿ ಸಿಲುಕಿದ್ದ 47 ಮಂದಿ ಭಾರತೀಯರನ್ನು ರಕ್ಷಿಸಲಾಗಿದೆ ಎಂದು ಇಲ್ಲಿನ ಭಾರತೀಯ ರಾಯಭಾರ ಕಚೇರಿಯು ಶನಿವಾರ ತಿಳಿಸಿದೆ.

ಲಾವೋಸ್‌ನಲ್ಲಿ ಕೆಲಸ ಕೊಡಿಸುವುದಾಗಿ ಹೇಳುವ ನಕಲಿ ಜಾಹೀರಾತುಗಳ ಬಗ್ಗೆ ಎಚ್ಚರಿಕೆಯಿಂದ ಇರಬೇಕು ಎಂದು ಭಾರತದ ಅಧಿಕಾರಿಗಳು ಆಗಾಗ ಹೇಳುತ್ತ ಬಂದಿದ್ದಾರೆ. ವಂಚನೆಗೆ ಒಳಗಾಗದೆ ಇರಲು, ಉದ್ಯೋಗ ಅವಕಾಶಗಳ ಕುರಿತ ವಿವರಗಳನ್ನು ಸರಿಯಾಗಿ ಪರಿಶೀಲಿಸಬೇಕು ಎಂದು ಅವರು ಹೇಳುತ್ತಿದ್ದಾರೆ.

ಇಲ್ಲಿ ಭಾರತೀಯ ರಾಯಭಾರ ಕಚೇರಿಯು ಇದುವರೆಗೆ 635 ಮಂದಿ ಭಾರತೀಯರನ್ನು ರಕ್ಷಿಸಿದ್ದು, ಅವರಿಗೆ ಸುರಕ್ಷಿತವಾಗಿ ಭಾರತಕ್ಕೆ ವಾಪಸ್ಸಾಗಲು ನೆರವಾಗಿದೆ. ಬೊಕಿಯೊ ಪ್ರಾಂತ್ಯದ ಗೋಲ್ಡನ್ ಟ್ರಯಾಂಗಲ್ ವಿಶೇಷ ಆರ್ಥಿಕ ವಲಯದ ಸೈಬರ್ ಅಪರಾಧ ಕೇಂದ್ರಗಳಲ್ಲಿ ಸಿಲುಕಿದ್ದವರನ್ನು ರಕ್ಷಿಸಲಾಗಿದೆ.

'ಜಿಲ್ಲಾ ನ್ಯಾಯಾಲಯ ಅಧೀನ ಅಲ್ಲ'

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹೇಳಿಕೆ

ನವದೆಹಲಿ (ಪಿಟಿಐ): ಜಿಲ್ಲಾ ಹಂತದ ನ್ಯಾಯಾಲಯಗಳು ನ್ಯಾಯಾಂಗ ವ್ಯವಸ್ಥೆ ಬೆನ್ನೆಲುಬು ಇದ್ದಂತೆ ಎಂದು ಸಿಜೆಐ ಡಿ.ವೈ. ಚಂದ್ರಚೂಡ್ ಹೇಳಿದ್ದಾರೆ. ಈ ನ್ಯಾಯಾಲಯಗಳನ್ನು 'ಅಧೀನ ನ್ಯಾಯಾಲಯಗಳು' ಎಂದು ಕರೆಯುವುದನ್ನು ನಿಲ್ಲಿಸಬೇಕು ಎಂದೂ ಅವರು ಪ್ರತಿಪಾದಿಸಿದ್ದಾರೆ.

ಜಿಲ್ಲಾ ನ್ಯಾಯಾಲಯಗಳ ರಾಷ್ಟ್ರೀಯ ಸಮಾವೇಶದ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ನ್ಯಾಯ ಅರಸುವ ವ್ಯಕ್ತಿಗೆ ಮೊದಲು ಸಿಗುವುದು ಜಿಲ್ಲಾ ಹಂತದ ನ್ಯಾಯಾಲಯಗಳು ಎಂದರು. ಸಮಾವೇಶವನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಿದರು.

'ಕಾನೂನಿಗೆ ಅನುಗುಣವಾದ ಆಡಳಿತದಲ್ಲಿ ಜಿಲ್ಲಾ ನ್ಯಾಯಾಲಯಗಳದ್ದು ಮಹತ್ವದ ಪಾತ್ರ' ಎಂದರು. ಜಿಲ್ಲಾ ನ್ಯಾಯಾಲಯಗಳು ಬಹಳ ದೊಡ್ಡ ಹೊಣೆಯನ್ನು ಹೊತ್ತುಕೊಳ್ಳಬೇಕಾಗುತ್ತದೆ. ಹೀಗಾಗಿ ಇವನ್ನು ನ್ಯಾಯಾಂಗದ ಬೆನ್ನೆಲುಬು ಎಂದು ಕರೆಯಲಾಗುತ್ತದೆ. ನ್ಯಾಯಾಂಗ ವ್ಯವಸ್ಥೆಯ ಬೆನ್ನೆಲುಬನ್ನು ಪೋಷಿಸಲು, ಜಿಲ್ಲಾ ನ್ಯಾಯಾಲಯಗಳನ್ನು 'ಅಧೀನ' ನ್ಯಾಯಾಲಯಗಳು ಎಂದು ಕರೆಯುವುದನ್ನು ನಿಲ್ಲಿಸಬೇಕು ಎಂದು ಅವರು ಹೇಳಿದರು.

ಸ್ವಾತಂತ್ರ್ಯ ದೊರೆತ 75 ವರ್ಷಗಳ ನಂತರ, ಬ್ರಿಟಿಷ್ ಕಾಲದ ಇನ್ನೊಂದು ಪಳೆಯುಳಿಕೆಯನ್ನು, ಅಂದರೆ ವಸಾಹತು ಮನಃಸ್ಥಿತಿಯಾದ ಅಧೀನತೆಯನ್ನು, ಹೂತುಹಾಕುವ ಕಾಲ ಬಂದಿದೆ ಎಂದರು.

ನ್ಯಾಯದಾನ ತ್ವರಿತವಾದರೆ ಚೆನ್ನ: ಪ್ರಧಾನಿ

ನವದೆಹಲಿ (ಪಿಟಿಐ): ಮಹಿಳೆಯರನ್ನು ಗುರಿಯಾಗಿಸಿಕೊಂಡ ಅಪರಾಧ ಪ್ರಕರಣಗಳಲ್ಲಿ ತ್ವರಿತವಾಗಿ ನ್ಯಾಯದಾನ ಆಗುವಂತೆ ನೋಡಿಕೊಳ್ಳುವ ಅಗತ್ಯವನ್ನು ಪ್ರತಿಪಾದಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರು, ತ್ವರಿತ ನ್ಯಾಯದಾನದಿಂದ ಮಹಿಳೆಯರಿಗೆ ತಮ್ಮ ಸುರಕ್ಷತೆಯ ಬಗ್ಗೆ ಹೆಚ್ಚಿನ ಭರವಸೆ ಮೂಡುತ್ತದೆ ಎಂದು ಹೇಳಿದ್ದಾರೆ.

ನ್ಯಾಯಾಂಗದ ಸೇವೆಗಳಿಗೆ ಮಹಿಳೆಯರು ಸೇರುವ ಪ್ರಮಾಣ ಹೆಚ್ಚಾಗುತ್ತಿದೆ ಎಂದೂ ಚಂದ್ರಚೂಡ್ ತಿಳಿಸಿದರು. 'ಕಳೆದ ಕೆಲವು ವರ್ಷಗಳಲ್ಲಿ ಜಿಲ್ಲಾ ನ್ಯಾಯಾಲಯಗಳಿಗೆ ಮಹಿಳೆಯರು ಸೇರುವ ಪ್ರಮಾಣ ಹೆಚ್ಚಾಗಿದೆ. 2023ರಲ್ಲಿ ರಾಜಸ್ಥಾನದಲ್ಲಿ ನಡೆದ ಸಿವಿಲ್ ನ್ಯಾಯಾಧೀಶರ ಒಟ್ಟು ನೇಮಕಾತಿಯಲ್ಲಿ ಮಹಿಳೆಯರ ಪ್ರಮಾಣ ಶೇಕಡ 58ರಷ್ಟು ಇತ್ತು' ಎಂದರು.

2023ರಲ್ಲಿ ದೆಹಲಿಯಲ್ಲಿ ನೇಮಕಗೊಂಡ ನ್ಯಾಯಾಂಗ ಅಧಿಕಾರಿಗಳಲ್ಲಿ ಮಹಿಳೆಯರ ಪ್ರಮಾಣವು ಶೇ 66ರಷ್ಟು ಆಗಿತ್ತು. ಉತ್ತರ ಪ್ರದೇಶದಲ್ಲಿ 2022ರ ಬ್ಯಾಚ್‌ನಲ್ಲಿ ಸಿವಿಲ್ ನ್ಯಾಯಾಧೀಶರ (ಕಿರಿಯ ವಿಭಾಗ) ನೇಮಕಾತಿಯಲ್ಲಿ ಮಹಿಳೆಯರ ಪ್ರಮಾಣವು ಶೇ 54ರಷ್ಟು ಇತ್ತು ಎಂದು ಹೇಳಿದರು.

ಭಾರತಕ್ಕೆ ಬಿಎನ್‌ಪಿ ನಾಯಕ ಮಿರ್ಜಾ ಫಕ್ರುಲ್ ಇಸ್ಲಾಂ ಆಲಂಗೀರ್ ಮನವಿ

ಹಸೀನಾ ಹಸ್ತಾಂತರಕ್ಕೆ ಒತ್ತಾಯ

ಢಾಕಾ (ಪಿಟಿಐ): 'ಮಾಜಿ ಪ್ರಧಾನಿ ಶೇಖ್ ಹಸೀನಾ ಅವರನ್ನು ಭಾರತವು ಬಾಂಗ್ಲಾದೇಶಕ್ಕೆ ಹಸ್ತಾಂತರಿಸುವ ಮೂಲಕ ಉಭಯ ದೇಶಗಳ ಬಾಂಧವ್ಯದಲ್ಲಿ ಹೊಸ ಅಧ್ಯಾಯ ಆರಂಭಿಸಬೇಕು' ಎಂದು ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಾರ್ಟಿ (ಬಿಎನ್‌ಪಿ) ಪ್ರಧಾನ ಕಾರ್ಯದರ್ಶಿ ಮಿರ್ಜಾ ಫಕ್ರುಲ್ ಇಸ್ಲಾಂ ಆಲಂಗೀರ್ ಆಗ್ರಹಿಸಿದರು.

'ಹಸೀನಾ ಅವರು ಭಾರತದಲ್ಲಿ ಹೆಚ್ಚು ಕಾಲ ನೆಲಸಿದರೆ ಅದರಿಂದ ಎರಡೂ ದೇಶಗಳ ನಡುವಿನ ದ್ವಿಪಕ್ಷೀಯ ಸಂಬಂಧ ಹಾಳಾಗುವ ಸಾಧ್ಯತೆಯಿದೆ' ಎಂದು ಅವರು ಎಚ್ಚರಿಸಿದರು.



ಮಿರ್ಜಾ ಫಕ್ರುಲ್ ಇಸ್ಲಾಂ ಆಲಂಗೀರ್

'ಹಿಂದಿನ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು, ಭಾರತದೊಂದಿಗೆ ಬಲವಾದಸಂಬಂಧ ಹೊಂದಲು ನಮ್ಮ ಪಕ್ಷ ಬಯಸುತ್ತದೆ' ಎಂದಿರುವ ಅವರು, 'ಬಾಂಗ್ಲಾದೇಶದ ನೆಲದಲ್ಲಿ ಭಾರತದ ಭದ್ರತೆಗೆ ಧಕ್ಕೆ ಆಗುವಂತಹ ಯಾವುದೇ ಚಟುವಟಿಕೆಗಳಿಗೆ ಅನುಮತಿಸುವುದಿಲ್ಲ' ಎಂದು ಭರವಸೆ ನೀಡಿದರು.

'ಬಿಎನ್‌ಪಿ ಅಧಿಕಾರಕ್ಕೆ ಬಂದರೆ, ಅವಾಮಿ ಲೀಗ್ ಆಡಳಿತಾವಧಿಯಲ್ಲಿ ಸಹಿ ಮಾಡಲಾದ ಅದಾನಿ ವಿದ್ಯುತ್ ಒಪ್ಪಂದದ ಪರಿಶೀಲನೆ ಮತ್ತು ಮರು ಮೌಲ್ಯಮಾಪನ ಮಾಡಲಾಗುವುದು' ಎಂದು ಅವರು ಪಿಟಿಐಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದರು.

'ಬಾಂಗ್ಲಾದೇಶದ ಜನರ ಮನಸ್ಸನ್ನು ಅರ್ಥ ಮಾಡಿಕೊಳ್ಳಲು ದೆಹಲಿಯ ರಾಜತಾಂತ್ರಿಕರು ವಿಫಲರಾಗಿದ್ದಾರೆ. ಜನರ ದಂಗೆಯ ಬಳಿಕ ಹಸೀನಾ ಅವರ ಸರ್ಕಾರ ಪತನವಾಯಿತು. ಆ ಬಳಿಕ ಚೀನಾ, ಅಮೆರಿಕ, ಬ್ರಿಟನ್ ಮತ್ತು ಪಾಕಿಸ್ತಾನ ರಾಷ್ಟ್ರಗಳು ಬಿಎನ್‌ಪಿ ಜತೆಗೆ ಸಂಪರ್ಕ ಬೆಳೆಸಿವೆ. ಆದರೆ, ಇಲ್ಲಿಯವರೆಗೂ ಭಾರತ ಸಂಪರ್ಕ ಸಾಧಿಸಿಲ್ಲ' ಎಂದು ಅವರು ಹೇಳಿದರು.

'ಅಲ್ಪಸಂಖ್ಯಾತರ ಸುರಕ್ಷೆಯು ಬಾಂಗ್ಲಾದೇಶದ ಆಂತರಿಕ ವಿಷಯವಾಗಿದೆ' ಎಂದು ಪ್ರತಿಪಾದಿಸಿ ಅವರು, 'ಹಿಂದೂಗಳ ಮೇಲಿನ ದಾಳಿಯ ವರದಿಗಳು ನಿಖರವಾಗಿಲ್ಲ. ಏಕೆಂದರೆ, ಹೆಚ್ಚಿನ ಘಟನೆಗಳು ಕೋಮುವಾದಕ್ಕಿಂತ ರಾಜಕೀಯ ಪ್ರೇರಿತವಾಗಿವೆ' ಎಂದು ತಿಳಿಸಿದರು.

ಮಾಜಿ ಪ್ರಧಾನಿ ಶೇಖ್ ಹಸೀನಾ ಅವರು ಅಪರಾಧ ಮತ್ತು ಭ್ರಷ್ಟಾಚಾರ ಪ್ರಕರಣಗಳಿಗೆ ಸಂಬಂಧಿಸಿದಂತೆ ಬಾಂಗ್ಲಾದೇಶದಲ್ಲಿ ಕಾನೂನು ಕ್ರಮಗಳನ್ನು ಎದುರಿಸಬೇಕಿದೆ. ಇದಕ್ಕಾಗಿ ಮತ್ತು ದೇಶದ ಜನರ ಭಾವನೆಗಳನ್ನು ಗೌರವಿಸಿ, ಭಾರತವು ಹಸೀನಾ ಅವರನ್ನು ಬಾಂಗ್ಲಾದೇಶಕ್ಕೆ ಹಸ್ತಾಂತರಿಸಬೇಕು ಎಂದು ಅವರು ಆಗ್ರಹಿಸಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Multiple Vacancy

JOB OPENINGS
TELE CALLER (FRESHER/EXP)
CHAT EXECUTIVE (FRESHER/EXP)
Should speak 3 language. Hindi/Kannda/Telugu.
SHOULD READY TO RELOCATE
ATTRACTIVE SALARY
FOOD ACCOMMODATION.
INTERESTED CANDIDATES SEND CV AT cv@aimsconsultinghub.com
75 2292 2292

Wanted

REQUIRED DMLT/ BSc MLT qualified candidates or SIMILAR EXPERINECE for sales and networking in pathology and related services. Job may require travel. Ecure Healthcare Pvt. Ltd. Good Salary + incentives. Send your resume hr@ecure.com OR contact 8090354637, 7460011037

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್

Malleshwaram

3BHK FLAT at Malleswaram for sale-2200sqft 1st floor. With lift,car parking. contact:9845025260

Rajajinagar

PARKWEST APARTMENT 3BHK at Binnymill next to Etamall, 1735sqft, 3rd floor, East facing ready for Occupation, Tower 7 Price 2.4cr. Call: 9845025260

ವೈವಾಹಿಕ

Grooms Wanted

Kannada

ಎಲೈಟ್ ಕನ್ನಡ ಕುಟುಂಬವು ತಮ್ಮ ಸುಂದರ ಮಗಳ ಆರಂಭಿಕ ವಿವಾಹಕ್ಕಾಗಿ Blr ಆಧಾರಿತ ಮೈತ್ರಿಯನ್ನು ಬಯಸುತ್ತದೆ (Ph.D) '94 ಜನಿಸಿದ (CNB) (080-69141323)

ಪ್ರವಾಸ

Travel

ದಸರಾ ರಜೆಯಲ್ಲಿ ರಿಯಾಯಿತಿ ದರದಲ್ಲಿ ವಿದೇಶ ಪ್ರವಾಸ. 7/11 ದಿನಗಳ ಸಿಂಗಾಪುರ್, ಮಲೇಶಿಯಾ, ಥೈಲ್ಯಾಂಡ್. 6ದಿನಗಳ ಶ್ರೀಲಂಕಾ ಪ್ರವಾಸ. 6 ದಿನಗಳ ದುಬೈ ಅಬುದಾಬಿ ಪ್ರವಾಸ. 6 ದಿನಗಳ ಬಾಲಿ. 18 ದಿನಗಳ ಯುಕೆ ಮತ್ತು ಯುರೋಪ್. ಸಂಪರ್ಕಿಸಿ: ಅರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್. 9900080793, 9900080796, 080-26617178

★ಶ್ರೀಶ್ರೇಯಸ್ ಟೂರ್ಸ್★ 20.09.2024,14.10.2024, 15.11.2024,20.12.2024 10ದಿನಗಳು ಅಯೋಧ್ಯೆ ಸಹಿತ ನೇಪಾಳ ರಾಷ್ಟ್ರ ಪ್ರವಾಸ (6ವಿಮಾನದಲ್ಲಿ) 75000. 18.09.2024,04.10.2024 20.10.2024,14.11.2024 23.12.2024 7ದಿನಗಳು ಕಾಶಿ, ಗಯಾ ನೈಮಿಷಾರಣ್ಯ,ಅಯೋಧ್ಯೆ ಅಲಹಾಬಾದ್,ಕಾಶಿ,ಗಯಾ ರಾಜ್‌ಗಿರ್,ನಳಂದ ವೈದ್ಯನಾಥೇಶ್ವರ 25000. 9743351212/ 9206979202/ 8792319181

14.10.2024 15ದಿನಗಳು ಪ್ರವಾಸ ಭುವನೇಶ್ವರ್ ಕೋನಾರ್ಕ್, ಪುರಿಜಗನ್ನಾಥ್, ಗಯಾ,ಕಾಶಿ, ಅಲಹಾಬಾದ್, ಅಯೋಧ್ಯ, ನೇಪಾಳ,ಮುಕ್ತಿನಾಥ, ನೈಮಿಷಾರಣ್ಯ. 30.10.2024 ಅಷ್ಟಜ್ಯೋತಿರ್ಲಿಂಗ ಪ್ರವಾಸ. ಮಹಾರಾಷ್ಟ್ರ, ಮಧ್ಯಪ್ರದೇಶ ಗುಜರಾತ್. ಸಂಪರ್ಕಿಸಿ: ವಿಷ್ಣು ಟೂರ್ಸ್ ಅಂಡ್ ಟ್ರಾವಲ್ಸ್, ಬೆಂಗಳೂರು-70. 9342287551, 8050629305

16.09.2024 12ದಿನಗಳು ದೆಹಲಿ,ಬದ್ರಿನಾಥ್ ಕೇದಾರನಾಥ ಗಂಗೋತ್ರಿ,ಯಮುನೋತ್ರಿ (ಕೆಲವೇ ಸೀಟುಗಳುವೆ) 42000/ `03.10.2024 6ದಿನಗಳು`ಕಾಶಿ, ಅಯೋಧ್ಯಾ`ಗಯಾ, ಅಲಹಾಬಾದ್`32,000/ ಸೆಪ್ಟೆಂಬರ್`ಅಕ್ಟೋಬರ್`ನಲ್ಲಿ ಅಂಡಮಾನ್`ಹವಳದ್ವೀಪ. ''ಶ್ರೀಸಾಯಿ`ರಾಘವೇಂದ್ರ ಟ್ರಾವೆಲ್ಸ್'' 9739847429/ 9845560219

ಗೌರಿ ಗಣೇಶ ಹಬ್ಬದ ವಿಶೇಷ ರಿಯಾಯಿತಿ 13 ದಿನಗಳ ಯುರೋಪ್ 6 ದಿನಗಳ ಬಾಲಿ. 11 ದಿನಗಳ ವಿಯೆಟ್ನಾಂ ಕಾಂಬೋಡಿಯಾ 7/11 ದಿನಗಳ ಸಿಂಗಪುರ್, ಮಲೇಶಿಯ ಥೈಲ್ಯಾಂಡ್. 6 ದಿನಗಳ ದುಬೈ ಓಮನ್ ಅಬುಧಾಬಿ ಶಾರ್ಜಾ. ಭಟ್ ಟ್ರಾವೆಲ್ಸ್ 9844037295 9844166555

★ಶ್ರೀಶ್ರೇಯಸ್ ಟೂರ್ಸ್★ 04.10.2024,14.11.2024 20.12.2024 8ದಿನಗಳು ಪಂಚರಾಮಕ್ಷೇತ್ರ ದರ್ಶನಯಾತ್ರೆ ವಿಜಯವಾಡ,ಮಂಗಳಗಿರಿ ಪೀಠಾಪುರಂ,ಅನ್ನಾವರಂ ವಿಶಾಖಪಟ್ಟಣ,ಭದ್ರಾಚಲಂ,ಇತರ. 25000. 04.10.2024, 14.11.2024,20.12.2024 8ದಿನಗಳು ಅಹೋಬಲಂ ಹೈದರಾಬಾದ್ ಪ್ರವಾಸ ಶ್ರೀಶೈಲಂ, ಮಹಾನಂದಿ 25000. 20.09.2024,04.10.2024 20.10.2024,15.11.2024 21.12.2024 7/10ದಿನಗಳು ಅಖಂಡ ಕೇರಳ ಪ್ರವಾಸ. 32000. 9743351212/ 9206979202/ 8792319181

★ಶ್ರೀಶ್ರೇಯಸ್ ಟೂರ್ಸ್★ 20.09.2024,18.10.2024, 20.11.2024,20.12.2024 12ದಿನಗಳು ಅಖಂಡ ಗುಜರಾತ್ ಸಹಿತ ಮಧ್ಯಪ್ರದೇಶದ ಉಜ್ಜಯಿನಿ, ಓಂಕಾರ ಪ್ರವಾಸ.40000. 20.09.2024,14.10.2024, 20.11.2024 20.12.2024 11ದಿನಗಳು ಅಖಂಡ ರಾಜಸ್ಥಾನ ಪ್ರವಾಸ 35000. 9743351212/ 9206979202/ 8792319181

★ಶ್ರೀಶ್ರೇಯಸ್ ಟೂರ್ಸ್★ 04.10.2024,06.11.2024 16.11.2024 7ದಿನಗಳು ಭೂತಾನ್ ರಾಷ್ಟ್ರ ಪ್ರವಾಸ 40000. 14.11.2024 8ದಿನಗಳು ಶ್ರೀಲಂಕಾ ರಾಷ್ಟ್ರ ಪ್ರವಾಸ 85000. 09.09.2024, 04.10.2024 11ದಿನಗಳು ಚಾರ್‌ದಾಮ್ ಯಾತ್ರೆ 40000. 9743351212/ 9206979202/ 8792319181

04.11.24 ರಿಂದ 20.11.24 ಖಜುರಾಹೊ,ಚಿತ್ರಕೂಟ್, ಪ್ರಯಾಗರಾಜ್, ಅಯೋಧ್ಯ,ಲುಂಬಿನಿ ಮುಕ್ತಿನಾಥ್, ಮನೋಕಾಮನ ಕಟ್ಮಂಡು, ಜನಕಪುರ, ದೇವಘಡ್,ಗಯಾ ವಾರಣಾಸಿ. 8105522123, 9480253807

Pilgrimage Tours

19.10.2024 7ದಿನ ಭೂತಾನ್ ಪ್ರವಾಸ,21.11.2024 6ದಿನ ದುಬೈ ಅಭುದಾಭಿ ಪ್ರವಾಸ. ಅರ್.ಜಿ.ಟಿ ಟ್ರಾವೆಲ್ ವರ್ಲ್ಡ್, ಕುಮಾರಸ್ವಾಮಿ ಲೇಔಟ್. 8197932994, 8861545809

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಹೆಸರು ಬದಲಾವಣೆ
@50/-* PER WORDS
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
www.dhclassifieds.com ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 7795158424 | +91 9901641752
+91 9731810277 | +91 9900428036
*Conditions apply

ಉತ್ತರ ಪ್ರದೇಶ: ಮದುವೆಯ ಭರವಸೆ ನೀಡಿ ವಂಚಿಸಿದ್ದ ಲ್ಯಾಬ್ ಟೆಕ್ನಿಷಿಯನ್ ಬಂಧನ

21 ವರ್ಷದಿಂದ ನರ್ಸ್ ಮೇಲೆ ಅತ್ಯಾಚಾರ

ಭದೋಹಿ(ಉತ್ತರಪ್ರದೇಶ) (ಪಿಟಿಐ): ಮದುವೆಯಾಗುವುದಾಗಿ ನಂಬಿಸಿ ನರ್ಸ್‌ವೊಬ್ಬರ ಮೇಲೆ 21 ವರ್ಷಗಳಿಂದ ಅತ್ಯಾಚಾರ ಎಸಗುತ್ತಿದ್ದ ಲ್ಯಾಬ್ ಟೆಕ್ನಿಷಿಯನ್‌ನನ್ನು ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಉತ್ತರ ಪ್ರದೇಶದ ಭದೋಹಿ ಜಿಲ್ಲೆಯ ನರ್ಸ್(36) ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಚಿಂತಮಣಿ ಶರ್ಮ(59) ಎಂಬವನನ್ನು ಬಂಧಿಸುವಂತೆ ಪೊಲೀಸರಿಗೆ ಆದೇಶಿಸಿತ್ತು. ಪ್ರಕರಣ ದಾಖಲಿಸಿ ಕೊಂಡ ಸೂರ್ಯವಾನ್ ಪೊಲೀಸರು ಆರೋಪಿಯನ್ನು ವಾರಾಣಸಿಯಲ್ಲಿ ಬಂಧಿಸಿದ್ದಾರೆ.

'ಆರೋಪಿ ಮತ್ತು ಸಂತ್ರಸ್ತೆ ಒಂದೇ ಅಪಾರ್ಟ್‌ಮೆಂಟ್‌ನಲ್ಲಿ ವಾಸವಿದ್ದರು. ಸಂತ್ರಸ್ತೆಯು 15 ವರ್ಷದ ಬಾಲಕಿಯಾಗಿದ್ದಾಗಿನಿಂದ ಆರೋಪಿಯ ಪರಿಚಯವಿತ್ತು. ಅವಳ ವಿದ್ಯಾಭ್ಯಾಸಕ್ಕೆ ನೆರವಾಗುವುದಾಗಿ ಹೇಳಿ ಅವರ ಕುಟುಂಬದೊಂದಿಗೆ ಆತ ವಾಸವಿದ್ದನು' ಎಂದು ಪೊಲೀಸರು ತಿಳಿಸಿದ್ದಾರೆ.

'ಆಕೆಯನ್ನು ಬೆದರಿಸಿ ಅತ್ಯಾಚಾರ ಎಸಗಿದ್ದ ಆರೋಪಿ, ಬಳಿಕ ಪದೇ ಪದೇ ದೈಹಿಕ ಸಂಪರ್ಕ ಮಾಡಿದ್ದಾನೆ. ಸಂತ್ರಸ್ತೆಯನ್ನು ಮದುವೆಯಾಗುವುದಾಗಿ ನಂಬಿಸಿದ್ದ ಆತ ಬೇರೊಬ್ಬರೊಂದಿಗೆ ವಿವಾಹವಾಗಿದ್ದ. ಆ ವಿಷಯವನ್ನು ಮುಚ್ಚಿಟ್ಟು ದೈಹಿಕ ಸಂಪರ್ಕ ಮಾಡುತ್ತಲೇ ಇದ್ದ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

'ವಿದ್ಯಾಭ್ಯಾಸ ಪೂರ್ಣವಾದ ಬಳಿಕ ಸಂತ್ರಸ್ತೆಗೆ ಭದೋಹಿಯ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಉದ್ಯೋಗ ಲಭಿಸಿತ್ತು. ವಾರಾಣಸಿಯಲ್ಲಿ ಉದ್ಯೋಗದಲ್ಲಿದ್ದ ಆರೋಪಿಯು ಭದೋಹಿಗೆ ಬಂದು ಆಕೆಯೊಂದಿಗೆ ದೈಹಿಕ ಸಂಪರ್ಕ ಮಾಡುತ್ತಿದ್ದ. ಮದುವೆಯಾಗಲು ಒತ್ತಾಯಿಸಿದಕ್ಕೆ ಆಕೆಯ ಮೇಲೆ ಹಲ್ಲೆ ಮಾಡಿ, ಅವರ ಮನೆಗೆ ಹಾನಿ ಮಾಡಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ.

5 ವರ್ಷದ ಬಾಲೆ ಮೇಲೆ ಬಾಲಕನಿಂದ ಅತ್ಯಾಚಾರ

ನವದೆಹಲಿ (ಪಿಟಿಐ): 5 ವರ್ಷದ ಹೆಣ್ಣುಮಗುವಿನ ಮೇಲೆ 14 ವರ್ಷದ ಬಾಲಕ ಅತ್ಯಾಚಾರ ಎಸಗಿರುವ ಘಟನೆ ನೈರುತ್ಯ ದೆಹಲಿಯಲ್ಲಿ ನಡೆದಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಶನಿವಾರ ತಿಳಿಸಿದರು.

ಗುರುವಾರ ಮಧ್ಯಾಹ್ನ ಮಗುವಿನ ಪೋಷಕರು ಕೆಲಸಕ್ಕೆ ಹೋಗಿದ್ದ ಸಂದರ್ಭದಲ್ಲಿ ಕೃತ್ಯ ಎಸಗಲಾಗಿದೆ. ಮಗುವನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ, ಪೋಷಕರ ಸಮ್ಮುಖದಲ್ಲಿ ಸಮಾಲೋಚನೆ ನಡೆಸಲಾಗಿದೆ ಎಂದು ತಿಳಿಸಿದರು.

2 ವರ್ಷದ ಮಗುವಿಗೆ ಲೈಂಗಿಕ ಕಿರುಕುಳ: (ಠಾಣೆ ವರದಿ): 35 ವರ್ಷದ ವ್ಯಕ್ತಿಯೊಬ್ಬ ತನ್ನ ನೆರೆ ಮನೆಯಲ್ಲಿದ್ದ ಎರಡು ವರ್ಷದ ಹೆಣ್ಣು ಮಗುವನ್ನು ಅಪಹರಿಸಿ, ಮಗುವಿಗೆ ಲೈಂಗಿಕ ಕಿರುಕುಳ ನೀಡಿರುವ ಹೇಯ ಘಟನೆ ಮಹಾರಾಷ್ಟ್ರದ ಠಾಣೆ ಜಿಲ್ಲೆಯ ಕಲ್ಯಾಣದಲ್ಲಿ ನಡೆದಿದೆ. ಶುಕ್ರವಾರ ಈ ಘಟನೆ ನಡೆದಿದ್ದು, ಆರೋಪಿಯನ್ನು ಬಂಧಿಸಿರುವುದಾಗಿ ಕಲ್ಯಾಣ ತಾಲ್ಲೂಕು ಪೊಲೀಸರು ತಿಳಿಸಿದ್ದಾರೆ.

ಮಗುವನ್ನು ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಲೈಂಗಿಕ ಕಿರುಕುಳ ನೀಡಿದ ಆರೋಪಿ, ಬಳಿಕ ಸ್ಥಳದಿಂದ ಪರಾರಿಯಾಗಿದ್ದಾನೆ. ನಂತರ ಏನಾಯಿತು ಎಂಬುದರ ಕುರಿತು ಮಗು, ತನ್ನದೇ ಮಾತಿನಲ್ಲಿ ಪೋಷಕರಿಗೆ ತಿಳಿಸಿದೆ. ಬಳಿಕ ಆರೋಪಿ ವಿರುದ್ಧ ಪ್ರಕರಣ ದಾಖಲಿಸಲಾಗಿದ್ದು, ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಹೆದರಿ ಶಿಶು ಹತ್ಯೆಗೈದ ತಾಯಿ

ನವದೆಹಲಿ (ಪಿಟಿಐ): ನಾಲ್ಕನೇ ಹೆಣ್ಣುಮಗುವಿನ ಜನನದಿಂದ ಸಾಮಾಜಿಕ ನಿಂದನೆ ಅನುಭವಿಸುತ್ತಿದ್ದ 28 ವರ್ಷದ ಮಹಿಳೆಯೊಬ್ಬಳು ತನ್ನ ಆರು ದಿನದ ನವಜಾತ ಹೆಣ್ಣು ಶಿಶುವನ್ನು ಪಶ್ಚಿಮ ದೆಹಲಿಯ ಖಯಾಲಾದಲ್ಲಿ ಕೊಂದಿದ್ದಾಳೆ ಎಂದು ಪೊಲೀಸರು ಶನಿವಾರ ತಿಳಿಸಿದರು.

'ಆರು ದಿನದ ನವಜಾತ ಶಿಶು ನಾಪತ್ತೆಯಾಗಿದೆ ಎಂದು ಶುಕ್ರವಾರ ಬೆಳಿಗ್ಗೆ 5.30ರ ಸುಮಾರಿಗೆ ಪೊಲೀಸರಿಗೆ ಕರೆ ಬಂದಿದ್ದು, ಸ್ಥಳೀಯ ಪೊಲೀಸರು ತಕ್ಷಣ ಸ್ಥಳಕ್ಕೆ ಹೋದರು' ಎಂದು ಪೊಲೀಸ್ ಉಪ ಆಯುಕ್ತ (ಪಶ್ಚಿಮ) ವಿಚಿತ್ರ ವೀರ್ ಹೇಳಿದರು.



ಮಗುವಿನ ತಾಯಿ ಶಿವಾನಿ ಘಟನೆಯ ಹಿಂದಿನ ರಾತ್ರಿ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿ, ತಾಯಿ ಮನೆಗೆ ತೆರಳಿದ್ದರು. ಮಧ್ಯರಾತ್ರಿ 2 ಗಂಟೆ ಸುಮಾರಿಗೆ ಮಗುವಿಗೆ ಹಾಲುಣಿಸಿ ಮಲಗಿದ್ದು, ಸುಮಾರು 4.30ಕ್ಕೆ ಎಚ್ಚರವಾದಾಗ ಮಗು ನಾಪತ್ತೆಯಾಗಿದೆ ಎಂದು ಪೊಲೀಸರಿಗೆ ತಿಳಿಸಿದ್ದರು.

ನಂತರ, ಪೊಲೀಸ್ ತಂಡವು ತನಿಖೆ ಆರಂಭಿಸಿತು. ಈ ಸಮಯದಲ್ಲಿ ಶಿವಾನಿ ಅವರು ಚಿಕಿತ್ಸೆಗಾಗಿ ಆಸ್ಪತ್ರೆಗೆ ಹೋಗುವುದಾಗಿ ಹೇಳಿದರು. ಇದು ಪೊಲೀಸರಲ್ಲಿ ಅನುಮಾನ ಮೂಡಿಸಿತು. ಆದರೂ ಆಕೆಯ ಆರೋಗ್ಯ ಸ್ಥಿತಿಯ ಕಾರಣಕ್ಕೆ ಪೊಲೀಸರು ಹೋಗಲು ಅನುಮತಿಸಿದರು ಎಂದು ಡಿಸಿಪಿ ಹೇಳಿದರು.

ತನಿಖೆಯ ವೇಳೆ ಪೊಲೀಸರಿಗೆ ಪಕ್ಕದ ಮನೆಯ ಚಾವಣಿಯಲ್ಲಿ ಬ್ಯಾಗ್‌ವೊಂದು ಕಂಡುಬಂದಿದ್ದು, ಅದರಲ್ಲಿ ಮಗು ಪತ್ತೆಯಾಯಿತು. ತಕ್ಷಣವೇ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ, ಮಗು ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದರು ಎಂದು ವೀರ್ ಮಾಹಿತಿ ನೀಡಿದರು.

ನಂತರ ಶಿವಾನಿಯನ್ನು ವಿಚಾರಣೆಗೆ ಒಳಪಡಿಸಿದಾಗ ಅಪರಾಧವನ್ನು ಒಪ್ಪಿಕೊಂಡಳು. ಮೃತ ಶಿಶುವು ತನ್ನ ನಾಲ್ಕನೇ ಮಗಳು. ಇಬ್ಬರು ಹೆಣ್ಣುಮಕ್ಕಳು ಈಗಾಗಲೇ ಮೃತಪಟ್ಟಿದ್ದಾರೆ ಎಂದೂ ತಿಳಿಸಿದಳು ಎಂದರು.

ವೈದ್ಯ ದೋಷಮುಕ್ತ

ಶಹಜಹಾನ್‌ಪುರ, ಉತ್ತರಪ್ರದೇಶ (ಪಿಟಿಐ): ಖಾಸಗಿ ನರ್ಸಿಂಗ್ ಹೋಂನಲ್ಲಿ ಮಹಿಳಾ ರೋಗಿಯೊಬ್ಬರ ದೇಹವನ್ನು ಅನುಚಿತವಾಗಿ ಸ್ಪರ್ಶಿಸಿದ ಆರೋಪಕ್ಕೆ ತುತ್ತಾಗಿದ್ದ ಚರ್ಮವೈದ್ಯರನ್ನು ಪ್ರಾಥಮಿಕ ತನಿಖೆ ಆಧರಿಸಿ ಜಿಲ್ಲಾಡಳಿತವು ದೋಷಮುಕ್ತಗೊಳಿಸಿದೆ. ತಪಾಸಣೆ ಮಾಡುವ ವೇಳೆ ವೈದ್ಯರು ಅನುಚಿತವಾಗಿ ಸ್ಪರ್ಶಿಸಿದ್ದರು ಎಂದು ಮಹಿಳೆ ಆರೋಪಿಸಿದ್ದರು. ತಪಾಸಣೆ ನಡೆಸಿದ್ದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು.

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ.

ತಾ:ಬ.ಬಾಗೇವಾಡಿ, ಜಿ:ವಿಜಯಪುರ. ದೂರವಾಣಿ:08426-281027. ಇಮೇಲ್:dam_division@rediffmail.com

ಸಂ:ಕೃಭಾಜನಿನಿ/ಆವಿಅ/ಡಿಬಿ/2024-25/1670 ದಿನಾಂಕ: 31.08.2024

ಶಾರ್ಟ್ ಟರ್ಮ ಕೊಟೇಶನ್

Drone survey for Land Acquisition in back water of almatti Reservoir between RL 519.600 Mtr to RL 522.00 Mtr & RL 522.00 Mtr to 524.256 Mtr ಅಂದಾಜು ಪತ್ರಿಕೆ ತಯಾರಿಸುವ ಸಲುವಾಗಿ, ಅರ್ಹ ಮತ್ತು ನುರಿತ ಸಮಾಲೋಚಕರಿಂದ ಶಾರ್ಟಟರ್ಮ ಕೊಟೇಶನ್ ಆಹ್ವಾನಿಸಿದ್ದು, ಈ ಕಛೇರಿಗೆ ದಿನಾಂಕ **07.09.2024** ರ ಸಾಯಂಕಾಲ 17.00 ಘಂಟೆಯೊಳಗೆ ಸಲ್ಲಿಸಲು ಸೂಚಿಸಲಾಗಿದೆ. ಸದರಿ ಕಾಮಗಾರಿಗೆ ಸಂಭಂದಿಸಿದ ಹೆಚ್ಚಿನ ಮಾಹಿತಿಯನ್ನು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೃಭಾಜನಿನಿ; ಎಫ್.ಆರ್.ಎಲ್ ಸರ್ವೇ ಉಪ ವಿಭಾಗ ಸಂ.01, ಬಾಲಕೋಟೆ ಕ್ಯಾಂಪ್ ಆಲಮಟ್ಟಿ, ಇವರ ಕಛೇರಿಯನ್ನು ಸಂಪರ್ಕಿಸಿ ಪಡೆದುಕೊಳ್ಳಬಹುದಾಗಿದೆ. ದರಪಟ್ಟಿ ಕವರಗಳ ಮೇಲೆ ಸ್ಪಷ್ಟವಾಗಿ ದರಪಟ್ಟಿ ಎಂದು ಮೊಹರಬಂದ ಹಾಕಿರಬೇಕು. ಯಾವುದೇ ದರಪಟ್ಟಿ ಸ್ವೀಕರಿಸುವ ಮತ್ತು ರದ್ದು ಪಡಿಸುವ ಹಕ್ಕು ಈ ಕಛೇರಿಗೆ ಇರುತ್ತದೆ.

S.No	Items Description
1	Conducting Drone survey with RGB Sensor using DGCA approved PPK enabled Drones for the area between FRL (519.600 m) and proposed FRL of 524.256 m + 100 m horizontal with the following specifications, complete as directed by Engineer-in-Charge. a) Planning flight mission based on the given requirements and schedule and update the concerned office in terms of total number of flights, time required for each flight and survey schedule. b) Processing of drone data using standard software to generate the following Output. ▪ 05 cm or better GSD-Ortho Rectified Image (ORI) mosaic with Horizontal accuracy 10 cm or better (TIFF and ECW/JPG compressed formats) ▪ Digital Surface Model (DSM) at 10cm grid ▪ Digital Terrain Model (DTM) at 25 cm grid ▪ 15 cm interval Contours generated from DSM (shapefiles) ▪ 15 cm interval Contours generated from DTM (shapefiles) ▪ Point Cloud
2	Identifying suitable locations potential for Ground Control Points (GCPs) and establishing them using Differential GPS survey at every 2 Km x 2 Km grid interval, complete as directed by Engineer-in-Charge
3	Establishing check points at 1 km x 1 km interval. Check points shall be marked in paint along with point number/ID and should clearly identifiable on Drone survey images and ortho rectified images.
4	Collection of digitised revenue survey maps from KBJNL, superimposition of RS map on drone ORI and duly marking FRL 519.60m, 522.00m & 524.256 m including generation of ontours every 0.15 m interval, complete as directed by Engineer-in-Charge.
5	Providing high resolution drone image duly marking survey number wise boundaries as per the Revenue Survey Map, Identification of type of crops grown in each survey number and providing drawing in 2 sets of hard copies and soft copies complete as directed by Engineer-in-Charge.
6	Providing and fixing 200 x 200 x 750 mm size permanent bench mark stone in 900 x 900 x 1200 mm size block of CC 1 :3 : 6 proportion by volume using 40 mm down clean, hard, graded aggregates and providing 350 mm thick 300 mm high protective wall of UCR masonry in CM 1 : 5 proportion by volume around BM stone, including cost of all materials, labour, dressing top surface of stone and engraving BM data on top surface, excavation of pit, batching and mixing concrete and mortar, placing concrete around stone and compacting, packing mortar and wedging stone chips into masonry joints, finishing, curing etc., complete as directed by Engineer-in-Charge. -PBM proposed to be constructed at every 5 Km interval.
7	Videography in vulnerable reaches such as garden crops, horticulture crops and development areas complete as directed by Engineer-in-Charge

ಸಂಪರ್ಕಿಸುವ e-mail ವಿಳಾಸ: 1. dam_division@rediffmail.com ಸಂಪರ್ಕಿಸುವ ದೂರವಾಣಿ ಸಂಖ್ಯೆ: ಶ್ರೀ ಪರಶುರಾಮ್ ಹಾದಿಮನಿ ಸಹಾಯಕ ಅಭಿಯಂತರರು : 8762428981

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ.

ವಾಸಾಸಂಇ/ವಿಜಯಪುರ/204/ಕೆಎಸ್‌ಎಂಸಿಎ/2024-25

ಅತ್ಯಾಚಾರ ಹಾಗೂ ಪೋಕ್ಸೊ ಪ್ರಕರಣಗಳ ತ್ವರಿತ ವಿಚಾರಣೆ ಉದ್ದೇಶದ ನ್ಯಾಯಾಲಯ

ವಿಶೇಷ ನ್ಯಾಯಾಲಯ ಸ್ಥಾಪನೆ: ಮಮತಾಗೆ ಪತ್ರ

ನವದೆಹಲಿ (ಪಿಟಿಐ): ಅತ್ಯಾಚಾರ ಪ್ರಕರಣಗಳು ಹಾಗೂ ಪೋಕ್ಸೊ ಕಾಯ್ದೆಯ ಅಡಿ ದಾಖಲಾಗುವ ಪ್ರಕರಣಗಳಿಗೆ ಮೀಸಲಾದ ತ್ವರಿತಗತಿ ವಿಶೇಷ ನ್ಯಾಯಾಲಯಗಳ (ಎಫ್‌ಟಿಎಸ್‌ಸಿ) ಸ್ಥಾಪನೆಗೆ ವೇಗ ನೀಡಬೇಕು ಎಂದು ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಅನ್ನಪೂರ್ಣಾ ದೇವಿ ಅವರು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರನ್ನು ಮತ್ತೆ ಒತ್ತಾಯಿಸಿದ್ದಾರೆ.

ಆಗಸ್ಟ್ 30ರಂದು ಬರೆದಿರುವ ಪತ್ರದಲ್ಲಿ ದೇವಿ ಅವರು ಪಶ್ಚಿಮ ಬಂಗಾಳದಲ್ಲಿ ಈಗ ಕಾರ್ಯಾಚರಿಸುತ್ತಿರುವ ತ್ವರಿತಗತಿ ನ್ಯಾಯಾಲಯಗಳ (ಎಫ್‌ಟಿಸಿ) ಕುರಿತ ಕಳವಳವನ್ನು ಪ್ರಸ್ತಾಪಿಸಿದ್ದಾರೆ. ಹೀನ ಅಪರಾಧಗಳ ಸಂತ್ರಸ್ತರಿಗೆ ನ್ಯಾಯದಾನವು ತ್ವರಿತವಾಗಿ ಹಾಗೂ ಸಮರ್ಪಕವಾಗಿ ಆಗುವಂತೆ ನೋಡಿಕೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಆಗಸ್ಟ್ 25ರಂದು ಬರೆದಿದ್ದ ಪತ್ರ-



ವೊಂದರಲ್ಲಿ ಸಚಿವೆ ದೇವಿ ಅವರು, ಅತ್ಯಾಚಾರ ಹಾಗೂ ಕೊಲೆ ಪ್ರಕರಣಗಳಲ್ಲಿ ಅಪರಾಧಿಗಳಿಗೆ ಕಠಿಣ ಶಿಕ್ಷೆ ವಿಧಿಸುವ ಅಗತ್ಯವನ್ನು ಹಾಗೂ ಕಠಿಣ ಕಾನೂನು ಇರಬೇಕಾದ ಮಹತ್ವವನ್ನು ವಿವರಿಸಿದ್ದರು. ಆ ಪತ್ರದ ಬಗ್ಗೆ ಆಗಸ್ಟ್ 30ರ ಪತ್ರದಲ್ಲಿಯೂ ಉಲ್ಲೇಖಿಸಿದ್ದಾರೆ.

ಮಮತಾ ಅವರಿಂದ ಬಂದ ಪತ್ರವೊಂದಕ್ಕೆ ಪ್ರತಿಕ್ರಿಯೆ ನೀಡಿರುವ ಸಚಿವೆ ದೇವಿ, ಪಶ್ಚಿಮ ಬಂಗಾಳ ಸರ್ಕಾರವು 88 ತ್ವರಿತಗತಿ ನ್ಯಾಯಾಲಯಗಳನ್ನು ಸ್ಥಾಪಿಸಿದೆಯಾದರೂ, ಈ ನ್ಯಾಯಾಲಯಗಳು ಕೇಂದ್ರ ಸರ್ಕಾರದ ಯೋಜನೆಯ ಅಡಿಯಲ್ಲಿ ಸೂಚಿಸಲಾದ ತ್ವರಿತಗತಿ ವಿಶೇಷ ನ್ಯಾಯಾಲಯಗಳಲ್ಲ ಎಂದು ಹೇಳಿದ್ದಾರೆ.

ಪಶ್ಚಿಮ ಬಂಗಾಳದ ತ್ವರಿತಗತಿ ನ್ಯಾಯಾಲಯಗಳು ಸಿವಿಲ್ ವ್ಯಾಜ್ಯಗಳು ಸೇರಿದಂತೆ ಹಲವು ಬಗೆಯ ಪ್ರಕರಣಗಳ ವಿಚಾರಣೆ ನಡೆಸುತ್ತವೆ. ಅವು ಅತ್ಯಾಚಾರ ಪ್ರಕರಣಗಳು ಹಾಗೂ ಪೋಕ್ಸೊ ಕಾಯ್ದೆಯ ಅಡಿ ದಾಖಲಾಗುವ ಪ್ರಕರಣಗಳ ವಿಚಾರಣೆಗೆ ಇರುವ ವಿಶೇಷ ನ್ಯಾಯಾಲಯಗಳಲ್ಲ ಎಂದು ಸಚಿವೆ ವಿವರಿಸಿದ್ದಾರೆ.

ಪಶ್ಚಿಮ ಬಂಗಾಳದ ತ್ವರಿತಗತಿ ನ್ಯಾಯಾಲಯಗಳಲ್ಲಿ ಜೂನ್ 30ರವರೆಗೆ 81 ಸಾವಿರಕ್ಕೂ ಹೆಚ್ಚು ಪ್ರಕರಣಗಳು ವಿಚಾರಣೆಯ ಹಂತದಲ್ಲಿ ಇದ್ದವು. ಅತ್ಯಾಚಾರ ಪ್ರಕರಣಗಳು ಹಾಗೂ ಪೋಕ್ಸೊ ಕಾಯ್ದೆಯ ಅಡಿ ದಾಖಲಾದವನ್ನೂ ಸೇರಿ ಒಟ್ಟು 48,600 ಪ್ರಕರಣಗಳು ವಿಚಾರಣೆಯ ಹಂತದಲ್ಲಿ ಇದ್ದರೂ, ರಾಜ್ಯವು ಹೆಚ್ಚುವರಿಯಾಗಿ 11 ತ್ವರಿತಗತಿ ವಿಶೇಷ ನ್ಯಾಯಾಲಯಗಳನ್ನು ಇನ್ನೂ ಕಾರ್ಯಾರಂಭ ಮಾಡಿಲ್ಲ ಎಂದು ದೇವಿ ಅವರು ಕಳವಳ ವ್ಯಕ್ತಪಡಿಸಿದ್ದಾರೆ.

ಈ ನ್ಯಾಯಾಲಯಗಳ ವಿಚಾರವಾಗಿ ರಾಜ್ಯವು ಒದಗಿಸಿರುವ ಮಾಹಿತಿಯು ಸಮರ್ಪಕವಾಗಿ ಇಲ್ಲ ಎಂದು ಹೇಳಿರುವ ಸಚಿವೆ, ಇದು ವಿಳಂಬವನ್ನು ಮುಚ್ಚಿಕೊಳ್ಳುವ ಯತ್ನ ಎಂದು ದೂರಿದ್ದಾರೆ.

ಮಾನವ ಹಕ್ಕು ಆಯೋಗದಿಂದ ನೋಟಿಸ್

ನವದೆಹಲಿ (ಪಿಟಿಐ): ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಹಾಗೂ ಆಕೆಯ ಹತ್ಯೆಯನ್ನು ಖಂಡಿಸಿ ಪ್ರತಿಭಟನೆ ನಡೆಸುತ್ತಿದ್ದವರ ಮೇಲೆ ಆಗಸ್ಟ್ 27ರಂದು ಕೋಲ್ಕತ್ತ ಪೊಲೀಸರು ಅತಿಯಾಗಿ ಬಲಪ್ರಯೋಗ ಮಾಡಿದ್ದಾರೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು (ಎನ್‌ಎಚ್‌ಆರ್‌ಸಿ) ಕೋಲ್ಕತ್ತ ಪೊಲೀಸ್ ಆಯುಕ್ತರಿಗೆ ನೋಟಿಸ್ ಜಾರಿಗೊಳಿಸಿದೆ.

ಆರೋಪಕ್ಕೆ ಸಂಬಂಧಿಸಿದಂತೆ ಕೈಗೊಂಡ ಕ್ರಮ ಏನು ಎಂಬ ಬಗ್ಗೆ ಪೊಲೀಸ್ ಆಯುಕ್ತರಿಂದ ಎರಡು ವಾರಗಳಲ್ಲಿ ವರದಿ ಬೇಕು ಎಂದು ಆಯೋಗವು ತಿಳಿಸಿದೆ.

ಆಗಸ್ಟ್ 27ರ 'ನಬನ್ನಾ ಅಭಿಯಾನ್' ಪ್ರತಿಭಟನೆಯ ಸಂದರ್ಭದಲ್ಲಿ ಪೊಲೀಸರು ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದವರ ಮೇಲೆ ಅಗತ್ಯಕ್ಕಿಂತ ಹೆಚ್ಚು ಬಲ ಪ್ರಯೋಗ ಮಾಡಿದ್ದಾರೆ ಎಂದು ಒ.ಪಿ. ವ್ಯಾಸ್ ಎನ್ನುವವರು ಆಯೋಗಕ್ಕೆ ದೂರು ಸಲ್ಲಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಮಣಿಪುರ: ಬಿಜೆಪಿ ವಕ್ತಾರನ ಮನೆ ಮೇಲೆ ಮತ್ತೆ ದಾಳಿ

ಇಂಫಾಲ್ (ಪಿಟಿಐ): ಮಣಿಪುರದ ಬಿಜೆಪಿ ವಕ್ತಾರ ಮೈಕಲ್ ಲಾಮಜಾಂಥಾಂಗ್ ಅವರ ಪೂರ್ವಜರ ನಿವಾಸಕ್ಕೆ ಅಪರಿಚಿತ ದುಷ್ಕರ್ಮಿಗಳು ಶನಿವಾರ ಬೆಂಕಿ ಹಚ್ಚಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.



ಬಿರೇನ್ ಸಿಂಗ್

ಟುಯಿಬಾಂಗ್ ಉಪ ವಿಭಾಗದ ಪೆನಿಯೆಲ್ ಗ್ರಾಮದಲ್ಲಿರುವ ಮನೆಯ ಆವರಣದೊಳಗೆ ನಿಲ್ಲಿಸಿದ್ದ ಕಾರನ್ನು ಸಹ ದಾಳಿಯ ಸಮಯದಲ್ಲಿ ಸುಟ್ಟು ಹಾಕಲಾಗಿದೆ.

ಇದೇ ಮನೆಯ ಮೇಲೆ ಹಿಂದಿನ ವಾರ ನಡೆದ ದಾಳಿಗೆ ಸಂಬಂಧಿಸಿದಂತೆ, ವಿಚಾರಣೆ ನಡೆಸಿ ಆದಷ್ಟು ಬೇಗ ವರದಿ ಸಲ್ಲಿಸುವಂತೆ ಚುರಚಂದಪುರ ಜಿಲ್ಲಾಧಿಕಾರಿ ಧರುಣ್ ಕುಮಾರ್ ಎಸ್. ಅವರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಪತ್ರ ಬರೆದಿದ್ದಾರೆ ಎಂದು ಹೇಳಿದ್ದಾರೆ.

ಮನೆಯ ಮೇಲೆ ಮೂರನೇ ಬಾರಿಗೆ ನಡೆದ ದಾಳಿಯನ್ನು ಖಂಡಿಸಿರುವ ಮುಖ್ಯಮಂತ್ರಿ ಬಿರೇನ್ ಸಿಂಗ್, 'ಶಾಂತಿ ರ‍್ಯಾಲಿಗಳ ಸೋಗಿನಲ್ಲಿ ಆಗಾಗ್ಗೆ ನಮ್ಮ ಜನರನ್ನು (ಥಾಡೌ) ಗುರಿಯಾಗಿಸಿಕೊಂಡು ದಾಳಿ ನಡೆಸಲಾಗುತ್ತಿದೆ. ಇಂತಹ ಪ್ರಚೋದನಕಾರಿ ಕೃತ್ಯಗಳನ್ನು ಸಹಿಸುವುದಿಲ್ಲ. ಮುನ್ನೆಚ್ಚರಿಕೆಯ ಹೊರತಾಗಿಯೂ ಭದ್ರತೆ ಒದಗಿಸಲು ವಿಫಲವಾದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ಮುಖ್ಯಮಂತ್ರಿ 'ಎಕ್ಸ್'ನ ಪೋಸ್ಟ್‌ನಲ್ಲಿ ಹೇಳಿದ್ದಾರೆ. ಕುಕಿಗಳ ಅತಿದೊಡ್ಡ ಉಪ ಬುಡಕಟ್ಟು ಥಾಡೌ ಜನಾಂಗವಾಗಿದೆ.

ಜೆಎಂಎಂ ಮಾಜಿ ಶಾಸಕ ಬಿಜೆಪಿಗೆ ಸೇರ್ಪಡೆ



ರಾಂಚಿ (ಪಿಟಿಐ): ಜಾರ್ಖಂಡ್‌ನ ಮಾಜಿ ಮುಖ್ಯಮಂತ್ರಿ ಚಂಪೈ ಸೊರೇನ್ ಅವರು ಬಿಜೆಪಿ ಸೇರಿದ ಒಂದು ದಿನದ ನಂತರ, ಜಾರ್ಖಂಡ್ ಮುಕ್ತಿ ಮೋರ್ಚಾದ (ಜೆಎಂಎಂ) ಮಾಜಿ ಶಾಸಕ ಲೋಬಿನ್ ಹೆಂಬ್ರಮ್ ಶನಿವಾರ ಕಮಲ ಪಾಳಯಕ್ಕೆ ಸೇರ್ಪಡೆಗೊಂಡರು.

ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಸಮ್ಮುಖದಲ್ಲಿ ರಾಜ್ಯ ಘಟಕದ ಅಧ್ಯಕ್ಷ ಬಾಬುಲಾಲ್ ಮರಾಂಡಿ ಹೆಂಬ್ರಮ್ ಅವರಿಗೆ ಬಿಜೆಪಿಯ ಸದಸ್ಯತ್ವ ನೀಡಿದರು.

ನಕ್ಸಲ್ ನೈತಾಮ್ ಶರಣು



ಮುಂಬೈ (ಪಿಟಿಐ): ನಕ್ಸಲ್ ಕೇಡರ್ ಅಲಿಯಾಸ್ ಮಾನ್ಯಾ ಕಿಂಜೊ ನೈತಾಮ್ ಅವರು ಗಢಚಿರೋಲಿ ಪೊಲೀಸ್ ಠಾಣೆಗೆ ಬಂದು ಶುಕ್ರವಾರ ಶರಣಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದರು.

ಈ ಪ್ರದೇಶದಲ್ಲಿ ನಡೆದ ಕನಿಷ್ಠ 18 ಎನ್‌ಕೌಂಟರ್‌ನಲ್ಲಿ ನೈತಾಮ್ ಅವರು ಭಾಗಿಯಾಗಿದ್ದಾರೆ. ಎಂಟು ಮಂದಿ ಕೊಲೆ ಆರೋಪ ಸೇರಿದಂತೆ 34 ಪ್ರಕರಣಗಳು ಇವರ ವಿರುದ್ಧ ದಾಖಲಾಗಿವೆ ಎಂದು ತಿಳಿಸಿದರು. ನೈತಾಮ್ ಅವರು 2007ರಲ್ಲಿ ನಕ್ಸಲ್ ಚಳವಳಿಗೆ ಸೇರ್ಪಡೆಯಾಗಿದ್ದರು.



ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಅವರು ಬೆಂಗಳೂರು–ಮದುರೆ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿಗೆ ಮದುರೆಯಲ್ಲಿ ಶನಿವಾರ ಹೂವು ಹಾಕಿ, ಶುಭ ಕೋರಿದರು. ಈ ರೈಲಿಗೆ ಪ್ರಧಾನಿ ನರೇಂದ್ರ ಮೋದಿ ವರ್ಚುವಲ್ ಆಗಿ ಹಸಿರು ನಿಶಾನೆ ತೋರಿದರು –ಪಿಟಿಐ ಚಿತ್ರ

ಪ್ರಯಾಣ ಹಸನಾಗುವವರೆಗೆ ಪ್ರಯತ್ನ ನಿಲ್ಲದು- ಮೋದಿ

ನವದೆಹಲಿ (ಪಿಟಿಐ): 'ರೈಲಿನಲ್ಲಿ ಎಲ್ಲರಿಗೂ ಆರಾಮದಾಯಕ ಪ್ರಯಾಣ ವ್ಯವಸ್ಥೆ ಸಿಗುವವರೆಗೂ ನಮ್ಮ ಪ್ರಯತ್ನವನ್ನು ನಿಲ್ಲಿಸುವುದಿಲ್ಲ' ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಹೇಳಿದ್ದಾರೆ.

'ಕಠಿಣ ಪರಿಶ್ರಮದ ಮೂಲಕ, ರೈಲ್ವೆಯು ದೀರ್ಘಕಾಲದ ಸಮಸ್ಯೆಗಳನ್ನು ಪರಿಹರಿಸುವ ಸಲುವಾಗಿ ಕಾರ್ಯನಿರತವಾಗಿದ್ದು, ಹೊಸ ಭರವಸೆಯನ್ನು ನೀಡುತ್ತಿದೆ' ಎಂದರು. ಮೀರತ್‌ನಿಂದ ಲಖನೌ, ಮದುರೆಯಿಂದ ಬೆಂಗಳೂರು ಮತ್ತು ಚೆನ್ನೈನಿಂದ ನಾಗರ್‌ಕೋಯಿಲ್‌ಗೆ ಸಂಪರ್ಕ ಕಲ್ಪಿಸುವ ವಂದೇ ಭಾರತ್ ರೈಲುಗಳಿಗೆ ಮೋದಿ ಚಾಲನೆ ನೀಡಿದರು.

ವಿಜಯವಾಡದಲ್ಲಿ 200 ವರ್ಷಗಳಲ್ಲಿ ಗರಿಷ್ಠ ಮಳೆ ದಾಖಲು

ಆಂಧ್ರಪ್ರದೇಶ: ಭಾರಿ ಮಳೆಗೆ 8 ಸಾವು

ಹೈದರಾಬಾದ್: ಆಂಧ್ರಪ್ರದೇಶದಲ್ಲಿ ಶುಕ್ರವಾರದಿಂದ ಭಾರಿ ಮಳೆ ಸುರಿಯುತ್ತಿದ್ದು, ಮಳೆ ಸಂಬಂಧಿತ ಅವಘಡಗಳಿಂದ ಕನಿಷ್ಠ ಎಂಟು ಮಂದಿ ಮೃತಪಟ್ಟಿದ್ದಾರೆ.

ವಿಜಯವಾಡದ ಸುನ್ನಪ್ಪುಬಟ್ಟಿಲ ಸೆಂಟರ್‌ನಲ್ಲಿ ಮನೆಯೊಂದರ ಮೇಲೆ ಬೃಹತ್ ಬಂಡೆಯೊಂದು ಉರುಳಿದ್ದು, ಒಂದೇ ಕುಟುಂಬದ ನಾಲ್ವರು ಮೃತಪಟ್ಟಿದ್ದಾರೆ. ಸ್ಥಳೀಯ ಆಡಳಿತವು ಯಂತ್ರೋಪಕರಣಗಳನ್ನು ಬಳಸಿ ಮನೆಯ ಅವಶೇಷಗಳನ್ನು ತೆರವುಗೊಳಿಸುವ ಮೂಲಕ ಮೃತದೇಹಗಳನ್ನು ಹೊರತೆಗೆಯಲಾಗಿದೆ.

ಗುಂಟೂರು ಜಿಲ್ಲೆಯ ಉಪ್ಪಲಪಾಡುವಿನಲ್ಲಿ ಶಿಕ್ಷಕ ಹಾಗೂ ಇಬ್ಬರು ವಿದ್ಯಾರ್ಥಿಗಳು ಚಲಿಸುತ್ತಿದ್ದ ಕಾರು ಪ್ರವಾಹದಲ್ಲಿ ಕೊಚ್ಚಿ ಹೋಗಿದೆ. ಮೃತರನ್ನು ನೆಡುಂಪಲ್ಲಿ ರಾಘವೇಂದ್ರ(38), ಪಸುಪುಲೇಟಿ ಸೌದಿ(6) ಮತ್ತು ಕೋಡೂರಿ ಮಾನ್ವಿತ್(9) ಎಂದು ಗುರುತಿಸಲಾಗಿದೆ. ಮತ್ತೊಂದು ಘಟನೆಯಲ್ಲಿ ಮಂಗಳಗಿರಿಯ ಗಂಡಾಲಯ್ಯ ಪೇಟದಲ್ಲಿ ಭೂಕುಸಿತಕ್ಕೆ ವೃದ್ಧೆಯೊಬ್ಬರು ಬಲಿಯಾಗಿದ್ದಾರೆ.

ವಿಜಯವಾಡ ನಗರದ ಪೂರ್ವ ಭಾಗದಲ್ಲಿನ ಬೆಂಜ್ ವೃತ್ತದಲ್ಲಿ ಕಳೆದ 24 ಗಂಟೆಗಳಲ್ಲಿ 16 ಸೆಂ.ಮೀಗೂ ಹೆಚ್ಚು ಮಳೆಯಾಗಿದ್ದು, ಇದು ಆಗಸ್ಟ್ ತಿಂಗಳ ಒಂದೇ ದಿನದಲ್ಲಿ ಈವರೆಗೆ ಸುರಿದ ಅತಿ ಹೆಚ್ಚಿನ ಮಳೆಯಾಗಿದೆ. ವಿಜಯವಾಡ ವಿಮಾನ ನಿಲ್ದಾಣದಲ್ಲಿ 123 ಮಿ.ಮೀ. ಮಳೆಯಾಗಿದ್ದು, ಕಳೆದ 200 ವರ್ಷಗಳಲ್ಲಿ ಆಗಸ್ಟ್ ತಿಂಗಳ ದಿನವೊಂದರಲ್ಲಿ ಸುರಿದ ಹೆಚ್ಚಿನ ಪ್ರಮಾಣದ ಮಳೆಯಾಗಿದೆ ಎಂದು ಆಂಧ್ರಪ್ರದೇಶದ ಹವಾಮಾನ ಪುರುಷ ಎಂದೇ ಹೆಸರಾಗಿರುವ ಕೆ. ಪ್ರಣೀತ್ ತಿಳಿಸಿದ್ದಾರೆ.

ಪರಿಹಾರ ಘೋಷಣೆ: ಪ್ರವಾಹದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ಆಂಧ್ರಪ್ರದೇಶ ಸರ್ಕಾರವು ₹5 ಲಕ್ಷ ಪರಿಹಾರ ಘೋಷಿಸಿದೆ. ಇನ್ನೂ 2-3 ದಿನ ಭಾರಿ ಮಳೆ ಮುಂದುವರಿಯುವ ಮುನ್ಸೂಚನೆ ಇದ್ದು, ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು ಮಳೆ ಪರಿಸ್ಥಿತಿ ಕುರಿತು ಅಧಿಕಾರಿಗಳೊಂದಿಗೆ ಪರಿಶೀಲನಾ ಸಭೆ ನಡೆಸಿದ್ದಾರೆ.



ವಿಜಯವಾಡದ ಸುನ್ನಪ್ಪುಬಟ್ಟಿಲ ಸೆಂಟರ್‌ನಲ್ಲಿ ಮನೆಯೊಂದರ ಮೇಲೆ ಬೃಹತ್ ಬಂಡೆಯೊಂದು ಉರುಳಿದ್ದು, ಜೆಸಿಬಿ ಬಳಸಿ ಅವಶೇಷಗಳನ್ನು ತೆರವುಗೊಳಿಸಲಾಯಿತು –ಪಿಟಿಐ ಚಿತ್ರ

ಸೆಪ್ಟೆಂಬರ್‌ನಲ್ಲೂ ವಾಡಿಕೆಗಿಂತ ಹೆಚ್ಚು ಮಳೆ

ನವದೆಹಲಿ (ಪಿಟಿಐ): ದೇಶದಲ್ಲಿ ಸೆಪ್ಟೆಂಬರ್ ತಿಂಗಳಿನಲ್ಲಿಯೂ ವಾಡಿಕೆಗಿಂತ ಹೆಚ್ಚಿನ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ದೇಶದ ಬಹುತೇಕ ಪ್ರದೇಶದಲ್ಲಿ ವಾಡಿಕೆಗಿಂತ ಹೆಚ್ಚಿನ ಮಳೆಯಾಗಲಿದೆ. ಉತ್ತರಾಖಂಡ, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ರಾಜಸ್ಥಾನ ಮತ್ತು ಮಧ್ಯಪ್ರದೇಶದಲ್ಲಿ ಸೆಪ್ಟೆಂಬರ್ ತಿಂಗಳಿನಲ್ಲಿ ಭಾರಿ ಮಳೆಯಾಗಲಿದೆ. ಬಿಹಾರದ ಉತ್ತರ ಭೂಭಾಗ, ಉತ್ತರ ಪ್ರದೇಶದ ಈಶಾನ್ಯ ಭಾಗದಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಲಿದೆ ಎಂದು ಮುನ್ಸೂಚನೆ ನೀಡಿದೆ.

ದೇಶದಲ್ಲಿ ಆಗಸ್ಟ್ ತಿಂಗಳಿನಲ್ಲಿ ಸರಾಸರಿ 749 ಮಿ.ಮೀ. ಮಳೆ ಸುರಿದಿದೆ. ಇದು ವಾಡಿಕೆಗಿಂತ (701. ಮಿ.ಮೀ.) ಶೇ 16 ಹೆಚ್ಚಾಗಿದೆ.

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ

ಉಪ ಪ್ರಧಾನ ವ್ಯವಸ್ಥಾಪಕರು-3 ರವರ ಕಛೇರಿ, ಬೆಂಘತ್ಯಾನಿನಿ, 1ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು-560 052.

ಸಂ: ಉಪ್ರವ್ಯ-3/ಬೆಂಘತ್ಯಾನಿನಿ/ಟೆಂಡ್/ಪಿಪಿಪಿ/2024-25 ದಿನಾಂಕ:31.08.2024

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ಜಿಒಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

1. ಬೆಂಗಳೂರು ಘನ ತ್ಯಾಜ್ಯ ನಿರ್ವಹಣೆ ನಿಯಮಿತವು ಕಂಪನಿಯು ಕಂಪನಿಗಳ ಕಾಯಿದೆ, 2013 ರ ಪ್ರಕಾರ ರಚನೆಯಾಗಿದ್ದು, ನಿರ್ಮಾಣ ಮತ್ತು ಕೆಡವುವ ತ್ಯಾಜ್ಯ ಸೇರಿದಂತೆ ವಿವಿಧ ರೀತಿಯ ತ್ಯಾಜ್ಯವನ್ನು ನಿರ್ವಹಿಸಲು ಬಿಬಿಎಂಪಿ ಸೇರಿದಂತೆ ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯೊಳಗೆ ವ್ಯವಹಾರವನ್ನು ನಿರ್ವಹಿಸುವ ಜವಾಬ್ದಾರಿಯನ್ನು ಹೊಂದಿದೆ.
2. ಈ ನಿಟ್ಟಿನಲ್ಲಿ, ತ್ಯಾಜ್ಯವನ್ನು ನಿರ್ಮಿಸಲು ಮತ್ತು ಕೆಡವಲು ಸಮಗ್ರ ನಿರ್ವಹಣಾ ಯೋಜನೆಯನ್ನು ಸಿದ್ಧಪಡಿಸಲಾಗಿದೆ ಮತ್ತು PPP ಮಾದರಿಯಲ್ಲಿ ತೆಗೆದುಕೊಳ್ಳಲು ಯೋಜಿಸಲಾಗಿದೆ. ಈ ಯೋಜನೆಯನ್ನು ಪಿಪಿಪಿ ಕ್ರಮದಲ್ಲಿ ಕೈಗೊಳ್ಳಲು ಸರ್ಕಾರವು ಅನುಮೋದನೆ ನೀಡಿದೆ.
3. ಉಪ ಪ್ರಧಾನ ವ್ಯವಸ್ಥಾಪಕರು-3, ಬೆಂಗಳೂರು ಘನ ತ್ಯಾಜ್ಯ ನಿರ್ವಹಣಾ ನಿಯಮಿತ, ವ್ಯವಸ್ಥಾಪಕ ನಿರ್ದೇಶಕರು BSWML, ಬೆಂಗಳೂರು ಇವರ ಪರವಾಗಿ, ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಕೆಲಸಗಳಿಗಾಗಿ ಅರ್ಹ ಬಿಡ್‌ದಾರರಿಂದ ಬಿಡ್‌ಗಳನ್ನು ಆಹ್ವಾನಿಸುತ್ತಾರೆ. ಬಿಡ್ದುದಾರರು ಕರ್ನಾಟಕ ಸರ್ಕಾರದ KPP ಪೋರ್ಟಲ್ (ಅಂದರೆ https://kppp.karnataka.gov.in) ಮೂಲಕ ಕೆಳಗಿನ ಕೋಷ್ಟಕದಲ್ಲಿ ನೀಡಲಾದ ಕೆಲಸಗಳಿಗೆ ಬಿಡ್‌ಗಳನ್ನು ಸಲ್ಲಿಸಬಹುದು.
4. ಬಿಡ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ KPP ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಬಹುದು.
5. ಬಿಡ್ ದಾಖಲೆಗಳಲ್ಲಿ ಇತರ ವಿವರಗಳನ್ನು ನೋಡಬಹುದು.

ಡಿಸೈನ್ ಬಿಲ್ಡ್ ಫೈನಾನ್ಸ್ ಆಪರೇಟ್ ಮತ್ತು ಟ್ರಾನ್ಸ್‌ಫರ್ (DBFOT) 100% ರಿಯಾಯತಿ ಹೂಡಿಕೆಯೊಂದಿಗೆ ರಿಯಾಯಿತಿದಾರರ ನೇಮಕಾತಿ ಪ್ರಾಥಮಿಕ ಸಾಗಣೆ ಮತ್ತು ದ್ವಿತೀಯ ಸಾಗಣೆ ಮತ್ತು C&D ತ್ಯಾಜ್ಯವನ್ನು ಉದ್ದೇಶಿತ ಸಂಸ್ಕರಣಾ ಘಟಕಗಳಿಗೆ ದ್ವಿತೀಯ ಸಾಗಣೆಗೆ ಕೆಳಗಿನ ಪ್ರತಿಯೊಂದು ವಿವಿಧ ಪ್ಯಾಕೇಜ್‌ಗಳಲ್ಲಿ ಸಂಸ್ಕರಣಾ ಘಟಕಗಳ ಸ್ಥಾಪನೆ ಸೇರಿದಂತೆ 15 ವರ್ಷಗಳ ಅವಧಿಗೆ ಟೆಂಡರ್ ಆಹ್ವಾನ.

ಕ್ರ. ಸಂ	ಕಾಮಗಾರಿಯ ವಿವರ	*ಅಂದಾಜು ಪಿಪಿಪಿ ಮಾದರಿಯಲ್ಲಿ ಬಿಡ್ದಾರರಿಗೆ ಬಂಡವಾಳ ವೆಚ್ಚ (ಲಕ್ಷಗಳಲ್ಲಿ ರೂ.) GST ಹೊರತುಪಡಿಸಿ	ಇಎಂಡಿ (ರೂಗಳಲ್ಲಿ)	ಬಿಡ್ ಡಾಕ್ಯುಮೆಂಟ್ ವೆಚ್ಚ
1	**ಪ್ಯಾಕೇಜ್-1** (750 TPD ಸಂಗ್ರಹಣೆ, ಪ್ರಾಥಮಿಕ ಸಾಗಣೆ ಮತ್ತು ದ್ವಿತೀಯ ಸಾಗಣೆ ಮತ್ತು RFP ನಲ್ಲಿ ಉಲ್ಲೇಖಿಸಲಾದ ಸ್ಥಳಗಳ ಪ್ರಕಾರ C&D ತ್ಯಾಜ್ಯದ ಸಂಸ್ಕರಣೆ)	5325.00	**ರೂ. 1.00 ಲಕ್ಷಗಳು** ಇ-ಪಾವತಿಯ ಮೂಲಕ ಅಂದರೆ, ಆನ್‌ಲೈನ್/ ಆರ್‌ಟಿಜಿಎಸ್ / ಎನ್‌ಇಎಫ್‌ಟಿ / ಓಟಿಸಿ ಹಾಗೂ ಉಳಿದ **ರೂ. 25,62,500/-** ಬ್ಯಾಂಕ್ ಗ್ಯಾರಂಟಿ/ ಎಫ್‌ಡಿಆರ್ ಮೂಲಕ ರಾಷ್ಟ್ರೀಕೃತ/ ಶೆಡ್ಯೂಲ್ಡ್ ಬ್ಯಾಂಕ್‌ನಿಂದ ನೀಡುವುದು.	ಕೆಪಿಪಿ ಪೋರ್ಟಲ್ ಪ್ರಕಾರ
2	**ಪ್ಯಾಕೇಜ್-2** (750 TPD ಸಂಗ್ರಹಣೆ, ಪ್ರಾಥಮಿಕ ಸಾಗಣೆ ಮತ್ತು ದ್ವಿತೀಯ ಸಾಗಣೆ ಮತ್ತು RFP ನಲ್ಲಿ ಉಲ್ಲೇಖಿಸಲಾದ ಸ್ಥಳಗಳ ಪ್ರಕಾರ C&D ತ್ಯಾಜ್ಯದ ಸಂಸ್ಕರಣೆ)	5325.00	**ರೂ. 1.00 ಲಕ್ಷಗಳು** ಇ-ಪಾವತಿಯ ಮೂಲಕ ಅಂದರೆ, ಆನ್‌ಲೈನ್/ ಆರ್‌ಟಿಜಿಎಸ್ / ಎನ್‌ಇಎಫ್‌ಟಿ / ಓಟಿಸಿ ಹಾಗೂ ಉಳಿದ **ರೂ. 25,62,500/-** ಬ್ಯಾಂಕ್ ಗ್ಯಾರಂಟಿ/ ಎಫ್‌ಡಿಆರ್ ಮೂಲಕ ರಾಷ್ಟ್ರೀಕೃತ/ ಶೆಡ್ಯೂಲ್ಡ್ ಬ್ಯಾಂಕ್‌ನಿಂದ ನೀಡುವುದು.	ಕೆಪಿಪಿ ಪೋರ್ಟಲ್ ಪ್ರಕಾರ
3	**ಪ್ಯಾಕೇಜ್-3** (750 TPD ಸಂಗ್ರಹಣೆ, ಪ್ರಾಥಮಿಕ ಸಾಗಣೆ ಮತ್ತು ದ್ವಿತೀಯ ಸಾಗಣೆ ಮತ್ತು RFP ನಲ್ಲಿ ಉಲ್ಲೇಖಿಸಲಾದ ಸ್ಥಳಗಳ ಪ್ರಕಾರ C&D ತ್ಯಾಜ್ಯದ ಸಂಸ್ಕರಣೆ)	5325.00	**ರೂ. 1.00 ಲಕ್ಷಗಳು** ಇ-ಪಾವತಿಯ ಮೂಲಕ ಅಂದರೆ, ಆನ್‌ಲೈನ್/ ಆರ್‌ಟಿಜಿಎಸ್ / ಎನ್‌ಇಎಫ್‌ಟಿ / ಓಟಿಸಿ ಹಾಗೂ ಉಳಿದ **ರೂ. 25,62,500/-** ಬ್ಯಾಂಕ್ ಗ್ಯಾರಂಟಿ/ ಎಫ್‌ಡಿಆರ್ ಮೂಲಕ ರಾಷ್ಟ್ರೀಕೃತ/ ಶೆಡ್ಯೂಲ್ಡ್ ಬ್ಯಾಂಕ್‌ನಿಂದ ನೀಡುವುದು.	ಕೆಪಿಪಿ ಪೋರ್ಟಲ್ ಪ್ರಕಾರ
4	**ಪ್ಯಾಕೇಜ್-4** (750 TPD ಸಂಗ್ರಹಣೆ, ಪ್ರಾಥಮಿಕ ಸಾಗಣೆ ಮತ್ತು ದ್ವಿತೀಯ ಸಾಗಣೆ ಮತ್ತು RFP ನಲ್ಲಿ ಉಲ್ಲೇಖಿಸಲಾದ ಸ್ಥಳಗಳ ಪ್ರಕಾರ C&D ತ್ಯಾಜ್ಯದ ಸಂಸ್ಕರಣೆ)	5325.00	**ರೂ. 1.00 ಲಕ್ಷಗಳು** ಇ-ಪಾವತಿಯ ಮೂಲಕ ಅಂದರೆ, ಆನ್‌ಲೈನ್/ ಆರ್‌ಟಿಜಿಎಸ್ / ಎನ್‌ಇಎಫ್‌ಟಿ / ಓಟಿಸಿ ಹಾಗೂ ಉಳಿದ **ರೂ. 25,62,500/-** ಬ್ಯಾಂಕ್ ಗ್ಯಾರಂಟಿ/ ಎಫ್‌ಡಿಆರ್ ಮೂಲಕ ರಾಷ್ಟ್ರೀಕೃತ/ ಶೆಡ್ಯೂಲ್ಡ್ ಬ್ಯಾಂಕ್‌ನಿಂದ ನೀಡುವುದು.	ಕೆಪಿಪಿ ಪೋರ್ಟಲ್ ಪ್ರಕಾರ

* ತೋರಿಸಿರುವ ಮೂಲ ವೆಚ್ಚವು ಬಿಡ್ ನಿಯತಾಂಕಗಳನ್ನು ನಿರ್ಣಯಿಸಲು ಅಂದಾಜು ಮತ್ತು ಸೂಚಕವಾಗಿದೆ ಮತ್ತು ಕ್ಯಾಪೆಕ್ಸ್ ಮತ್ತು ಒಪೆಕ್ಸ್ ಹೂಡಿಕೆಯು ಬಿಡ್‌ದಾರರದಾಗಿರುತ್ತದೆ. ಹಣಕಾಸಿನ ಬಿಡ್‌ಗಳನ್ನು ನಿರ್ಣಯಿಸಲು ಬಿಡ್ಡಿಂಗ್ ಮಾನದಂಡ RFP ಡಾಕ್ಯುಮೆಂಟ್‌ನ ಪ್ರಕಾರ ಟಿಪ್ಪಿಂಗ್ ಶುಲ್ಕ ಮಾತ್ರವಾಗಿರುತ್ತದೆ.

ಟೆಂಡರ್ ವಿವರ: 1. KPP ಪೋರ್ಟಲ್‌ನಲ್ಲಿ ಬಿಡ್ ಡಾಕ್ಯುಮೆಂಟ್ ಅನ್ನು ಅಪ್‌ಲೋಡ್ ಮಾಡವ **ದಿನಾಂಕ: 05.09.2024**. 2. ಬಿಡ್ ಪೂರ್ವ ಸಭೆಯ **ದಿನಾಂಕ: 17.09.2024 ರಂದು 15:00 ಗಂಟೆಗೆ** ಮುಖ್ಯ ಇಂಜಿನಿಯರ್ ಮತ್ತು ಮುಖ್ಯ ಜನರಲ್ ಮ್ಯಾನೇಜರ್ (ಟೆಕ್), BSWML, UNI ಬಿಲ್ಡಿಂಗ್, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು – 560052 ಕಚೇರಿಯಲ್ಲಿ.
3. KPP ಪೋರ್ಟಲ್‌ನಲ್ಲಿ ಬಿಡ್‌ಗಳನ್ನು ಸಲ್ಲಿಸುವ ಕೊನೆಯ **ದಿನಾಂಕ: 26.09.2024, 16:00 ಗಂಟೆಯವರೆಗೆ.**
4. KPP ಪೋರ್ಟಲ್‌ನಲ್ಲಿ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:27.09.2024, 16:30 ಗಂಟೆಯ ನಂತರ.**

ಸಹಿ/- ಉಪ ಪ್ರಧಾನ ವ್ಯವಸ್ಥಾಪಕರು-3, ಬೆಂಘತ್ಯಾನಿನಿ

ವಾಸಾಸಂಇ/ವಾಪ್ರ/1782/2024-25

ಕಥನಗಳ ಗಣಿ ಕೆಜಿಎಫ್..!

ಎಂ.ವೆಂಕಟಸ್ವಾಮಿ

1880ರಲ್ಲಿ ಕೆಜಿಎಫ್ ಪ್ರದೇಶದಲ್ಲಿ ಆಧುನಿಕ ಚಿನ್ನದ ಗಣಿಗಳು ಪ್ರಾರಂಭವಾದವು. ಆಗ ಭಾರತ ದೇಶ ಇನ್ನೂ ಅಂಧಕಾರದಲ್ಲಿಯೇ ಮುಳುಗಿಹೋಗಿತ್ತು. ಆದರೆ ಸುಮಾರು ಎರಡೂವರೆ ಸಾವಿರ ವರ್ಷಗಳ ಹಿಂದೆಯೇ ಇಲ್ಲಿ ಚಿನ್ನದ ಗಣಿಗಾರಿಕೆ ನಡೆದು ಯಾವುದೋ ಕಾರಣಕ್ಕೆ ಸ್ಥಗಿತಗೊಂಡಿತ್ತು. ಇಲ್ಲಿನ ಚಿನ್ನ ಸಿಂಧೂ ನದಿಯ ನಾಗರಿಕತೆಯ ತೊಟ್ಟಿಲುಗಳವರೆಗೂ ಸಾಗಿಹೋಗಿರುವುದು ದೃಢಪಟ್ಟಿದೆ. ಆಧುನಿಕ ಕಾಲದಲ್ಲಿ ಚಿನ್ನದ ಗಣಿಗಳು ಪ್ರಾರಂಭವಾದಾಗ ಆಫ್ರಿಕಾದಲ್ಲಿ ಮಾತ್ರ ಚಿನ್ನದ ಗಣಿಗಳು ಕಾರ್ಯ ನಿರ್ವಹಿಸುತ್ತಿದ್ದವು. ಇಷ್ಟಕ್ಕೂ ಕೆಜಿಎಫ್ ಗಣಿಗಳ ಬಗ್ಗೆ ಯಾಕಿಷ್ಟು ಕುತೂಹಲ? ಭಾರತ ಸ್ವಾತಂತ್ರ್ಯ ಪಡೆದುಕೊಂಡ ಕಾಲಕ್ಕೆ ಶತಮಾನಗಳ ಕಾಲ ವಿದೇಶಿಯರಿಂದ ಹಿಂಡಿ ಹಿಪ್ಪೆಯಾಗಿತ್ತು. ಮೊದಲ ಪ್ರಧಾನಮಂತ್ರಿ ಜವಾಹರಲಾಲ್ ನೆಹರೂ ಅವರು ಪಂಚ ವಾರ್ಷಿಕ ಯೋಜನೆಗಳನ್ನು ಪ್ರಾರಂಭಿಸಿದಾಗ ಹಣಕ್ಕಾಗಿ ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಬಾಗಿಲನ್ನು ತಟ್ಟಬೇಕಾಯಿತು. ಆಗ ಐಎಂಎಫ್ ಆಡಳಿತ, 'ಸಾಲ ಕೊಡುತ್ತೇವೆ, ಆದರೆ ಅದನ್ನು ಹೇಗೆ ಹಿಂದಿರುಗುಸುತ್ತೀರಿ? ನಿಮ್ಮಲ್ಲಿ ಯಾವ ಸಂಪನ್ಮೂಲಗಳಿವೆ?' ಎಂದು ಕೇಳಿತು. ಆಗ ನೆಹರೂ, 'ನಮ್ಮ ಬಳಿ ಕೋಲಾರ ಚಿನ್ನದ ಗಣಿಗಳಿವೆ' ಎಂದಾಗ, ಭಾರತಕ್ಕೆ ತಕ್ಷಣವೇ ಸಾಲ ದೊರಕಿ ಮೊದಲ ಪಂಚ ವಾರ್ಷಿಕ ಯೋಜನೆ ಚಾಲನೆಗೊಂಡಿತು.

ಮೊದಲಿಗೆ ಚಿನ್ನದ ಗಣಿಗಳನ್ನು ಬ್ರಿಟನ್ನಿನ ಗಣಿ ಉದ್ಯಮಿ, ಗಣಿತಜ್ಞ ಜಾನ್ ಟೇಲರ್ ಕೆಜಿಎಫ್‌ನಲ್ಲಿ ಶುರು ಮಾಡಿದಾಗ ಸ್ಥಳೀಯ ತೆಲುಗು-ಕನ್ನಡಿಗರು ಗಣಿಗಳಲ್ಲಿ ಕೆಲಸ ಮಾಡಲು ನಿರಾಕರಿಸಿದರು. ಆಗ ಬ್ರಿಟಿಷರ ಏಜೆಂಟ್ ಕಂಗಾನಿಸ್, ಅಂದಿನ ತಮಿಳುನಾಡಿನ ಉತ್ತರ ಮತ್ತು ದಕ್ಷಿಣ ಆರ್ಕಾಟ್ ಜಿಲ್ಲೆಗಳ ಬಡವರು, ಜೀತದಾಳುಗಳು ಮತ್ತು ಜೈಲುಗಳಿಂದ ಬಿಡುಗಡೆಯಾದವರಿಗೆ ಹಣ ಕೊಟ್ಟು ಕರೆದುಕೊಂಡು ಬಂದರು. ಅವರು ಗಣಿಗಳ ಸುತ್ತಲೂ ಗುಡಾರಗಳನ್ನು ಹಾಕಿಕೊಂಡು ಕೆಲಸದಲ್ಲಿ ತೊಡಗಿಕೊಂಡರು. ವಿದ್ಯುತ್ ಇಲ್ಲದ ಕಾಲದಲ್ಲಿ ಹೊಂಗೆಎಣ್ಣೆ ದೀಪ, ಹೊಗೆಸೊಪ್ಪು, ಬೀಡಿ ಮತ್ತು ರಾಗಿಹಿಟ್ಟನ್ನು ತೆಗೆದುಕೊಂಡು ಗಣಿಗಳ ಒಳಕ್ಕೆ ಹೋದವರು ಎರಡು-ಮೂರು ದಿನಗಳು ಅಲ್ಲೇ ಉಳಿದುಕೊಂಡು ಕೆಲಸ ಮಾಡಿ ಬರುತ್ತಿದ್ದರು. ಬರಿ ಮೈಯಲ್ಲಿ ಕೆಲಸ ಮಾಡುತ್ತಿದ್ದ ಇವರು ಹಗ್ಗಗಳ ಮೂಲಕವೇ ಇಳಿದು ಹೋಗಬೇಕಾಗಿತ್ತು ಮತ್ತು ಮೇಲಕ್ಕೆ ಬರಬೇಕಾಗಿತ್ತು. ಒಳಗೆ ಹೋದ ಎಷ್ಟೋ ಜನರು ಹಿಂದಕ್ಕೆ ಬರುತ್ತಿರಲಿಲ್ಲ. ಇವರೆಲ್ಲ ತಾತ್ಕಾಲಿಕ ಕೆಲಸಗಾರರಾಗಿದ್ದರು. 'ಆಳಕ್ಕೆ ಇಳಿದರೆ ಹೆಣ, ಮೇಲೆ ಬಂದರೆ ಹಣ' ಎಂಬ ಗಾದೆ ಇವರಿಗಾಗಿಯೇ ಹುಟ್ಟಿಕೊಂಡಿತ್ತು.

1890-1900 ರಲ್ಲಿ ಬ್ರಿಟಿಷರು ಸಣ್ಣ ಬೋಲ್ಟ್‌ನಿಂದ ಹಿಡಿದು ದೈತ್ಯಾಕಾರದ ಯಂತ್ರಗಳವರೆಗೆ ಬ್ರಿಟನ್‌ನಲ್ಲಿ ತಯಾರಿಸಿ ಇಲ್ಲಿಗೆ ತಂದು ಗಣಿಗಳ ಒಳಗೆ ಮತ್ತು ಮೇಲೆ ಜೋಡಿಸಿದರು. ಮುಂದೆ ಜಗತ್ತಿನ ಆಧುನಿಕ ತಂತ್ರಜ್ಞಾನವನ್ನು ಕೆಜಿಎಫ್ ಗಣಿಗಳು ಅಭಿವೃದ್ಧಿಪಡಿಸಿಕೊಳ್ಳುತ್ತಾ ಸಾಗಿದವು. ಇದೇ ಕಾಲಕ್ಕೆ ಬ್ರಿಟಿಷರು ಆಫ್ರಿಕಾದ ವಿಟ್‌ವಾಟರ್ಸ್‌ರ್ಯಾಂಡ್ ಮತ್ತು ಜೋಹಾನ್ಸ್‌ಬರ್ಗ್‌ನಲ್ಲಿ ಚಿನ್ನದ ಗಣಿಗಾರಿಕೆಯನ್ನು ನಡೆಸುತ್ತಿದ್ದರು. ಅಲ್ಲಿನ ನೀಗ್ರೊಗಳಿಗಿಂತ ಹೆಚ್ಚು ಚಾಕಚಕ್ಯತೆ, ನಿಪುಣತೆ ಮತ್ತು ತಂತ್ರಗಾರಿಕೆಯನ್ನು ಕೆಜಿಎಫ್ ಗಣಿಗಳ ತಮಿಳು ಕಾರ್ಮಿಕರು ಅಳವಡಿಕೊಂಡಿದ್ದನ್ನು ಗಮನಿಸಿದ ಬ್ರಿಟಿಷರು, ಕೆಜಿಎಫ್ ಕಾರ್ಮಿಕರನ್ನು ಪ್ರಶಂಸಿದರು. 1910ರಲ್ಲಿ ಕೆಜಿಎಫ್ ಗಣಿಗಳನ್ನು 'ಮದರ್ ಆಫ್ ಮೈನ್ಸ್' ಎಂದು ಕರೆಯಲಾಯಿತು. ಅಂದರೆ ಇಲ್ಲಿನ ತಂತ್ರಜ್ಞಾನ, ತಂತ್ರಜ್ಞತೆಯು ಆಫ್ರಿಕಾ, ಆಸ್ಟ್ರೇಲಿಯಾ, ಬ್ರಿಟನ್, ಇನ್ನಿತರ ದೇಶಗಳಿಗೆ ತಲುಪಿದ್ದಲ್ಲದೇ, ಇಲ್ಲಿನ ಕಾರ್ಮಿಕರನ್ನು ಜಗತ್ತಿನ ಗಣಿಗಳು ಬರಮಾಡಿಕೊಂಡವು. ಆಫ್ರಿಕಾ ಚಿನ್ನದ ಗಣಿ ಕಾಲೊನಿಗಳಲ್ಲಿ ಕೆಜಿಎಫ್ ಕಾರ್ಮಿಕರ ಕಾಲೊನಿಗಳು ಇಂದಿಗೂ ಇವೆ. ನಮ್ಮ ದೇಶದಲ್ಲಿ ನಡೆಯುತ್ತಿರುವ ಇದ್ದಿಲು, ಕಬ್ಬಿಣ, ಸೀಸ ಮತ್ತು ಸತು ಗಣಿಗಳ ಕಾಲೊನಿಗಳಲ್ಲಿ ಕೆಜಿಎಫ್ ಕಾಲೊನಿಗಳು ಈಗಲೂ ಇವೆ.

ಕೆಜಿಎಫ್ ಗಣಿಗಳಲ್ಲಿ ಚಿನ್ನವನ್ನು ಬೇಗ ಬೇಗನೆ ದೋಚಿಕೊಳ್ಳಲು 1902ರಲ್ಲಿಯೇ ಶಿವನಸಮುದ್ರದ ಕೊಳ್ಳದಿಂದ ವಿದ್ಯುತ್ ಉತ್ಪಾದಿಸಿ ಗಣಿಗಳಿಗೆ ಜೋಡಿಸಲಾಯಿತು. ಇದರ ಪರಿಣಾಮವೇ ಗಣಿಗಳಲ್ಲಿ ಪ್ರತಿ ದಿನ ಮೂವತ್ತೈದು ಸಾವಿರ ಕಾರ್ಮಿಕರು ದುಡಿಯುತ್ತ ವಾರ್ಷಿಕ 30-50 ಟನ್‌ಗಳಷ್ಟು ಚಿನ್ನವನ್ನು ಉತ್ಪಾದನೆ ಮಾಡಿದರು. ಬೆಂಗಳೂರು ಮತ್ತು ಮೈಸೂರಿಗೆ ವಿದ್ಯುತ್ ಬಂದಿದ್ದು 1904-1905ರಲ್ಲಿ. ಇದರ ಫಲಿತಾಂಶ ಸೂರ್ಯ ಮುಳುಗದ ನಾಡು ಬ್ರಿಟನ್, ಭಾರತ ಮತ್ತು ಅಂದಿನ ಮೈಸೂರು ಸಂಸ್ಥಾನ ಚಿನ್ನದಲ್ಲಿ ಲಾಭ ಮತ್ತು ರಾಯಲ್ಟಿಯನ್ನು ಮಿಲಿಯನ್ ಡಾಲರ್‌ಗಟ್ಟಲೇ ಪಡೆದುಕೊಳ್ಳುತ್ತಿದ್ದವು. ಇದರಿಂದ ದೇಶದಲ್ಲಿಯೇ 'ಮಾದರಿ ರಾಜ್ಯ' ಎಂದು ಮೈಸೂರನ್ನು ಕರೆಯಲಾಯಿತು. ಸ್ವಾತಂತ್ರ್ಯಪೂರ್ವ ಮತ್ತು ನಂತರದ ಕಾಲದಲ್ಲಿ ಮೈಸೂರು ರಾಜ್ಯದಲ್ಲಿ ವಿಶೇಷವಾಗಿ ಬೆಂಗಳೂರಿನಲ್ಲಿ ಹತ್ತಾರು ಕಂಪನಿಗಳು ಪ್ರಾರಂಭಗೊಂಡವು. ಈ ಕಂಪನಿಗಳ ಮೊದಲ ತಲೆಮಾರಿನ ಕಾರ್ಮಿಕರು ಕೆಜಿಎಫ್‌ನವರೇ ಆಗಿದ್ದರು.

11ನೇ ಪುಟಕ್ಕೆ...

ಕೆಜಿಎಫ್ ಹೆಸರಲ್ಲೇ ಕೌತುಕವಿದೆ. ಇದರ ಸುತ್ತ ಹತ್ತಾರು ಕಥನಗಳಿವೆ. ಬ್ರಿಟಿಷರ ಪ್ರವೇಶದಿಂದ ಕೋಲಾರ ಗೋಲ್ಡ್‌ಫೀಲ್ಡ್ಸ್‌ನ ಚಿತ್ರಣವೇ ಬದಲಾಯಿತು. ಗಣಿಗಳಲ್ಲಿ ಕೆಲಸ ಮಾಡಲು ತಮಿಳುನಾಡಿನಿಂದ ಬಂದ ಜನಾಂಗ ಕುರಿತು ನಿರ್ಮಾಣಗೊಂಡ 'ತಂಗಲಾನ್' ಸಿನಿಮಾದಿಂದಾಗಿ ಕೆಜಿಎಫ್ ಮತ್ತೆ ಸುದ್ದಿಯಾಗಿದೆ. ಈ ಕುರಿತು 'ಕೋಲಾರ ಚಿನ್ನದ ಗಣಿಗಳು' ಚಾರಿತ್ರಿಕ, ಸಾಂಸ್ಕೃತಿಕ, ವೈಜ್ಞಾನಿಕ ಸಾಮಾಜಿಕ-ಆರ್ಥಿಕತೆ ಕುರಿತು ಸಂಶೋಧನೆ ಮಾಡಿರುವ ಲೇಖಕರ ಒಳನೋಟವುಳ್ಳ ಬರಹವಿದು...



1970ರ ದಶಕದಲ್ಲಿ ಕೆಜಿಎಫ್‌ನಲ್ಲಿ ಕಾರ್ಮಿಕರ ಕಾಲೊನಿ
-ಪ್ರಜಾವಾಣಿ ಸಂಗ್ರಹ ಚಿತ್ರ


ಕೆಜಿಎಫ್ ಮತ್ತು ತಂಗಲಾನ್



ತಂಗಲಾನ್ ಸಿನಿಮಾದಲ್ಲಿ ವಿಕ್ರಮ್

ಕೆಜಿಎಫ್‌ನಲ್ಲಿ ಚಿನ್ನದ ಗಣಿಗಳು ಪ್ರಾರಂಭವಾಗುವುದಕ್ಕೆ ಮುನ್ನ (1880-1890) ಅಲ್ಲಲ್ಲಿ ನಾಲ್ಕಾರು ಗುಡಿಸಲುಗಳು ಇದ್ದವು. ಕೋಲಾರ ಪಟ್ಟಣದ ಹತ್ತಿರ ಇದ್ದ ಕಾರಣಕ್ಕೆ ಇದನ್ನು ಬ್ರಿಟಿಷರು 'ಕೋಲಾರ್ ಗೋಲ್ಡ್‌ಫೀಲ್ಡ್ಸ್' ಎಂದು ಕರೆದರು. ತಮಿಳರು ಕೋಲಾರ್ ತಂಗವೈಯಲ್ (ಗೋಲ್ಡ್ ಫೀಲ್ಡ್ಸ್) ಎಂದು ಕರೆಯುತ್ತಾರೆ. ಈ ಹಿನ್ನೆಲೆಯಲ್ಲಿಯೇ ಸಿನಿಮಾಗೆ 'ತಂಗಲಾನ್' ಎಂದು ಹೆಸರಿಡಲಾಗಿದೆ. ಸಿನಿಮಾದಲ್ಲಿ ತೋರಿಸುವಂತೆ ಆರ್ಕಾಟ್ ಕಡೆಯಿಂದ ತಂಗಲಾನ್ (ನಾಯಕ) ಚಿನ್ನವನ್ನು ಹುಡುಕಿಕೊಂಡು ಕೆಜಿಎಫ್ ಕಡೆಗೆ ಬರಲಿಲ್ಲ. ಎರಡು ಸಾವಿರ ವರ್ಷಗಳ ಹಿಂದೆಯೇ ಇಲ್ಲಿ ಸ್ಥಳೀಯರು ಗಣಿಗಳನ್ನು ತೋಡಿ ಬಿಟ್ಟಿದ್ದರು. ಬಹುಶಃ ಅವರು ದ್ರಾವಿಡರಾಗಿರಬೇಕು! ಆದರೆ ಸಿನಿಮಾದಲ್ಲಿ ಚಿನ್ನವನ್ನು ಹೇಗೆ ಹುಡುಕುತ್ತಾರೆ ಎಂಬುದನ್ನು ಒಂದಷ್ಟು ವೈಜ್ಞಾನಿಕವಾಗಿ ತೋರಿಸಲಾಗಿದೆ.

ಒಂದು ಕಾಲಕ್ಕೆ ಕೆಜಿಎಫ್ ರಾಜ್ಯದ ಮೂರನೇ ದೊಡ್ಡ ಪಟ್ಟಣವಾಗಿತ್ತು.



ಕೆಜಿಎಫ್ ಸಿನಿಮಾದಲ್ಲಿ ಯಶ್

ಗುಜ್ಜರ್ ಮಹಿಳೆಯರ ಬಾಳಲ್ಲಿ ಹೊಂಬೆಳಕು



ಗುಜ್ಜರ್ ಸಮುದಾಯದ ಸಾಂಪ್ರದಾಯಿಕ ಉಡುಗೆ ತೊಡುಗೆಗಳ ಸಂಗ್ರಹ

ದಾನಿಶ್ ಶೌಕತ್, ಅಮಾನ್ ಬಟ್

ಶಾಹಿದಾ ಖಾನಂ, ಕಾಶ್ಮೀರದ ಬಂಡಿಪೊರಾ ಜಿಲ್ಲೆಯ ಗುಜ್ಜರ್ ಸಮುದಾಯದ ಯುವತಿ. ಇವರು ಕಾಶ್ಮೀರದಲ್ಲಿ ಮೊದಲ ಬುಡಕಟ್ಟು ಮ್ಯೂಸಿಯಂ ತೆರೆಯುವ ಮೂಲಕ ಕಣಿವೆಯಲ್ಲಿ ಬಹುದೊಡ್ಡ ಬದಲಾವಣೆಗೆ ನಾಂದಿ ಹಾಡಿದ್ದಾರೆ. ಗತಕಾಲದ ವಸ್ತುಗಳನ್ನು ಸಂರಕ್ಷಿಸುವ ಜೊತೆಗೆ ಸ್ಥಳೀಯ ಮಹಿಳೆಯರಿಗೆ ಕೌಶಲಗಳನ್ನು ಹೇಳಿಕೊಟ್ಟು ಅವರು ಮತ್ತು ಅವರ ಕುಟುಂಬ ಸಬಲವಾಗುವ ದಾರಿ ತೋರಿಸಿಕೊಡುತ್ತಿದ್ದಾರೆ.

ಕಾಶ್ಮೀರದ ಜನಸಂಖ್ಯೆಯಲ್ಲಿ ಕೇವಲ ಶೇ11.9ರಷ್ಟು ಇರುವ ಗುಜ್ಜರ್ ಸಮುದಾಯವು ಶ್ರೀಮಂತ ಸಾಂಸ್ಕೃತಿಕ ಇತಿಹಾಸವನ್ನು ಹೊಂದಿದೆ. ಸಾಂಪ್ರದಾಯಿಕವಾಗಿ ಅರೆ ಅಲೆಮಾರಿಗಳಾಗಿರುವ ಈ ಸಮುದಾಯದ ಜನರು ಕೃಷಿ ಮತ್ತು ಪಶುಸಂಗೋಪನೆಯನ್ನು ನೆಚ್ಚಿಕೊಂಡಿದ್ದಾರೆ. ಆದರೆ ಆಧುನಿಕತೆ ಮತ್ತು ಇತರ ಸವಾಲುಗಳಿಂದಾಗಿ ಈ ಬುಡಕಟ್ಟು ಜನರ ಜೀವನ ಸಂಕಷ್ಟದಲ್ಲಿದೆ. ಇದನ್ನು ಗಮನಿಸಿದ ಶಾಹಿದಾ ಖಾನಂ ಅವರು ತಮ್ಮ ಜನರ ಸಂಸ್ಕೃತಿಯನ್ನು ರಕ್ಷಿಸುವ ಪಣ ತೊಟ್ಟು, ಅದಕ್ಕಾಗಿ ಪುಟ್ಟ ಹೆಜ್ಜೆ ಇರಿಸಿದರು.

ತಮ್ಮ ಸಮುದಾಯದ ಸಾಂಪ್ರದಾಯಿಕ ಉಡುಗೆ-ತೊಡುಗೆಗಳು, ಆಭರಣಗಳು, ಕೃಷಿ ಉಪಕರಣಗಳು, ಸಂಗೀತ ಸಾಧನಗಳು ಸೇರಿದಂತೆ ವಿವಿಧ ಕರಕುಶಲ ವಸ್ತುಗಳನ್ನು ಸಂಗ್ರಹಿಸಿ ಮ್ಯೂಸಿಯಂನಲ್ಲಿ ಪ್ರದರ್ಶನಕ್ಕಿಡಲು ಆರಂಭಿಸಿದರು. ಇಲ್ಲಿರುವ ಪ್ರತಿಯೊಂದು ಕರಕುಶಲ ವಸ್ತುಗಳೂ ಗುಜ್ಜರ್ ಸಮುದಾಯದ ಜೀವನ ವಿಧಾನವನ್ನು ಸಾರುತ್ತವೆ.

ಶಾಹಿದಾ ಖಾನಂ ಮ್ಯೂಸಿಯಂ ಸ್ಥಾಪಿಸಿ ಸುಮ್ಮನಾಗಲಿಲ್ಲ. ಅದರಲ್ಲಿನ ಪುಟ್ಟ ಕೊಠಡಿಯನ್ನು ಮಹಿಳೆಯರ ತರಬೇತಿ ಕೇಂದ್ರವಾಗಿ ಮಾರ್ಪಡಿಸಿದರು. ಇಲ್ಲಿ ಮಹಿಳೆಯರು ಬಟ್ಟೆ ಹೊಲಿಯುವುದು, ಕುಸುರಿ, ಆಭರಣ ತಯಾರಿಕೆಯನ್ನು ಕಲಿತರು. ಮಹಿಳೆಯರು ತಮ್ಮದೇ ಸಂಸ್ಕೃತಿಯೊಂದಿಗೆ ಬೆರೆಯಲು ಮತ್ತು ಹಣ ಸಂಪಾದಿಸಲು ಈ ಕೌಶಲಗಳಿಂದ ಸಾಧ್ಯವಾಯಿತು. ಇದು ಹಲವು ಮಹಿಳೆಯರ ಬಾಳಿನಲ್ಲಿ ಬಹುದೊಡ್ಡ ಬದಲಾವಣೆ ತಂದಿತು. ಸಾಂಪ್ರದಾಯಿಕ ಕೌಶಲದ ಕಲಿಕೆಯಿಂದಾಗಿ ಇವರೀಗ ಕುಟುಂಬದ ನಿರ್ವಹಣೆಗೆ ನೆರವಾಗುತ್ತಿದ್ದಾರೆ. ಶಾಹಿದಾ ಖಾನಂ ಅವರಿಂದಾಗಿ ಸ್ಥಳೀಯ ಮಹಿಳೆಯರು ವಿವಿಧ ಕೌಶಲಗಳನ್ನು ಕಲಿಯುವುದರ ಜೊತೆಗೆ ಆದಾಯದ ಮೂಲವನ್ನೂ ಕಂಡುಕೊಂಡಿದ್ದಾರೆ.

ಶಾಹಿದಾ ಅವರ ತರಬೇತಿ ಕಾರ್ಯಕ್ರಮದ ಫಲಾನುಭವಿ ತಹಿರಾ ಖಾನಂ ತಮ್ಮ ಜೀವನದಲ್ಲಾದ ಬದಲಾವಣೆಯ ಕತೆಯನ್ನು ಹಂಚಿಕೊಂಡಿದ್ದು ಹೀಗೆ- 'ಬಟ್ಟೆ ಹೊಲಿಯುವ ಕಲಿಕೆಯು ಅದ್ಭುತವಾಗಿತ್ತು. ನಾನೀಗ ಬೇರೆಯವರಿಗೂ ಹೇಳಿಕೊಡುತ್ತಿದ್ದೇನೆ. ಹಣ ಗಳಿಸಲು ಮತ್ತು ಉದ್ಯೋಗ ಹುಡುಕಲು ತುಂಬಾ ಸಹಾಯವಾಯಿತು. ಮತ್ತಷ್ಟು ಹೆಣ್ಣುಮಕ್ಕಳು ಈ ತರಬೇತಿ ಕೇಂದ್ರದಿಂದ ಪ್ರಯೋಜನ ಪಡೆಯುತ್ತಾರೆ ಎಂದು ಭಾವಿಸುತ್ತೇನೆ'.

11ನೇ ಪುಟಕ್ಕೆ...



“ 'ಮ್ಯೂಸಿಯಂ ನಮ್ಮ ಇತಿಹಾಸವನ್ನು ಕಾಪಿಡುವ ಮತ್ತು ಯುವ ಜನರಿಗೆ ನಮ್ಮ ಶ್ರೀಮಂತ ಪರಂಪರೆಯ ಮಹತ್ವವನ್ನು ದಾಟಿಸುವ ವಿಧಾನ ”

ಶಾಹಿದಾ ಖಾನಂ
ಮ್ಯೂಸಿಯಂ ರೂವಾರಿ

ಕುಂಬಾರಿಕೆಗೆ ಒಲಿದ ಪದವೀಧರರು

ಸಂತೋಷ ಈ. ಚಿನಗುಡಿ

ಮುಂಬೈನ ಅಭಿಷೇಕ ವಾಣಿ ಸಾಫ್ಟ್‌ವೇರ್ ಎಂಜಿನಿಯರ್. ಲಕ್ಷಕ್ಕೂ ಅಧಿಕ ಸಂಬಳ ಕೊಡುವ ಕಂಪನಿಗಳ ಆಹ್ವಾನಕ್ಕೆ ಬೆನ್ನುಮಾಡಿ ಕುಂಬಾರಿಕಾ ತರಬೇತಿ ಸಂಸ್ಥೆ ಸೇರಿದರು. ಅಲ್ಲಿ ಕೈಕೆಸರು ಮಾಡಿಕೊಂಡು ಕಲಾಕೃತಿಯೊಂದರ ತಯಾರಿಕೆಯಲ್ಲಿ ಮುಳುಗಿದ್ದರು. ಇವರಿಗೆ ಸದಾ ಹೊಸತನ್ನು ಮಾಡುವ ಉಮೇದು. ಹೊಸ ರೀತಿಯ ಉದ್ಯಮವನ್ನು ಹುಟ್ಟುಹಾಕುವ ಕನಸು.

ಇವರ ಪಕ್ಕದಲ್ಲೇ ಮಣ್ಣಿನಮುದ್ದೆ ಹಿಡಿದು ಏನನ್ನೋ ಸೃಷ್ಟಿಸಲು ಸಿದ್ಧವಾಗಿದ್ದ ಬೆಂಗಳೂರಿನ ಎಸ್.ಜ್ಯೋತಿ, ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಮನೆಯಲ್ಲಿ ಕರಕುಶಲ ವಸ್ತುಗಳನ್ನು ತಯಾರಿಸುತ್ತಿದ್ದರು. ಅದನ್ನೇ ಉದ್ಯಮವಾಗಿ ಮಾಡಿಕೊಳ್ಳುವ ಆಲೋಚನೆ ಬಂದಿತು. ತಮ್ಮ ಕನಸಿಗೆ ರೆಕ್ಕೆ ಕಟ್ಟುವ ಕುಂಬಾರಿಕಾ ತರಬೇತಿ ಕೇಂದ್ರವನ್ನು ಹುಡುಕಿಕೊಂಡರು. ಈಗ ಯಾಂತ್ರಿಕಚಕ್ರ ಬಳಸಿ ವೈವಿಧ್ಯಮಯ ವಸ್ತುಗಳನ್ನು ಸಿದ್ಧಪಡಿಸುವುದನ್ನು ಕಲಿಯುತ್ತಿದ್ದಾರೆ. ಮಣ್ಣಿನ ಕಲಾಕೃತಿಗಳಿಗೆ ಪೇಂಟಿಂಗ್ ಸ್ಪರ್ಶ ನೀಡಿದರೆ ಬೆಂಗಳೂರಿನಲ್ಲಿ ದೊಡ್ಡಮಟ್ಟದ ವ್ಯಾಪಾರ ಮಾಡಬಹುದು ಎನ್ನುವ ಲೆಕ್ಕಾಚಾರ ಇವರದು.

ಬೆಳಗಾವಿ ಜಿಲ್ಲೆಯ ಖಾನಾಪುರದಲ್ಲಿರುವ ಕೇಂದ್ರೀಯ ಗ್ರಾಮ ಕುಂಬಾರಿಕಾ ತರಬೇತಿ ಸಂಸ್ಥೆಯಲ್ಲಿ ಇಂತಹ ಚಿತ್ರಗಳು ಹತ್ತಾರು. ಗೋವಾದ ಸಿವಿಲ್ ಎಂಜಿನಿಯರ್ ಚಿನ್ಮಯ್ ಮಗದುಮ್, ಗದಗಿನ ಎಂಬಿಎ ಪದವೀಧರ ಪ್ರವೀಣ ಕುಂಬಾರ, ಹಿಮಾಚಲ ಪ್ರದೇಶದ ಬಿಪಿನ್, ಆಂಧ್ರ ಪ್ರದೇಶದ ಲಾರಿ ಚಾಲಕ ವಿಜಯಗಿರಿ, ತೆಲಂಗಾಣದ ಪದವೀಧರೆ ನಿಖಿತಾ, ಉತ್ತರಾಖಂಡದ ಮನು, ಕೇರಳದ ಅಹೋಪತಿ, ಗುಜರಾತಿನ ವಿಷ್ಣುಕುಮಾರಿ... ಹೀಗೆ ಒಬ್ಬೊಬ್ಬರದೂ ಒಂದೊಂದು ಅನುಭವ.

ಕುಂಬಾರಿಕಾ ತರಬೇತಿ ಸಂಸ್ಥೆಗೆ ದೇಶದ ವಿವಿಧ ಭಾಗಗಳಿಂದ ವಿದ್ಯಾರ್ಥಿಗಳು ಬರುತ್ತಾರೆ. ಕುಂಬಾರಿಕೆ ಎಂದರೆ ಅನಕ್ಷರಸ್ಥರಿಗೋ, ನಿರುದ್ಯೋಗಿಗಳಿಗೋ ಸೀಮಿತವಲ್ಲ. ಬಿಎ, ಬಿಎಸ್‌ಸಿ, ಎಂಎಸ್‌ಸಿ, ಎಂಜಿನಿಯರಿಂಗ್, ಕೃಷಿ ಪದವಿ ಸೇರಿದಂತೆ ವಿವಿಧ ಉನ್ನತ ಶಿಕ್ಷಣ ಪಡೆದವರೂ ಇಲ್ಲಿ ಇದ್ದಾರೆ.

ಕುಂಬಾರಿಕೆಯನ್ನು ಶೈಕ್ಷಣಿಕವಾಗಿ, ಶಾಸ್ತ್ರೀಯವಾಗಿ ಕಲಿಸಿಕೊಡುವ ದೇಶದ ಏಕಮಾತ್ರ ಸಂಸ್ಥೆ ಇದು. ಕೇಂದ್ರ ಸರ್ಕಾರದ ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಕೈಗಾರಿಕಾ ಇಲಾಖೆಯ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ ಈ ಕೇಂದ್ರವನ್ನು ಆರಂಭಿಸಿದೆ. ಕುಂಬಾರಿಕಾ ಕೇಂದ್ರಗಳು ದೇಶದ ಎಲ್ಲ ರಾಜ್ಯಗಳಲ್ಲೂ ಇವೆ. ತರಬೇತಿ ನೀಡಿ, ಕೌಶಲವೃದ್ಧಿ ಮಾಡಿ, ಸಂಪನ್ಮೂಲ ವ್ಯಕ್ತಿಗಳನ್ನು ರೂಪಿಸುವುದು ಖಾನಾಪುರ ಕೇಂದ್ರದಲ್ಲಿ ಮಾತ್ರ.

'ಈ ಮಣ್ಣಿನ ಗುಣ ವಿಶಿಷ್ಟವಾದುದು. ಇಲ್ಲಿ ತಯಾರಾಗುವ ಮಣ್ಣಿನ ಸಾಮಗ್ರಿಗಳು ಚೀನಾ, ಬರ್ಮಾ, ಸ್ವಿಡ್ಜರ್ಲೆಂಡ್‌ಗಳಲ್ಲಿ ಮಾರಾಟವಾಗುತ್ತವೆ. ದೇಶದ ಬಹಳಷ್ಟು ಸ್ಟಾರ್ ಹೋಟೆಲ್‌ನ ತಂದೂರಿ ಭಟ್ಟಿಗಳನ್ನು ನಮ್ಮ ವಿದ್ಯಾರ್ಥಿಗಳೇ ಸಿದ್ಧಪಡಿಸಿದ್ದಾರೆ. ಕುಂಬಾರಿಕೆ ಎಂದರೆ ಮೂಗು ಮುರಿಯುವ ಕಾಲ ಹೋಗಿ, ಹುಬ್ಬೇರಿಸುವ ದಿನಗಳು ಬಂದಿವೆ' ಎಂದು ಸಂಸ್ಥೆಯ ಕಾರ್ಯನಿರ್ವಹಣಾಧಿಕಾರಿ ಶೇಷೋ ನಾರಾಯಣ ದೇಶಪಾಂಡೆ ಹೇಳುತ್ತಾರೆ.

50 ಸಾವಿರ ಕರಕುಶಲ ಕರ್ಮಿಗಳು

1954ರಲ್ಲಿ ಆರಂಭವಾದ ಈ ಕೇಂದ್ರದಿಂದ 50 ಸಾವಿರಕ್ಕೂ ಹೆಚ್ಚು ಕುಶಲಕರ್ಮಿಗಳು ತಯಾರಾಗಿ ಹೋಗಿದ್ದಾರೆ. ಹಲವರು ಸ್ವಯಂ ಉದ್ಯೋಗ ಮಾಡುತ್ತಿದ್ದಾರೆ, ಉದ್ಯಮಿಗಳಾಗಿದ್ದಾರೆ. ಮತ್ತೆ ಹಲವರು ಕುಂಬಾರಿಕೆಗೆ ತಮ್ಮದೇ ಆದ ನೂತನ ಸ್ಪರ್ಶ ನೀಡಿದ್ದಾರೆ. ಹಳ್ಳಿಗಳಲ್ಲಿ ಉದ್ಯೋಗ ನೀಡಿದ್ದಾರೆ.

ತರಬೇತಿ ಸಂಸ್ಥೆಯಲ್ಲಿ ಕಾಲಕ್ಕೆ ತಕ್ಕ ಬದಲಾವಣೆ ಮಾಡಿಕೊಳ್ಳಲಾಗಿದೆ. ಮೊದಲು ಮಾನವ ಚಾಲಿತ ಚಕ್ರಗಳಿದ್ದವು. ಇದರೊಂದಿಗೆ ಈಗ ಆಧುನಿಕ ತಂತ್ರಜ್ಞಾನ ಅಳವಡಿಸಿಕೊಳ್ಳಲಾಗಿದೆ. ವಿದ್ಯುತ್ ಚಾಲಿತ ಚಕ್ರಗಳನ್ನು ಬಳಸಿ ಮಣ್ಣಿನಿಂದ ಕರಕುಶಲ ವಸ್ತುಗಳನ್ನು ಸಿದ್ಧಪಡಿಸಲಾಗುತ್ತಿದೆ. ಮಡಕೆ-ಕುಡಿಕೆಗಳನ್ನು ಮಾತ್ರ ಸಿದ್ಧಪಡಿಸುತ್ತಿದ್ದವರು, ಈಗ ಅದರ ಸಾಧ್ಯತೆ ಹೆಚ್ಚಿಸಿಕೊಂಡಿದ್ದಾರೆ. ವೈವಿಧ್ಯಮಯ ಗೃಹೋಪಯೋಗಿ ವಸ್ತುಗಳು, ಆಲಂಕಾರಿಕ ಸಾಮಗ್ರಿಗಳು, ಮೂರ್ತಿಗಳು, ಪ್ರತಿಮೆಗಳು, ಆಟದ ಸಾಮಾನುಗಳು, ಪೂಜಾ ಸಲಕರಣೆಗಳು... ಹೀಗೆ ಆಧುನಿಕ ಜೀವನಶೈಲಿಗೆ ಬೇಕಾದ ವಸ್ತುಗಳನ್ನು ಮಣ್ಣಿನಿಂದಲೇ ತಯಾರಿಸಲಾಗುತ್ತಿದೆ.

50 ಲೀಟರ್ ನೀರು ಕಾಯಿಸುವಂಥ ಹಂಡೆ, ಕುಡಿಯುವ ನೀರಿನ ಹೂಜಿ, ಆಹಾರ ತಯಾರಿಸುವ ಮಡಕೆ, ಕುಡಿಕೆ, ಚಿತ್ತಾಕರ್ಷಕ ಹಣತೆ, ಚಹಾ ಕುಡಿಯುವ ಲೋಟ, ಸೂಪ್ ಹೀರುವ ಬಟ್ಟಲು, ತಟ್ಟೆ, ಆಲಂಕಾರಿಕ ಹೂಜಿ, ಹ್ಯಾಂಗಿಂಗ್ ಚೈನು, ಹೂಕುಂಡ, ಒಲೆ, ವಿವಿಧ ರೀತಿಯ ಉದ್ಯಾನ ಪಾತ್ರೆ, ಡಸ್ಟ್‌ಬಿನ್, ಕಿವಿ ಮತ್ತು ಕೊರಳಲ್ಲಿ ಧರಿಸಬಹುದಾದ ಆಭರಣಗಳನ್ನು ತಯಾರಿಸುವ ತರಬೇತಿ ಸಿಗುತ್ತದೆ. ಪ್ಲಾಸ್ಟಿಕ್ ಬಾಟಲ್‌ಗಳಿಗೆ ಪರ್ಯಾಯವಾಗಿ ಮಣ್ಣಿನ ಬಾಟಲ್‌ಗಳನ್ನೂ ಸಿದ್ಧಪಡಿಸುತ್ತಾರೆ.

ತಂದೂರಿ ರೊಟ್ಟಿ, ತಂದೂರಿ ಚಿಕನ್, ತಂದೂರಿ ಪಿಜ್ಜಾ, ತಂದೂರಿ ಚಹಾ... ಎಲ್ಲದಕ್ಕೂ ಮಣ್ಣಿನ ಭಟ್ಟಿಯೇ ಬೇಕು. ಇಂಥ ಭಟ್ಟಿಗಳು, ಮೊಸರಿನ ಕುಡಿಕೆಗಳು, ತಂದೂರಿ ಬಿರಿಯಾನಿ ಇಡುವ ಪಾತ್ರೆಗಳೆಲ್ಲವೂ ಮಣ್ಣಿನಿಂದಲೇ ಆಗಿರಬೇಕು. ಹೀಗಾಗಿ, ಧಾಬಾಗಳಿಂದ ಹಿಡಿದು ಸ್ಟಾರ್ ಹೋಟೆಲ್‌ಗಳವರೆಗೆ ಬೇಡಿಕೆ ಹೆಚ್ಚಾಗಿದೆ.

11ನೇ ಪುಟಕ್ಕೆ...



ಕೇಂದ್ರೀಯ ಗ್ರಾಮ ಕುಂಬಾರಿಕಾ ಸಂಸ್ಥೆಯಲ್ಲಿ ಮಣ್ಣಿನ ಪಾತ್ರೆ ತಯಾರಿಕೆಯ ತರಬೇತಿ
ಪ್ರಜಾವಾಣಿ ಚಿತ್ರಗಳು: ಸಂತೋಷ ಈ. ಚಿನಗುಡಿ

ಕುಲಕಸುಬು ಎನಿಸಿಕೊಂಡಿದ್ದ ಕುಂಬಾರಿಕೆ ಈಗ ಆಸಕ್ತರಿಗೆ ತೆರೆದುಕೊಂಡಿದೆ. ಸೃಜನಶೀಲತೆ ಹೊಂದಿದ್ದು, ಹೊಸತನ್ನು ಅನ್ವೇಷಿಸುವ ಯುವ ಮನಸುಗಳು ಕುಂಬಾರಿಕೆ ಕಲಿಯಲು ಮುಂದಾಗಿವೆ. ಉದ್ಯಮ ಆರಂಭಿಸುವ ಕನಸಿಗೆ ರೆಕ್ಕೆ ಬಂದಿದೆ.



ಈ ಪಾತ್ರೆಗಳನ್ನು ತಯಾರಿಸುವುದು ಕೈಚಳಕವೇ ಸರಿ...

ಕಲಿಕಾ ಕೋರ್ಸ್‌ಗಳು

ಒಂದು ತಿಂಗಳ ಅವಧಿಯ ಹವ್ಯಾಸಿ ಕೋರ್ಸ್, ಅಡ್ವಾನ್ಸ್ ಪಾಟರಿ ಕೋರ್ (ಜಿಗರ್‌ಜಾಲಿ ಹಾಗೂ ಸ್ಲಿಪ್ ಕಾಸ್ಟಿಂಗ್ ಪ್ರೊಸೆಸ್ ಕೋರ್ಸ್), ಎರಡು ತಿಂಗಳ ಟೆರ್ರಾಕೋಟ ಆರ್ಟ್‌ವೇರ್ ಕೋರ್ಸ್, ನಾಲ್ಕು ತಿಂಗಳ ವೀಲ್ ಪಾಟರಿ ಕೋರ್ಸ್ ಇಲ್ಲಿವೆ. ವಯೋಮಿತಿ 16ರಿಂದ 50 ವರ್ಷದೊಳಗೆ ಇರಬೇಕು. 5ನೇ ತರಗತಿ ಪಾಸಾದವರು ಅಥವಾ ಓದಲು- ಬರೆಯಲು ಬಂದರೆ ಅದೇ ಶೈಕ್ಷಣಿಕ ಅರ್ಹತೆ. ಒಂದು ಬ್ಯಾಚ್‌ನಲ್ಲಿ 40 ಮಂದಿಗೆ ಅವಕಾಶ. ಉಚಿತ ಊಟ, ವಸತಿ ಸಹಿತ ಹಾಸ್ಟೆಲ್ ಸೌಲಭ್ಯ ಇದೆ. ಪ್ರತಿಯೊಬ್ಬರಿಗೂ ಪ್ರತಿ ತಿಂಗಳು ₹1,500ರಿಂದ ₹3,000ರವರೆಗೆ ಕಲಿಕಾ ಭತ್ಯೆ ನೀಡಲಾಗುತ್ತದೆ.

ಕೇಂದ್ರ ಸರ್ಕಾರದ ಕುಂಬಾರಿಕಾ ಸಶಕ್ತೀಕರಣ ಯೋಜನೆ ಅಡಿ ಯಂತ್ರಚಾಲಿತ ಚಕ್ರಗಳನ್ನೂ ವಿತರಿಸಲಾಗುತ್ತದೆ. ₹27 ಸಾವಿರ ಬೆಲೆಯ ಈ ಯಂತ್ರಗಳು ಈಗಲೂ ಲಭ್ಯ ಇವೆ. ಗುಡಿ ಕೈಗಾರಿಕೆಗೆ ಸಂಬಂಧಿಸಿದ ಸ್ಟಾರ್ಟ್‌ಅಪ್‌ಗೆ ಸಾಲ ಸೌಲಭ್ಯವಿದೆ.

ಮಳೆರಾಗಗಳ ರಿಮ್‌ಜಿಮ್

ವಿಕ್ರಂ ಕಾಂತಿಕೆರೆ

ಶ್ರಾವಣದ ಸಂಜೆ. ಧೋ ಎಂದು ಸುರಿದ ಮಳೆ ಕೆಲವೇ ನಿಮಿಷಗಳಲ್ಲಿ ಗತಿ ಬದಲಿಸಿ ಸೋನೆಯಾಗಿ ಜಿನುಗತೊಡಗಿತ್ತು. ಅಷ್ಟರಲ್ಲಿ ಮೋಡ ಕಪ್ಪಿಟ್ಟು ಮತ್ತೊಂದು ಜಲಧಾರೆಗೆ ಸಿದ್ಧತೆ ನಡೆಸಿತ್ತು. ಮಂಗಳೂರಿನ ಸೇಂಟ್ ಅಲೋಶಿಯಸ್ ಕಾಲೇಜಿನ ಫಾದರ್ ಎಲ್.ಎಫ್.ರಸ್ಕಿನ್ಹ ಸಭಾಂಗಣದಲ್ಲಿ ಮೋಹಕ ಆಲಾಪವು 'ಜೋಡ್'ನಲ್ಲಿ ಲಯವನ್ನು ಸಂಧಿಸಿ 'ಜಾಲಾ'ದತ್ತ ಜಾರಿತ್ತು. ತಾಳದ ಜಾಡು ಹಿಡಿಯಲು ಸಜ್ಜಾಗಿದ್ದ ಶ್ರೋತೃಗಳು ರಸಯಾತ್ರೆಗೆ ಮನಸನ್ನು ಶ್ರುತಿಗೊಳಿಸುತ್ತಿದ್ದರು.

> ಮಂಗಳೂರಿನಲ್ಲಿ ಇತ್ತೀಚೆಗೆ ನಡೆದ 'ರಿಮ್‌ಜಿಮ್' ಸಂಗೀತ ಕಾರ್ಯಕ್ರಮ ಸಂಗೀತ ಪ್ರೇಮಿಗಳ ಮನಸೂರೆಗೊಂಡಿತು. ಮುಂಬೈಯ ಸತ್ಯೇಂದ್ರ ಸಿಂಗ್ ಅವರ ಸಂತೂರ್ ವಾದನ ಮತ್ತು ಧಾರವಾಡದ ಸುಜಯೀಂದ್ರ ಅವರ ಗಾಯನ ಮಳೆ ರಾಗಗಳ ರಸ ಉಣಿಸಿತು.

ಮಂಗಳೂರಿನ ಸಂಗೀತ್ ಭಾರತಿ ಫೌಂಡೇಷನ್, ಇತ್ತೀಚೆಗೆ ಆಯೋಜಿಸಿದ್ದ ವಾದನ ಮತ್ತು ಗಾಯನ ಕಾರ್ಯಕ್ರಮ 'ರಿಮ್‌ಜಿಮ್' ತಣ್ಣಗಿನ ಸಂಜೆಯಲ್ಲಿ ಮಳೆರಾಗಗಳ ಬಿಸುಪು ನೀಡಿ ರಸಿಕರನ್ನು ಪುಳಕಗೊಳಿಸಿತು. ಸಂತೂರ್‌ನಲ್ಲಿ ಮುಂಬೈಯ ಸತ್ಯೇಂದ್ರ ಸಿಂಗ್ ಅವರು ರಾಗ್ ಮೇಘ್ ನುಡಿಸಿ ಕೋಮಲ-ಶುದ್ಧ ಸ್ವರಗಳ ಲಾಲಿತ್ಯ ಪರಿಚಯಿಸಿದರು. ಗಾಯನ ಪ್ರಸ್ತುತಪಡಿಸಿದ ಹುಬ್ಬಳ್ಳಿಯ ಸುಜಯೀಂದ್ರ ಕುಲಕರ್ಣಿ ಅವರು ಮಿಯಾ ಮಲ್ಹರ್ ಹಾಡಿ ಶುದ್ಧ ನಿಶಾದದಲ್ಲಿ ಮೂಡುವ ಚೆಲುವನ್ನು ಬಿಂಬಿಸಿದರು.

ಅಜ್ರಾಡ ಘರಾಣೆಯ ಕುಡಿ ಸತ್ಯೇಂದ್ರ ಸಿಂಗ್ ಹಿರಿಯ ಸಹೋದರ ರಾಮೇಂದ್ರ ಸಿಂಗ್ ಸೋಳಂಕಿ ಅವರ ತಬಲಾ ಸಾಥ್ ಕಛೇರಿಯ ರಂಗು ಹೆಚ್ಚಿಸಿತು. ಸುಜಯೀಂದ್ರ ಅವರಿಗೂ ರಾಮೇಂದ್ರ ಅವರದೇ ಸಾಥ್. ಹಾರ್ಮೋನಿಯಂನಲ್ಲಿ ಮೋಡಿ ಮಾಡಲು ತೇಜಸ್ ಕಾಟೋಟಿ ಇದ್ದರು. ನಾಲ್ವರು ಯುವ ಕಲಾವಿದರು ಅವಿಸ್ಮರಣೀಯವಾಗಿಸಿದ ಆ ಸಂಜೆ ಕೆಲಕಾಲ ಮೆಲುಕು ಹಾಕಲು ಸಂಗೀತಪ್ರಿಯರಿಗೆ ಲಭಿಸಿದ ಅಪರೂಪದ ಉಡುಗೊರೆ.



ಸುಜಯೀಂದ್ರ ಕುಲಕರ್ಣಿ ಗಾಯನದ ಮೋಡಿ

ರಾಗರಸದ ಅನುಭವ ದಕ್ಕಿಸಿದ ಸಂತೂರ್

ಒಂದು ತಾಸು ಸಂತೂರ್‌ನಲ್ಲಿ ಲಯಲಾಸ್ಯವಾಡಿದ ಸತ್ಯೇಂದ್ರ ಸಿಂಗ್, ಮೇಘರಾಗದ ರಸವನ್ನು ಸಂಪೂರ್ಣ ಮೊಗೆದುಕೊಟ್ಟರು. ಶತತಂತಿ ವೀಣೆ ಎಂದೇ ಹೆಸರಾಗಿರುವ ಸಂತೂರ್‌ನಲ್ಲಿ ಸ್ವರದಿಂದ ಸ್ವರಕ್ಕೆ ಜಾರುವ ಸಂದರ್ಭ ಅತ್ಯಂತ ಕ್ಲಿಷ್ಟ ಎಂಬುದು ಸಂಗೀತಜ್ಞರ ಅಭಿಪ್ರಾಯ. ಅದು ಶ್ರೋತೃಗಳ ಅನುಭವಕ್ಕೆ ಬಾರದಂತೆ ಶ್ರುತಿಯೊಂದಿಗೆ ಲೀನವಾಗಿ ಲಯಕಾರಿ ಶೈಲಿಯನ್ನು ನುಡಿಸಿದ ಸತ್ಯೇಂದ್ರ ಸಿಂಗ್ ಸಾಂಪ್ರದಾಯಿಕ ಆಲಾಪ್, ಜೋಡ್ ಮತ್ತು ಜಾಲಾದ ಮೂಲಕವೇ ಕೃತಿಗಳಿಗೆ ಪ್ರವೇಶ ಮಾಡಿದರು.

ಆಲಾಪ್‌ನಲ್ಲಿ ಸೂಕ್ಷ್ಮ ನುಡಿಸಾಣಿಕೆಯ ಮೂಲಕ ಕಲ್ಪನಾ ಸ್ವರಗಳನ್ನು ವಿಸ್ತರಿಸಿ ಮಳೆಯ ಹನಿಗಳು ಜಿನುಗಿದಂಥ ಸನ್ನಿವೇಶ ಸೃಷ್ಟಿಸಿದ ಅವರು ಜಪ್ ತಾಳ್ ಮತ್ತು ತೀನ್ ತಾಳ್‌ನಲ್ಲಿ ಕೃತಿಗಳ ಪ್ರಸ್ತುತಿ ವೇಳೆ ತಂತಿಗಳ ಮೇಲೆ ಕಲಂ ಬೀಸುವಿಕೆಯ ನೈಪುಣ್ಯ ಪ್ರದರ್ಶಿಸಿ ಬಿರುಮಳೆ ಸುರಿದ ಅನುಭವ ನೀಡಿದರು.

ತಬಲಾ ಮತ್ತು ಗಿಟಾರ್ ಕಲಾವಿದರೂ ಆಗಿರುವ ಸುಜಯೀಂದ್ರ ಕುಲಕರ್ಣಿ ಫ್ಯೂಷನ್ ಸಂಗೀತದ ಮೂಲಕ ಗಮನ ಸೆಳೆದಿದ್ದಾರೆ. 'ಈಗ ಸಂಪೂರ್ಣವಾಗಿ ಶಾಸ್ತ್ರೀಯ ಸಂಗೀತಕ್ಕೇ ಸಮಯ ಮೀಸಲಿಟ್ಟಿದ್ದೇನೆ' ಎಂದು ಅವರು, ಮಳೆರಾಗ ಮಿಯಾ ಮಲ್ಹಾರ್‌ನಲ್ಲಿ ಸಾಂಪ್ರದಾಯಿಕ ಶೈಲಿ ಮುರಿದು ಚೋಟಾ ಖ್ಯಾಲ್ ಮಾತ್ರ ಪ್ರಸ್ತುತಪಡಿಸಿದರು. ಮಧುರ ಆಲಾಪದಲ್ಲೇ ಶ್ರೋತೃಗಳ ಮೇಲೆ ರಾಗದ ಹನಿ ಚೆಲ್ಲಿದ ಅವರು ಧೃತ್ ಗತ್‌ನಲ್ಲಿ ಎರಡು ಕೃತಿಗಳನ್ನು ಪ್ರಸ್ತುತಪಡಿಸಿದರು. ತೀನ್ ತಾಳ್‌ನಲ್ಲಿ ಹಾಡಿದ 'ಘರ್ ಆಯೇ ಬಾದರ್‌ವಾ...' ಲಯಬದ್ಧವಾಗಿ ಸುರಿಯುವ ಮಳೆಯ ಅನುಭವ ನೀಡಿದರೆ ಅತಿಧೃತ್‌ನಲ್ಲಿದ್ದ 'ಅತ ಧೂಮರೆ ಅತ ಆಯಿ ಬದರಿಯಾ...' ಮತ್ತೊಮ್ಮೆ ಬಿರುಸು ಮಳೆಯಂತೆ ಆವರಿಸಿಕೊಂಡಿತು.

ಸುಜಯೀಂದ್ರ ಅವರು ಮಾಲ್ಕೌನ್ಸ್ ಮತ್ತು ಭೈರವಿಯ ರಸಾನುಭವವನ್ನೂ ನೀಡಿದ್ದರು. ತಡರಾತ್ರಿಯ ರಾಗ ಮಾಲ್ಕೌನ್ಸ್‌ನ ಪಾರಂಪರಿಕ ಬಂದಿಶ್ 'ಪಗ್ ಲಾಗನ್ ದೆ...' ಪ್ರಸ್ತುತಪಡಿಸಿದ ನಂತರ ಧೃತ್ ಗತ್‌ನಲ್ಲಿ 'ಸೂರತ್ ಆಜ್...' ಮತ್ತು 'ಆಜ್ ಮೋರೆ ಘರ್ ಆಯೆ ನ ಬಲಮಾ...'ದ ಮೂಲಕ ಸಂಜೆಯಲ್ಲೂ ರಾತ್ರಿಯ ರಂಗು ಮೂಡಿಸಿದರು. ಭೈರವಿ ರಾಗದ ದಾಸರ ಪದದೊಂದಿಗೆ ಕಾರ್ಯಕ್ರಮಕ್ಕೆ ಸಾಂಪ್ರದಾಯಿಕವಾಗಿಯೇ ತೆರೆ ಎಳೆದರು.



ಸತ್ಯೇಂದ್ರ ಸಿಂಗ್ ಸೋಳಂಕಿ ಮತ್ತು ರಾಮೇಂದ್ರ ಸಿಂಗ್ ಸೋಳಂಕಿ ಸಹೋದರರ ರಾಗ್‌-ರಂಗ್



ಮ್ಯೂಸಿಯಂನಲ್ಲಿ ಸಂಗ್ರಹಿಸಿಟ್ಟಿರುವ ವಸ್ತುಗಳು

ಗುಜ್ಜರ್ ಮಹಿಳೆಯರ ಬಾಳಲ್ಲಿ ಹೊಂಬೆಳಕು

10ನೇ ಪುಟದಿಂದ...

ತಹಿರಾ ಅವರ ಅನುಭವವು ತರಬೇತಿ ಕೇಂದ್ರ ತಂದ ಬದಲಾವಣೆವನ್ನು ಸಾರುತ್ತದೆ. ಅದು ಸಂಪ್ರದಾಯವನ್ನು ಜೀವಂತವಾಗಿ ಇಡುವುದಷ್ಟೇ ಅಲ್ಲದೆ, ಮಹಿಳೆಯರಿಗೆ ಕೌಶಲವನ್ನು ಕಲಿಸಿ ಅವರನ್ನು ಆರ್ಥಿಕವಾಗಿಯೂ ಸಬಲರನ್ನಾಗಿ ಮಾಡಿದೆ.

ಶಾಹಿದಾ ಅವರ ಕಾರ್ಯವನ್ನು ಸ್ಥಳೀಯ ಅಧಿಕಾರಿಗಳು ಮತ್ತು ಸಮುದಾಯದ ನಾಯಕರು ಗುರುತಿಸಿದ್ದಾರೆ. ಅವರ ಯೋಜನೆಯನ್ನು ಸಾಂಪ್ರದಾಯಿಕತೆ ಮತ್ತು ಆಧುನಿಕತೆಯ ಸಮಾಗಮದ ಮಾದರಿಯಾಗಿ ಕಂಡಿದ್ದಾರೆ. 'ಶಾಹಿದಾ ಅವರ ಯೋಜನೆಯು ಸ್ತ್ರೀ ಶಕ್ತಿ ಮತ್ತು ಸಾಂಸ್ಕೃತಿಕ ಅಸ್ಮಿತೆಯ ಸಂರಕ್ಷಣೆಯ ಮಹತ್ವವನ್ನು ಸಾರುತ್ತದೆ' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಶಾಹಿದಾ ಅವರು ಮ್ಯೂಸಿಯಂ ಮತ್ತು ತರಬೇತಿ ಕೇಂದ್ರವನ್ನು ಮತ್ತಷ್ಟು ವಿಸ್ತರಿಸುವ ಮೂಲಕ ಇನ್ನಷ್ಟು ಮಹಿಳೆಯರನ್ನು ತಲುಪುವ ಮತ್ತು ಕರಕುಶಲ ವಸ್ತುಗಳನ್ನು ಸಂಗ್ರಹಿಸುವ ಗುರಿ ಹೊಂದಿದ್ದಾರೆ. ಸವಾಲುಗಳನ್ನು ಮೆಟ್ಟಿ ಮುನ್ನಡೆಯುವ ವಿಶ್ವಾಸವೂ ಅವರಿಗಿದೆ.

ಒಬ್ಬ ವ್ಯಕ್ತಿಯ ಸಣ್ಣ ಪ್ರಯತ್ನದಿಂದ ಮಹತ್ವದ ಸಾಮಾಜಿಕ ಬದಲಾವಣೆ ತರಬಹುದು ಎಂಬುದಕ್ಕೆ ಶಾಹಿದಾ ಖಾನಂ ಅವರ ಪರಿಶ್ರಮವೇ ಸಾಕ್ಷಿ. ಅವರ ಮ್ಯೂಸಿಯಂ ಮತ್ತು ತರಬೇತಿ ಕೇಂದ್ರವು ಗತಕಾಲ ವಸ್ತುಗಳನ್ನು ಸಂರಕ್ಷಿಸುವುದಷ್ಟೇ ಅಲ್ಲದೆ ಉತ್ತಮ ಭವಿಷ್ಯಕ್ಕಾಗಿ ಅವಕಾಶಗಳನ್ನೂ ಸೃಷ್ಟಿಸಿದೆ. ಶಾಹಿದಾ ಅವರ ಸಮರ್ಪಣಾ ಭಾವ ಮತ್ತು ದೂರದೃಷ್ಟಿಯು ಆರ್ಥಿಕ ಸಬಲೀಕರಣದ ಮೂಲಕ ಸಾಂಸ್ಕೃತಿಕ ಸಂರಕ್ಷಣೆಯು ಹೇಗೆ ಸಾಧ್ಯ ಎಂಬುದನ್ನು ಜಗತ್ತಿಗೆ ಸಾರಿದೆ.

ಅನುವಾದ: ಕೀರ್ತಿಕುಮಾರಿ ಎಂ

ಕುಂಬಾರಿಕೆಗೆ ಒಲಿದ ಪದವೀಧರರು

10ನೇ ಪುಟದಿಂದ...

ಖಾನಾಪುರದಲ್ಲಿ ಸಿದ್ಧಗೊಳ್ಳುವ ಮಣ್ಣಿನಭಟ್ಟಿಗಳಿಗೆ ರಾಜ್ಯ ಮಾತ್ರವಲ್ಲದೇ, ದೇಶದ ಇತರ ಭಾಗಗಳಿಂದಲೂ ಬೇಡಿಕೆ ಇದೆ. ಸ್ಥಳೀಯ ಕುಂಬಾರರ ವಸ್ತುಗಳನ್ನು ವಿದೇಶದವರೂ ಖರೀದಿಸಿದ್ದಾರೆ. ಇಲ್ಲಿ ಪ್ರದರ್ಶನ ಮಳಿಗೆ ಕೂಡ ಇದೆ. ಹಲವು ಹೋಟೆಲ್ ಉದ್ಯಮಿಗಳು ಇಲ್ಲಿಂದಲೇ ಖರೀದಿಸುತ್ತಾರೆ. ಪ್ರವಾಸಿಗರ ಭೇಟಿಗೂ ಅವಕಾಶವಿದೆ.

'ಜಗತ್ತನ್ನು ರಾಕ್ಷಸನಂತೆ ಕಾಡುತ್ತಿರುವ ಪ್ಲಾಸ್ಟಿಕ್‌ನಿಂದ ಮುಕ್ತರಾಗಲು ಮಣ್ಣಿನ ವಸ್ತುಗಳೇ ಬೇಕು. ಈಗೀಗ ಮಣ್ಣಿನ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚುತ್ತಿದೆ. ಮಾರುಕಟ್ಟೆಯೂ ವಿಸ್ತಾರವಾಗಿದೆ. ಕಾಲಕ್ಕೆ ತಕ್ಕ ಪರಿವರ್ತನೆ ಮಾಡಿಕೊಂಡಿದ್ದೇ ಇದಕ್ಕೆ ಕಾರಣ' ಎನ್ನುತ್ತಾರೆ ಸಂಸ್ಥೆಯ ಸಹಾಯಕ ಕಾರ್ಯನಿರ್ವಾಹಕ ವೆಂಕಟೇಶ.

ಖಾನಾಪುರದಲ್ಲೇ ಏಕೆ?

ಮಲಪ್ರಭಾ ನದಿ ಪಾತ್ರದಲ್ಲಿ ಅಪಾರ ಪ್ರಮಾಣದ ಜೇಡಿಮಣ್ಣು ಸಿಗುತ್ತದೆ. ಇದರಲ್ಲಿ ಕಬ್ಬಿಣದ ಅಂಶ ಯಥೇಚ್ಛವಾಗಿದೆ. ಹೆಚ್ಚು ಜಿಗುಟು ಬರುವುದರಿಂದ ವಸ್ತುಗಳು ಬಾಳಿಕೆ ಬರುತ್ತವೆ. ಮೊದಲು ನದಿ ಪಾತ್ರದಿಂದ ಮಣ್ಣು ತಂದು ಸಂಸ್ಕರಿಸಲಾಗುತ್ತದೆ. ಬೃಹದ್ದಾದ ಭಟ್ಟಿಗಳಲ್ಲಿ ಹಾಕಿ ಅದನ್ನು ಸುಡಲಾಗುತ್ತದೆ. ಮಣ್ಣು ಹದಕ್ಕೆ ಬಂದ ಮೇಲೆ ಒಣಹಾಕಿ, ಕಲೆಸಿದ ಬಳಿಕ ಉಪಯೋಗಕ್ಕೆ ಸಿಗುತ್ತದೆ. ಕಾಲಲ್ಲಿ ಮಣ್ಣು ತುಳಿದು, ಕೈಯಿಂದ ಚಕ್ರ ತಿರುಗಿಸುವ ಕಾಲವಿತ್ತು. ಈಗ ಎಲ್ಲದಕ್ಕೂ ಯಂತ್ರಗಳು ಬಂದಿವೆ. ಯಾಂತ್ರಿಕ ಕುಂಬಾರಿಕೆ ಜತೆಗೆ ಸಾಂಪ್ರದಾಯಿಕ ಪದ್ಧತಿಯನ್ನೂ ಜೀವಂತವಾಗಿ ಇಟ್ಟಿರುವುದು ಈ ಸಂಸ್ಥೆಯ ವಿಶೇಷ.

ನಾವು ಎಷ್ಟೇ ಆಧುನಿಕರಾದರೂ ಮತ್ತೆ ಮತ್ತೆ ಹಳೆಯದನ್ನು ನೆನಪಿಸಿಕೊಳ್ಳುವ, ಅಪ್ಪಿಕೊಳ್ಳುವ ಸಂದರ್ಭ ಆಗಾಗ ಬರುತ್ತಲೇ ಇರುತ್ತದೆ. ಹಾಗೆಯೇ ಮಣ್ಣಿನಿಂದ ತಯಾರಾದ ವಸ್ತುಗಳೂ ಕೂಡ.

ಕಥನಗಳ ಗಣಿ ಕೆಜಿಎಫ್..!

10ನೇ ಪುಟದಿಂದ...

ಈ ಹಿನ್ನೆಲೆಯಲ್ಲೇ ಮುಂದುವರಿದ ಕರ್ನಾಟಕ ಪ್ರಸ್ತುತ ಮಾಹಿತಿ ತಂತ್ರಜ್ಞಾನ (ಐಟಿ) ಮತ್ತು ಜೈವಿಕ ತಂತ್ರಜ್ಞಾನ (ಬಿಟಿ), ಇಸ್ರೊ, ರಿಯಲ್ ಎಸ್ಟೇಟ್, ಇತ್ಯಾದಿಗಳಲ್ಲಿ ಈಗಲೂ ದೇಶದಲ್ಲಿ ಮುಂಚೂಣಿಯಲ್ಲಿದೆ.

ಎರಡು ವಿಶ್ವ ಮಹಾಯುದ್ಧಗಳ ಕಾಲದಲ್ಲೂ ಕೆಜಿಎಫ್ ಗಣಿಗಳು ನಿಲ್ಲದೆ ಚಿನ್ನದ ಉತ್ಪಾದನೆ ಮಾಡಿದವು. ಗಣಿ ಕಾರ್ಮಿಕರು ಇಲಿಗಳಂತೆ ಎಂಟು ಕಿಲೊಮೀಟರ್ ಉದ್ದ, ಎರಡು ಕಿಲೊಮೀಟರ್ ಅಗಲ ಮತ್ತು 3.3 ಕಿಲೊಮೀಟರ್ ಆಳದಲ್ಲಿ ತೋಡಿದ ಒಟ್ಟು ಸುರಂಗಗಳ ಉದ್ದ 1467 ಕಿಲೊಮೀಟರ್‌ಗಳು. ಗಣಿಗಳ ಮೇಲೆ ಬಿದ್ದ ಗಣಿ ತ್ಯಾಜ್ಯ 50 ದಶಲಕ್ಷ ಟನ್‌ಗಳು. ಈ ಪ್ರಕ್ರಿಯೆಯಲ್ಲಿ ದಾಖಲೆಗಳ ಪ್ರಕಾರ ಸತ್ತವರ ಸಂಖ್ಯೆ ಏಳು ಸಾವಿರ ಮತ್ತು ಗಾಯಗೊಂಡವರ ಸಂಖ್ಯೆ ಹದಿನಾರು ಸಾವಿರ. ಪಳೆಯುಳಿಕೆ ಗಣಿಗಳಲ್ಲಿ ಸತ್ತವರ ಸಂಖ್ಯೆ ಯಾವುದೇ ದಾಖಲೆಗಳಲ್ಲಿ ದೊರಕುವುದಿಲ್ಲ. ನಾಲ್ಕಾರು ದಲಿತ ಪೀಳಿಗೆಗಳು ಆಧುನಿಕ ಗಣಿಗಳ ಸುರಂಗಗಳಲ್ಲಿ ಬಲು ಕಷ್ಟದಿಂದ ಬದುಕನ್ನು ಕಟ್ಟಿಕೊಂಡ ಯಶೋಗಾಥೆಯನ್ನು ಮರೆಯಲಾಗದು.



ಕೆಜಿಎಫ್‌ನ ಹೊರನೋಟ

ಇಲ್ಲಿನ ಆಂಗ್ಲೊ-ಇಂಡಿಯನ್ ಶಿಕ್ಷಕರಿಂದ ಇಂಗ್ಲಿಷ್ ಕಲಿತುಕೊಂಡ ಸ್ಥಳೀಯ ಮಕ್ಕಳು ರಾಜ್ಯ ಮತ್ತು ದೇಶದ ಮುಖ್ಯವಾಹಿನಿಯಲ್ಲಿ ಸೇರಿಕೊಂಡರು.

ಮೊನ್ನೆಯಷ್ಟೇ ನೋಡಿದ ತಮಿಳಿನ ಸೂಪರ್ ಹಿಟ್ ಸಿನಿಮಾ 'ತಂಗಲಾನ್' ಕಾರಣದಿಂದ ಇವೆಲ್ಲವೂ ಸುರುಳಿಯಂತೆ ಬಿಚ್ಚಿಕೊಳ್ಳುತ್ತಾ ಹೋದವು. ನಿರ್ದೇಶಕ ಪ.ರಂಜಿತ್ ಮತ್ತವರ ತಂಡ ಈ ಸಿನಿಮಾ ನಿರ್ಮಿಸಲು ಸಾಕಷ್ಟು ಬೆವರು ಹರಿಸಿರುವುದು ಕಾಣಿಸುತ್ತದೆ. ಈಗಲೂ ಸಾಕಷ್ಟು ಚಿನ್ನ ಈ ಗಣಿಗಳಲ್ಲಿ ಉಳಿದುಕೊಂಡಿದೆ. ಇವು ಮತ್ತೆ ಯಾವಾಗ ಆರಂಭಗೊಳ್ಳುತ್ತವೆ ಎನ್ನುವ ಕಾತರ ಎಲ್ಲರಲ್ಲೂ ಇದೆ. ಬ್ರಿಟನ್‌ನಿಂದ ಭಾರತದವರೆಗೂ ಕೆಜಿಎಫ್ ಎಂದರೆ ಕುತೂಹಲ ಇದ್ದೇಇದೆ! ಕೆಜಿಎಫ್ ಹೆಸರಿನ ಸಿನಿಮಾಗಳು ದೊಡ್ಡ ಹಿಟ್ ಆಗಿವೆ. ಚಿನ್ನದ ವ್ಯಾಮೋಹವೇ ಹಾಗೆ!

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಗಣಬರು

ಗಣಬರು (ಕ್ರಿ). ಮೈಮೇಲೆ ಗ್ರಹ ಬರು; ಮೈದುಂಬು; ದೇವರು ಬರು

[ಗಣ + ಬರು (< ಬರ್)]

ಭೂತವನ್ನು ಮೈಗೂಡಿಸಿಕೊಂಡು ಒಂದು ರೀತಿಯ ದೇವಮಾನವನಂತೆ ವರ್ತಿಸುವ ಪದ್ಧತಿಯನ್ನು, ಮೈಮೇಲೆ ದೇವರು ಬರುವುದನ್ನು ಜನಪದರು 'ಗಣ' ಎಂದು ಕರೆಯುತ್ತಾರೆ. ಆ ಕ್ರಿಯೆಗೆ ಒಳಗಾದ ವ್ಯಕ್ತಿಯನ್ನು 'ಗಣಮಗ' ಎಂದು ಹೇಳುವರು.

ಸೀತೆಯ ಚೆಲುವನ್ನು ಸವಿಯಲು ಪುಷ್ಪಕ ವಿಮಾನದಿಂದ ಇಳಿಯುವಾಗ ರಾವಣನು ಸುಂಟರಗಾಳಿಯಾಗಿ ನೆಲಕ್ಕೆ ಇಳಿದನು ಎಂದು ಕುವೆಂಪು ಬಣ್ಣಿಸಿದ್ದಾರೆ. ಅದು ಭೂತನರ್ತನ ಮಾಡಿ ಅಲ್ಲಿ ಇಲ್ಲಿ ಕುಣಿದು ನೆಗೆಯಿತು. ಹಾರುತ್ತ ಓಡುತ್ತ ಹೆಡೆಯೆತ್ತಿ ನಿಂತು ನಾಗರದ ರೀತಿ ಓಲಾಡಿತು. ಮತ್ತೊಮ್ಮೆ ನಡು ಬಳುಕಿ ನಟಿಯಂತೆ ಓಲಾಡಿತು. ಮತ್ತೆ ಹಾಗೆ ಗಣಬಂದವನ ರೀತಿ ವೃತ್ತಾಕಾರವಾಗಿ ಕುಣಿದು ನಿಧಾನ ನಿಧಾನವಾಗಿ ಸೀತೆ ಇದ್ದಲ್ಲಿಗೆ ಬಂದಿತು. ಆ ಗಾಳಿಯ ಕುಣಿತ ಚಿತ್ರಿಸುವಾಗ ಕವಿಯು ಜನಪದರ ಗಣಬಂದವನನ್ನು ಉಲ್ಲೇಖಿಸಿದ್ದಾರೆ.

ಮತ್ತಂತೆ
ಗಣಬಂದವನ ತೆರದಿ ರಿಂಗಣಗುಣಿಸು ಹೊಮ್ಮಿ
ರಯ್ಯನೊಯ್ಯನೆ ಹತ್ತೆ ಹರಿತಂದುದಾಗಾಳಿ.

ಬಾನಕ್ಷತೆ

ಬಾನು (ನಾ). ಆಕಾಶ; ಗಗನ

ಅಕ್ಷತೆ (ನಾ). 1. ಪೂಜೆ, ಶುಭಕಾರ್ಯ, ಮುಂತಾದವುಗಳಲ್ಲಿ ಬಳಸುವ ಅರಿಸಿನವನ್ನಾಗಲಿ ಕುಂಕುಮವನ್ನಾಗಲಿ ಹಚ್ಚಿದ ಅಕ್ಕಿ.

2. ಆರತಕ್ಷತೆ, ಕೆಂಪಕ್ಷತೆ, ಗಂಧಕ್ಷತೆ, ಬಿಳಿಯಕ್ಷತೆ, ಮಂತ್ರಾಕ್ಷತೆ, ಹಳದಿಯಕ್ಷತೆ.

ಕುವೆಂಪು ಅವರು ಬೆಳ್ಳಕ್ಕಿಗಳನ್ನು ತದೇಕ ಚಿತ್ತವಾಗಿ ನೋಡುತ್ತ ಕಲ್ಪನಾ ಸೌಂದರ್ಯದಲ್ಲಿ ಮಿಂದು ಅವುಗಳನ್ನು ವಿವಿಧ ಬಗೆಯಾಗಿ ವರ್ಣಿಸಿದ್ದಾರೆ. ಶ್ವೇತಶುದ್ಧದ ಅವುಗಳು ಸಾಲುಸಾಲಾಗಿ ಗುಂಪಿನಲ್ಲಿ ಹಾರುತ್ತ, ಕೆಲವೊಮ್ಮೆ ಚದುರಿದಂತೆ ಸಾಗುತ್ತ ಮನೋಹರವಾಗಿ ಕಾಣುತ್ತವೆ; ಅವುಗಳ ಬೆಡಗಿನ ಇಂದ್ರಜಾಲಕ್ಕೆ ಒಳಗಾಗದವರಿಲ್ಲ. ಕವಿಯು 'ಸಂಕೇತ ಸಾಕ್ಷಿ' ಕವನದಲ್ಲಿ ಅವುಗಳನ್ನು 'ಬಾನಕ್ಷತೆ', 'ಹಾಲ್‌ಚುಕ್ಕಿ' ಎಂಬ ಹೊಸ ಪದಗಳಿಂದ ಬಣ್ಣಿಸಿದ್ದಾರೆ. ಅವರಿಗೆ ಅವುಗಳು 'ಜಗನ್ಮಾತೆಯ ಆಶೀರ್ವಾದ'ವಾಗಿವೆ. ಅವುಗಳು ಸಾಲು ಸಾಲಾಗಿ ಚಲಿಸಿ ಸಾಗುತ್ತ ದೂರ ದೂರದಲ್ಲಿ ಹಾಲ್‌ಚುಕ್ಕಿಯಾಗಿ ಗೋಚರಿಸಿವೆ!

'ಜಗನ್ಮಾತೆಯ ಆಶೀರ್ವಾದದ
ಬಾನಕ್ಷತೆ ಈ ಬೆಳ್ಳಕ್ಕಿ;
ಮನೆಯಿದಿರೇ ಹೊಲದಲಿ
ಎರಚಿದವೋಲಿದೆ ಬಿಳಿ ಅಕ್ಕಿ!
ಒಯ್ಯೊಯ್ಯನೆ ಅಃ ಚಲಿಸುತ್ತಿವೆ
ಸಾಲ್ ಸಾಲ್ ಸಾಲ್ ಹಾಲ್ ಚುಕ್ಕಿ!



2ನೇ ಸಂಪುಟ
ಇದೀಗ ಲಭ್ಯ
ಹೊನ್ನ ಕಣಜ
ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆಯಲ್ಲಿ
ಬಹುಮಾನ ಪಡೆದ ಸಣ್ಣ ಕಥೆಗಳ ಸಂಕಲನ
ಪ್ರತಿಗಳಿಗಾಗಿ ಸಂಪರ್ಕಿಸಿ
ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ
ಬೆಂಗಳೂರು – 560001
ದೂರವಾಣಿ : 080 22161900/901/913/914
Shop Online www.navakarnataka.com

ಮುನ್ನೋಟ 01-09-2024 ರಿಂದ 07-09-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಬಹಳ ಚುರುಕಾಗಿ ಕೆಲಸ ಮಾಡುವಿರಿ. ಆದಾಯ ಉತ್ತಮವಾಗಿರುತ್ತದೆ. ನಿಮ್ಮ ಕೆಲಸ ಕಾರ್ಯಗಳಿಗೆ ಬಂಧುಗಳ ಸಹಕಾರ ದೊರೆಯುತ್ತದೆ. ಸರ್ಕಾರಿ ನೌಕರರಿಗೆ ಆದಾಯ ಹೆಚ್ಚುತ್ತದೆ. ಬಾಹ್ಯ ರೋಗಗಳಿರುವವರು ಹೆಚ್ಚು ಎಚ್ಚರಿಕೆ ವಹಿಸಿರಿ. ಸಂಗಾತಿಗಾಗಿ ಹೆಚ್ಚು ಹಣ ಖರ್ಚು ಮಾಡಬೇಕಾಗುತ್ತದೆ. ಹಿರಿಯರು ನಿಮ್ಮ ವ್ಯವಹಾರದಲ್ಲಿ ಹಣಹೂಡಿಕೆ ಮಾಡುವುದರಿಂದ ನಿಮಗೆ ಲಾಭ ಬರುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಬಹಳ ಗೌರವಯುತವಾಗಿ ನಡೆದುಕೊಳ್ಳುವಿರಿ. ಆದಾಯವು ಕಡಿಮೆ ಇರುತ್ತದೆ. ದಿನಸಿ ವ್ಯಾಪಾರಿಗಳಿಗೆ ಬಹಳ ಲಾಭವಿದೆ. ಜಮೀನಿನ ಮೇಲಿದ್ದ ಸರ್ಕಾರಿ ತೊಡಕುಗಳು ಈಗ ನಿವಾರಣೆಯಾಗುತ್ತದೆ. ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶವಿರುತ್ತದೆ. ಸಂಗಾತಿಯ ಆರೋಗ್ಯದಲ್ಲಿ ಸ್ವಲ್ಪ ವ್ಯತ್ಯಾಸವನ್ನು ಕಾಣಬಹುದು. ಸಂಗಾತಿಯಿಂದ ಸ್ವಲ್ಪ ಆದಾಯ ಬರುತ್ತದೆ. ಕೃಷಿಯಿಂದ ಆದಾಯವಿರುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ದೃಢ ನಿರ್ಧಾರಗಳಿಂದ ಮುನ್ನುಗ್ಗುವಿರಿ. ಹಿರಿಯರ ಸಹಕಾರ ದೊರೆಯುತ್ತದೆ. ಸಂಸಾರದಲ್ಲಿ ಸ್ವಲ್ಪ ಸಮಸ್ಯೆಗಳು ಎದುರಾಗಬಹುದು. ವಿದ್ಯಾರ್ಥಿಗಳಿಗೆ ಸಾಮಾನ್ಯ ಫಲಿತಾಂಶವಿರುತ್ತದೆ. ಸಂಗಾತಿ ಆರೋಗ್ಯಕ್ಕಾಗಿ ಹಣ ಖರ್ಚಾಗುತ್ತದೆ. ವೃತ್ತಿಯಲ್ಲಿ ಶ್ರಮಕ್ಕೆ ತಕ್ಕ ಫಲವಿರುತ್ತದೆ. ಕೃಷಿಯಿಂದ ಲಾಭವಿರುತ್ತದೆ. ಹಿರಿಯರೊಡನೆ ಈಗ ಮನಸ್ತಾಪ ಮಾಡಿಕೊಳ್ಳುವುದು ಬೇಡ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಮನಸ್ಸು ಸ್ವಲ್ಪ ಆನಂದದಾಯಕವಾಗಿರುತ್ತದೆ. ಆದಾಯವು ಉತ್ತಮವಾಗಿರುತ್ತದೆ. ವ್ಯವಹಾರಕ್ಕೆ ಸಂಬಂಧಿಸಿದಂತೆ ಉತ್ತಮ ವಾರ್ತೆಗಳು ಕೇಳಿ ಬರುತ್ತವೆ. ದಿನಸಿ ವ್ಯಾಪಾರಗಳಿಗೆ ಹೆಚ್ಚು ಲಾಭ. ಸರ್ಕಾರಿ ಅಧಿಕಾರಿಗಳಿಗೆ ಹೊಸ ಆದಾಯದ ಮೂಲ ಒದಗಬಹುದು. ನಿಮ್ಮ ಕೆಲಸ ಕಾರ್ಯಗಳಿಗೆ ಸೋದರಿಯರಿಂದ ಅಡ್ಡಿಯಾಗುವ ಸಾಧ್ಯತೆ ಇದೆ. ಆರೋಗ್ಯದಲ್ಲಿ ಸುಧಾರಣೆ ಕಾಣಬಹುದು.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಆತ್ಮಗೌರವ ಬಹಳ ಹೆಚ್ಚಾಗಿಯೇ ಇರುತ್ತದೆ. ಆದಾಯವು ನಿರೀಕ್ಷೆಗಿಂತ ಕಡಿಮೆ ಇರುತ್ತದೆ. ಕೃಷಿಯಿಂದ ಆದಾಯ ಹೆಚ್ಚುತ್ತದೆ. ಭೂಮಿ ವ್ಯವಹಾರ ಮಾಡುವವರಿಗೆ ಮತ್ತು ಕಟ್ಟಡ ನಿರ್ಮಾಣ ಮಾಡುವವರಿಗೆ ಹೆಚ್ಚಿನ ಆದಾಯವಿರುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ಸ್ನಾಯುಗಳ ಸೆಳೆತ ಕೆಲವರನ್ನು ಕಾಡಬಹುದು.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ನಿಮ್ಮ ನಿರ್ಧಾರಗಳು ಹಾಗೂ ನಡೆಗಳ ಬಗ್ಗೆ ನಿಮಗೆ ಗೊಂದಲವಿರುತ್ತದೆ. ಆದಾಯವು ಕಡಿಮೆಯಾಗಿದ್ದು ಹಣ ನಿರ್ವಹಣೆ ಸರಿಯಾಗಿ ಮಾಡಬೇಕಾಗಿದೆ. ನಿಮ್ಮ ಕೆಲಸ ಕಾರ್ಯಗಳಿಗೆ ಬಂಧುಗಳಿಂದ ಸಹಾಯ ದೊರೆತರೂ ನಿಮ್ಮದೇ ಆದ ತಪ್ಪುಗಳಿಂದ ಕೆಲಸ ಕಾರ್ಯಗಳು ಅಲ್ಲೇ ನಿಲ್ಲುತ್ತವೆ. ಹಿರಿಯರ ಆಸ್ತಿ ಅಥವಾ ಹಣ ದೊರೆಯುತ್ತದೆ. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹೆಚ್ಚಿನ ಹಣ ಖರ್ಚು ಮಾಡಬೇಕಾಗುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ನಿಮ್ಮಲ್ಲಿ ಆತ್ಮವಿಶ್ವಾಸದ ಕೊರತೆ ಎದ್ದು ಕಾಣುತ್ತದೆ. ಭೂಮಿ ವ್ಯವಹಾರಗಳಿಂದ ಹಣವನ್ನು ಮಾಡಬಹುದು. ಆದಾಯ ಸಾಮಾನ್ಯ ಮಟ್ಟದಲ್ಲಿರುತ್ತದೆ. ಬರಬೇಕಾದ ಹಣ ಬರುವುದು ನಿಧಾನವಾಗಬಹುದು. ಕುಟುಂಬದಲ್ಲಿ ಶಾಂತಿಯೊಂದಿಗೆ ಸಂಘರ್ಷವೂ ಇರುತ್ತದೆ. ಮಕ್ಕಳ ಏಳಿಗೆಗಾಗಿ ಸಾಕಷ್ಟು ಶ್ರಮಪಡುವಿರಿ. ಕೀಲು ನೋವು, ಮೂತ್ರಕೋಶದ ತೊಂದರೆಗಳು ಕಾಣಿಸಬಹುದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಬಹಳ ಗೌರವಯುತವಾದ ನಡವಳಿಕೆ ನಿಮ್ಮಲ್ಲಿ ಇರುತ್ತದೆ. ಆದಾಯವು ಕಡಿಮೆ ಎನ್ನಿಸಿದರೂ ತೊಂದರೆ ಇರುವುದಿಲ್ಲ. ಶತ್ರುಗಳು ನಿಮ್ಮ ತಂಟೆಗೆ ಬರಲು ಸಾಕಷ್ಟು ಯೋಚನೆ ಮಾಡುವರು. ಸಾಂಪ್ರದಾಯಿಕ ಕೃಷಿ ಬಹಳ ಅನುಕೂಲ ಮಾಡಿಕೊಡುತ್ತದೆ. ಮಾಂಸಖಂಡ ಸಮಸ್ಯೆ ಹೊಂದಿದ್ದವರು ಈಗ ಸುಧಾರಣೆಯನ್ನು ಕಾಣಬಹುದಾಗಿದೆ. ಸಂಗಾತಿಯಿಂದ ಎಲ್ಲ ರೀತಿಯ ಸಹಕಾರ ನಿಮಗೆ ದೊರೆಯುತ್ತವೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಸ್ವಲ್ಪ ಆತ್ಮವಿಶ್ವಾಸದ ಕೊರತೆಯನ್ನು ಅನುಭವಿಸುವಿರಿ. ಪತ್ತೆದಾರಿ ಕೆಲಸ ಮಾಡುವವರಿಗೆ ಸಾಕಷ್ಟು ಯಶಸ್ಸಿರುತ್ತದೆ. ಶತ್ರುಗಳನ್ನು ಮಟ್ಟಹಾಕುವ ಕಲೆ ನಿಮಗೆ ಸಿದ್ಧಿಸುತ್ತದೆ. ಆಸ್ತಿ ವಿವಾದಗಳಲ್ಲಿ ಹೊಸ ತಕರಾರುಗಳು ಬರಬಹುದು. ವಿದೇಶದಲ್ಲಿರುವವರು ಸ್ಥಿರಾಸ್ತಿ ಮಾಡಿಕೊಳ್ಳಬಹುದು. ಕ್ರೀಡಾಪಟುಗಳಿಗೆ ಸಾಧನೆ ಮಾಡುವ ಕಾಲವಿದು. ಎಲೆಕ್ಟ್ರಾನಿಕ್ಸ್ ವಿದ್ಯಾರ್ಥಿಗಳಿಗೆ ಅತ್ಯಂತ ಹೆಚ್ಚಿನ ಯಶಸ್ಸು ಇರುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಮನಸ್ಸು ಒಂದು ರೀತಿ ಗೊಂದಲಮಯವಾಗಿರುತ್ತದೆ. ಆದಾಯ ಕಡಿಮೆ ಇದ್ದರೂ ನಿರ್ವಹಣಾ ಶಕ್ತಿ ನಿಮಗಿರುತ್ತದೆ. ಆಸ್ತಿ ವಿಚಾರಗಳಲ್ಲಿ ಸ್ವಲ್ಪ ಗೊಂದಲ ಮೂಡಬಹುದು. ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ಈಗ ದೊರೆಯುತ್ತದೆ. ತಲೆನೋವು ಈಗ ಕೆಲವರನ್ನು ಕಾಡಬಹುದು. ಸಂಗಾತಿಯಿಂದ ನಿಮಗೆ ಸಾಕಷ್ಟು ಸಹಕಾರ ಮತ್ತು ಸಹಾಯ ದೊರೆಯುತ್ತದೆ.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ದೃಢ ನಿರ್ಧಾರದಿಂದ ಮುಂದೆ ನಡೆಯುವಿರಿ. ಅದರಲ್ಲೂ ಯುವಕರು ಮಾತನಾಡುವಾಗ ಸಾಕಷ್ಟು ಎಚ್ಚರಿಕೆ ವಹಿಸಿ. ವಿದೇಶಿ ವ್ಯವಹಾರ ಮಾಡುವವರ ಆದಾಯ ಹೆಚ್ಚುತ್ತದೆ. ಬಂಧುಗಳಿಂದ ಹಿರಿಯರಿಗೆ ಸಾಕಷ್ಟು ಅನುಕೂಲವಾಗುತ್ತದೆ. ಸಂಸಾರದಲ್ಲಿ ಆನಂದವಿರುತ್ತದೆ. ಸಾಹಸ ಕ್ರೀಡೆಗಳನ್ನು ಪ್ರದರ್ಶನ ಮಾಡುವವರಿಗೆ ಬೇಡಿಕೆ ಬಹಳಷ್ಟು ಬರುತ್ತದೆ. ಶೀತ ಸಂಬಂಧಿ ಕಾಯಿಲೆಗಳಿರುವವರು ಹೆಚ್ಚು ಎಚ್ಚರ ವಹಿಸಿ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಕೆಲವೊಮ್ಮೆ ನಿಮ್ಮ ನಡವಳಿಕೆಗಳೇ ನಿಮಗೆ ಸಮಸ್ಯೆ ಉಂಟು ಮಾಡುತ್ತವೆ. ಆದಾಯ ಮಂದಗತಿಯಲ್ಲಿ ಇರುತ್ತದೆ. ಹಿರಿಯರ ಸಹಕಾರ ನಿಮಗಿದ್ದರೂ ನೀವು ಅದನ್ನು ಸದುಪಯೋಗ ಮಾಡಿಕೊಳ್ಳುವುದಿಲ್ಲ. ಹೊಸ ಆಸ್ತಿಯನ್ನು ಮಾಡಿಕೊಳ್ಳಬೇಕೆಂಬ ಹಂಬಲವಿದ್ದು ಅದರ ಕಡೆಗೆ ಪ್ರಯತ್ನ ಪಡುವಿರಿ. ವಿದ್ಯಾರ್ಥಿಗಳಿಗೆ ಉತ್ತಮ ಕಾಲವಿದು. ಕಣ್ಣಿನ ತೊಂದರೆ ಇರುವವರು ಎಚ್ಚರ ವಹಿಸಿ.

ಪದಬಂಧ 2857



ಮೇಲಿನಿಂದ ಕೆಳಕ್ಕೆ

1. ದೇಶದ ಆಡಳಿತ ಸೂತ್ರ ಹಿಡಿದಿರುವ ಪ್ರಮುಖ 3
2. ಕೆಲಸ ಹೀಗೆ ವೇಗವಾದ ಗತಿಯಲ್ಲಿ ಸಾಗಬೇಕು 3
3. ಭೂಮಿಯೊಳಗೆ ಕಟ್ಟಿರುವ ಅಂತಸ್ತು 5
4. ಭಗವಂತನಿಗೆತ್ತುವ ನೂರು ಸಾವಿರ ಬೆಳಗು ದೀಪ 4
7. ಯಂತ್ರ ಮತ್ತು ಮಾನವನ ಕಾರ್ಯ ದಕ್ಷತೆ 3
9. ಶರೀವನ್ನೊಳಗೊಂಡ ಅನುಮಾನ 3
10. ಆದಿಮಾನವನ ಮೂಲ ಕಂದ 3
11. ಯೌವ್ವನದ ಭಿಕ್ಷೆ ಬೇಡಿದ ಪಾಂಡವರ ಪೂರ್ವಜ 3
12. ಪಿಂಡ ಪ್ರದಾನಕ್ಕೆ ಎಳ್ಳು ಕಲಿಸಿದ ಅನ್ನ 3
14. ಸಂನ್ಯಾಸಿಗೆ ಸೈ ಎನಿಸುವ ಖಾವಿ ಉಡುಪು 5
15. ಬೇಡಿ ತಿನ್ನುವ ಯಾಚಕ 3
16. ಮುಪ್ಪನ್ನು ಸಂಧಿಸಿದ ಇಬ್ಭಾಗದ ಭೀಮನ ಎದುರಾಳಿ 4
18. ನಾಕದಲ್ಲಿ ಹುಡುಕಿದರೆ ಸಿಗುವ ಅಗ್ರಗಣಿ 3
19. ಮೇಲೆ ನೋಡದಿರಿ, ಬಗ್ಗಿ ಇಲ್ಲಿ ನೋಡಿ ಸಿಗಬಹುದು 3

ಎಡದಿಂದ ಬಲಕ್ಕೆ

1. ಜನರೆ ದೊರೆಗಳೆಂಬ ಆಡಳಿತ ತತ್ವ 5
3. ರಾಜ್ಯಗಳ ನಡುವೆ ನಡೆಯುವ ಕಲಹ ಭೂಮಿ ಅಥವಾ ನೀರಿಗಾಗಿ 4
5. ಉತ್ತರಭಾರತದವರು ಆಟೋಚಾಲಕನನ್ನು ಕರೆಯುವ ಪರಿ 4
6. ಪಕ್ಷಗಳು ಕೆಳಗೆ ಬೀಳದಂತೆ ಹರಿಸುವ ಸಮಾನ ದೃಷ್ಟಿ 5
8. ಮಿಂಚಿ ಮರೆಯಾಗುವ ಮಾಟಗಾರ 4
9. ಚಿಂತೆಯಿಲ್ಲದವರು ಇಲ್ಲಿಯೂ ಹಾಯಾಗಿ ನಿದ್ರಿಸುತ್ತಾರೆ 2
10. ಒಡನಾಡುವ ಸ್ನೇಹಿತ-ಸ್ನೇಹಿತೆ 6
13. ದೇಶದ ಆರ್ಥಿಕ ಸುಧಾರಣೆಗೆ ರೂಪಿಸುವ ನಿಯಮ 6
15. ಮುರಿದು ಪ್ರತ್ಯೇಕವಾದದ್ದು 2
17. ವಿಜಯನಗರ ಸಾಮ್ರಾಜ್ಯದ ಹೆಸರಾಂತ ಅಳಿಯ 4
18. ಸರ್ಪ ವೇಶದಲ್ಲಿ ಬರುವ ಕುವರಿ 5
20. ಹೊಳೆಯುವ ಅಮೂಲ್ಯ ಹರಳಿನಂತೆ ಗಟ್ಟಿತನ ಪಡೆದ ದೇಹ 4
21. ಮತಗಳಲ್ಲಿ ಪಾಲಿಸುವ ರೀತಿ ನೀತಿಯ ಗ್ರಂಥ 4
22. ಬಳಪದಿಂದ 'ಅ ಆ ಇ ಈ... ತಿದ್ದಬಹುದಾದ ಸ್ಲೇಟು 5

ಪದಬಂಧ ಉತ್ತರ -2856

ಮೇಲಿಂದ ಕೆಳಕ್ಕೆ

1.ಪಾಪಕಾರ್ಯ 2.ವಿಕಾರ 3.ಜಾರು 4.ಕಿರಾತಕ 7.ತ್ರಿದೇವ 9.ಸಹನೆ 10.ಹಣವಂತರು 11.ನವಾಂಗನೆ 12.ಮಾನಭಂಗ 13.ಮರುಕ 15.ನಿರ್ಭಯ 16.ಹೆಣ್ಣುಮಗು 17.ಪಾಪಕೂಪ 18.ವಿಷಮ 20.ಕೂಗು

ಎಡದಿಂದ ಬಲಕ್ಕೆ

1. ಪಾಶವಿ 3.ಜಾನಕಿ 5.ಕಾಮುಕರು 6.ರಾತ್ರೋರಾತ್ರಿ 8.ಕಾತರ 10.ಹಲಕ 11.ನವ 12.ಮಾನಹರಣ 14.ತವರುಮನೆ 15.ನಿಗ 16.ಹೆದರು 18.ವಿಕೋಪ 19.ಯಮಸಮ 20.ಕೂಲಂಕುಷ 21.ಗುಡುಗು 22.ಮಹಿಪ

ಮಂಟೇಸ್ವಾಮಿಯ ಮಂಗಳ ಪದ

ಕೃಷ್ಣಮೂರ್ತಿ ಹನೂರು

ಎರಡು ವರ್ಷಗಳ ಹಿಂದೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಆರಂಭಗೊಂಡ ಮಂಟೇಸ್ವಾಮಿ ಅಧ್ಯಯನ ಪೀಠದ ವತಿಯಿಂದ ಮಂಟೇಸ್ವಾಮಿ ಕಾವ್ಯವನ್ನು ಪೂರ್ಣವಾಗಿ ಶ್ರವ್ಯ-ದೃಶ್ಯರೂಪದಲ್ಲಿ ಸಂಗ್ರಹಿಸಬೇಕೆಂಬ ಪ್ರಯತ್ನ ನಡೆಯಿತು. ಆದರೀಗ ಅದಕ್ಕೆ ತಾಂತ್ರಿಕ ಕಾರಣಗಳಿಂದ ಮಂಗಳ ಹಾಡಲಾಗಿದೆ.

ಮೈಸೂರು, ಮಂಡ್ಯ, ಚಾಮರಾಜನಗರ ಪ್ರದೇಶಗಳಲ್ಲಿ ತುಂಬ ಪ್ರಸಿದ್ಧವಾದ ಜನಪದ ಮಹಾಕಥನ ಮಂಟೇಸ್ವಾಮಿಯದು. ಮಂಟೇಸ್ವಾಮಿ, ಮಲೆಯ ಮಹದೇಶ್ವರ ಸಂತರ ಮೇಲಿನ ಈ ಬಗೆಯ ವೈವಿಧ್ಯಮಯ, ಗದ್ಯಪದ್ಯ, ಸಂಭಾಷಣಾ ಮಾದರಿಯ ದೀರ್ಘ ಕಥನಗಳು ಭಾರತದ ಬೇರಾವ ಭಾಷೆಯಲ್ಲೂ ಇಲ್ಲ. ದೀಕ್ಷೆ ತೆಗೆದುಕೊಂಡು ಈ ಕಾವ್ಯಗಳನ್ನು ಶ್ರಮದಿಂದ ಕಲಿತು ಶತಮಾನಗಳಿಂದ ಹಾಡುತ್ತಲೇ ಬಂದ ನೀಲಗಾರರು, ಗುಡ್ಡರು ದಕ್ಷಿಣ ಕರ್ನಾಟಕದಲ್ಲಿ ಅಸಂಖ್ಯಾತವಾಗಿ ಕಾಣಸಿಗುತ್ತಾರೆ. ಇವರು ಸಂಸಾರಸ್ಥರು, ಕಾಯಕಜೀವಿಗಳು. ಈ ಭಾಗದ ಲಕ್ಷಾಂತರ ಜನ ನಂಬಿದ ಸಂತರು ಇತರೇ ಶ್ರೀಮಂತ ದೈವಗಳಂತೆ ಭವ್ಯ ದೇವಾಲಯಗಳಲ್ಲಿ ವಾಸಿಸುವುದಿಲ್ಲ. ವಚನಕಾರರ ಸಂದರ್ಭದಲ್ಲಿ ಹುಟ್ಟಿಕೊಂಡ ಶೂನ್ಯ ಅಥವಾ ಬಯಲ ಆಲಯದವರು.

ಮಹದೇಶ್ವರ, ಮಂಟೇಸ್ವಾಮಿ ಕಾವ್ಯಗಳು ಬೇರೆಬೇರೆಯ ಕಲಾವಿದರಿಂದ ಹಾಡಲ್ಪಟ್ಟು ಅವು ವಿಶ್ವವಿದ್ಯಾನಿಲಯಗಳಿಂದಲೋ, ಖಾಸಗಿಯಾಗಿಯೋ ಕಳೆದ ದಶಕಗಳಲ್ಲಿ ಅಂದರೆ 1973 ರಿಂದ ಜೀಶಂಪ, ತಮಂಪ ಮೂರ್ತಿ, ಪಿ.ಕೆ.ರಾಜಶೇಖರ, ವೆಂಕಟೇಶ ಇಂದುವಾಡಿ, ಹಿ. ಚಿ. ಬೋರಲಿಂಗಯ್ಯ ಅವರಿಂದ ಪ್ರಕಟಗೊಂಡು ಬಂದಿವೆ. ಒಂದು ಕಾಲಕ್ಕೆ ಜಾನಪದ ಅಂದರೆ ಅದು ತ್ವರಿತಗತಿಯಲ್ಲಿ ಸಂಗ್ರಹವಾಗಬೇಕು, ಪ್ರಕಟವಾಗಬೇಕು, ತರಗತಿಗಳಲ್ಲಿ ಪಠ್ಯವಾಗಬೇಕು ಎಂಬೆಲ್ಲ ಉದ್ದೇಶಗಳಿದ್ದವು. ಆದರೆ ಇದರ ಜೀವಂತಿಕೆ ಇರುವುದು ಹಾಡುಗಾರಿಕೆಯಲ್ಲೇ! ಅದರಲ್ಲೂ ಮಂಟೇಸ್ವಾಮಿ ಕಾವ್ಯ ಗಾಯನ ಮಾತ್ರ ತುಂಬ ಸುಶ್ರಾವ್ಯವಾದುದು. ಅದರ ಅರ್ಥವ್ಯಾಪ್ತಿಯೂ ಅಷ್ಟೆ.

ಕಣ್ಣಿಗೆ ಕಾಣುವ ಬೆಳಕು, ಆಮೇಲೆ ಅದರ ಮುಂದುವರೆದ ಪರಂಜ್ಯೋತಿ ರೂಪು, ಇದರ ಪ್ರಸ್ತಾಪದಿಂದ ತೊಡಗಿ, ಆ ದಿವ್ಯಜ್ಯೋತಿ ಬಡವಬಲ್ಲಿದ, ಅರಮನೆ ಗುರುಮನೆ, ಹೆತ್ತವರು ಸತ್ತವರ ಮನೆಯಲ್ಲದೆ ಕಡೆಗೆ ತಿಪ್ಪೆ ಮೇಲೆ ಹಚ್ಚಿ ಇಟ್ಟರೂ ಉರಿಯುತ್ತ, ಅದಕ್ಕೆ ಭಿನ್ನ ಭೇದ ಗುಣವೇ ಇಲ್ಲವೆಂಬ ಪ್ರಾರ್ಥನೆಯೊಡನೆ ಆರಂಭವಾಗುತ್ತದೆ. ನಂತರದಲ್ಲಿ ಉತ್ತರದಿಂದ ದಕ್ಷಿಣದ ಕಡೆಗೆ ಮಂಟೇಸ್ವಾಮಿಯ ಪ್ರಯಾಣದಿಂದ ಕಥೆ ತೊಡಗುತ್ತದೆ. ಎಲ್ಲ ಶಿಷ್ಟ, ಜನಪದ ಕಾವ್ಯ ನಾಯಕರ ಪಡಿಪಾಟಲು ದೀರ್ಘ ಪ್ರಯಾಣದ ಕಥೆಯೇ! ದಕ್ಷಿಣ ಕರ್ನಾಟಕದ ಜನಪದರು 15ನೆಯ ಶತಮಾನದಲ್ಲಿ ಆಗಿಹೋದ ಈ ಸಂತರನ್ನು 12ನೆಯ ಶತಮಾನದ ಬಸವಾದಿ ಶರಣರೊಡನೆ ಸಮೀಕರಿಸಿಕೊಂಡು ಕಥೆ ಕಟ್ಟಿಬಿಟ್ಟಿದ್ದಾರೆ!

ಎರಡು ವರ್ಷಗಳ ಹಿಂದೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಆರಂಭಗೊಂಡ ಮಂಟೇಸ್ವಾಮಿ ಅಧ್ಯಯನ ಪೀಠದ ವತಿಯಿಂದ ಆ ಕಾವ್ಯವನ್ನು ಪೂರ್ಣವಾಗಿ ಶ್ರವ್ಯ-ದೃಶ್ಯರೂಪದಲ್ಲಿ ಸಂಗ್ರಹಿಸಬೇಕೆಂಬ ಪ್ರಯತ್ನ ನಡೆಯಿತು. ಆಗ ದಿನಕ್ಕೆ ನಾಲ್ಕೈದು ಗಂಟೆಗಳಂತೆ ಜನಪದ ಗಾಯಕ ಮೈಸೂರು ಗುರುರಾಜ್ ಸಹ ಗಾಯಕರೊಡನೆ ಅರಿವು ಶಾಲೆಯಲ್ಲಿ ಹಾಡಿದರು. ಆಗ ಮಂಟೇಸ್ವಾಮಿ ಅಧ್ಯಯನ ಪೀಠದ ಚಟುವಟಿಕೆಗಳೆಲ್ಲ ನಡೆದದ್ದು ಮೈಸೂರು ವಿ. ವಿ ಯ ಭಾಗವೇ ಆಗಿದ್ದ ಚಾಮರಾಜನಗರದ ಸ್ನಾತಕೋತ್ತರ ಕೇಂದ್ರದಲ್ಲಿ.

ಅರಿವು ಕನ್ನಡ ಶಾಲೆಯಲ್ಲಿ ಕೊನೆಯ ದಿನ ಮಂಟೇಸ್ವಾಮಿ ಹಾಡುಗಾರಿಕೆ ಮುಗಿದಾಗ ರಾತ್ರಿ ಎರಡು ಗಂಟೆ. ಗಾಯಕ ಗುರುರಾಜ್ ಮಂಟೇಸ್ವಾಮಿ ಕಂಡಾಯ ತರಿಸಿ, ಪೂಜೆ ಮಾಡಿಸಿ, ಸುತ್ತೆಲ್ಲ ಧೂಪದ ಪರಿಮಳ ಹಬ್ಬಿಸಿ ಎಲ್ಲ ದೈವದ ಸ್ತುತಿಯ ಮಂಗಳ ಪದ ಹಾಡತೊಡಗಿದರು. ಆ ಪದದ ಕೊನೆಯ ವಾಕ್ಯ '... ಬಡವನಾ ಮನೆಯ ಮಗನೊಬ್ಬ ಓದಿ ಮೂಜಗವು ಕೊಂಡಾಡುತಿರೆ...' ಎಂದು ಕೇಳಿಸಿತು. ಸಂಗ್ರಹ ಕಾರ್ಯದಲ್ಲಿದ್ದ ಎಂ.ಸಿ. ಮನೋಹರ್, ಚಲಪತಿ, ಮುಳ್ಳೂರು ರಾಜು ಅವರ ನಿದ್ದೆಯ ಕಣ್ಣು ಅರಳಿಬಿಟ್ಟವು. ಅರೆ 500 ವರ್ಷಗಳ ಹಿಂದಣ ಈ ಕಥನದಲ್ಲಿ ನಿನ್ನೆ ಮೊನ್ನೆಗೆ ಬಂದ ಅಂಬೇಡ್ಕರ್ ಅವರ ಹೆಸರು ಸೇರಿಕೊಂಡದ್ದು ಹೇಗೆ ಅನಿಸಿತು. ಅದಕ್ಕೆ ಗುರುರಾಜ್, 'ನಮ್ಮ ತಂದೆ ಹಾಡುತ್ತಿದ್ದರು, ನಾನೂ ಹಾಡಿದೆ' ಅಂದರು. ಆಶ್ಚರ್ಯ, ಅಕ್ಷರ ಪರಿಚಯ ಇಲ್ಲದಿದ್ದ ಗುರುರಾಜರ ತಂದೆ ಗುರುಬಸವಯ್ಯ ಈ ವಾಕ್ಯವನ್ನು ಕಟ್ಟಿ ಸೇರಿಸಿಕೊಂಡುಬಿಟ್ಟಿರಬಹುದೇ ಅನ್ನಿಸಿತು.



ಮಂಟೇಸ್ವಾಮಿ ಕಾವ್ಯ ಹಾಡುತ್ತಿರುವ ನೀಲಗಾರರು

ಚಿತ್ರ: ಸಿ.ಆರ್.ವೆಂಕಟರಾಮು

ಉಳ್ಳವರು ಮತ್ತು ಅಧಿಕಾರ ಮದದವರನ್ನು ಎದುರು ಹಾಕಿಕೊಳ್ಳುತ್ತ; ಇದೆ ಎಂದು ಮೆರೆಯುವವರ ಎದೆ ಮೇಲೆ ಕಂಡಾಯ ಮಡಗಿ ಮೆಟ್ಟಿದ ಮಂಟೇಸ್ವಾಮಿ ಕಲ್ಯಾಣದಲ್ಲಿ ಅಲ್ಲಮನ ರೂಪಾಗಿ ಬಸವಣ್ಣನನ್ನು ಭೇಟಿ ಮಾಡಿದನಂತೆ? 12ನೇ ಶತಮಾನದ ಈ ಮಂಟೇಸ್ವಾಮಿ ಬಸವಣ್ಣನನ್ನು ಎದುರುಗೊಂಡು ಕರಸ್ಥಲ ಇಲ್ಲವೇ ಕಟ್ಟಿಕೊಂಡ ಲಿಂಗಕ್ಕಿಂತ ಆತ್ಮಲಿಂಗವೇ ದೊಡ್ಡದೆಂದು ಹೇಳಿದನಂತೆ. ತನಗಿಂತ 300 ವರ್ಷಗಳ ಅಂತರದ ಬಸವಣ್ಣನನ್ನು ಮಂಟೇಸ್ವಾಮಿ ಭೇಟಿಯಾದದ್ದು ಹೇಗೆಂಬ ಪ್ರಶ್ನೆಯನ್ನು ಓದುಗರು ಕೇಳಿಯೇ ಕೇಳುತ್ತಿದ್ದಾರೆ. ಆದರೆ ನಮ್ಮ ಕವಿಗಳಿಗೆ, ಜನಪದರಿಗೆ ಕಾಲದ ಪರಿಗಣನೆ ಎಂದರೆ ಅದರಲ್ಲಿ ವಿಂಗಡಣೆಯೇ ಇರುವುದಿಲ್ಲವಲ್ಲ! ಎಲ್ಲ ಶತಮಾನದ ಮಹಾ ಪುರುಷರೊಂದಿಗೆ ಆಯಾ ಕಾಲದ ಪ್ರಾಜ್ಞರು, ಸಂತರು ಸಂಭಾಷಿಸುತ್ತಲೇ ಬಂದಿದ್ದಾರೆ. ಕುಮಾರವ್ಯಾಸ, ವ್ಯಾಸಮಹರ್ಷಿಯನ್ನು ತನ್ನ ತಂದೆ ಎಂತಲೇ ಹೇಳಿಕೊಂಡಿದ್ದಾನಲ್ಲ!

ಯಾವ ಘನವಾದುದೂ ಕಳೆದುಹೋಗುವಂಥದ್ದಲ್ಲ, ಅದು ಎಲ್ಲ ಕಾಲಕ್ಕೂ ನಮ್ಮೆದುರು ಇದ್ದೇ ಇರುವಂಥದ್ದು. ಅದರೊಡನೆ ಚರ್ಚೆಗೆ ತೊಡಗದೇ ಹೋದರೆ ಮಾನವಶಾಸ್ತ್ರ,ಇತಿಹಾಸ, ಸಮಾಜಶಾಸ್ತ್ರ ಇವು ಅರ್ಥವಾಗುವುದು ಹೇಗೆ? ಕಾಲ್ಪನಿಕತೆಯಲ್ಲೂ, ಪುರಾಣ ಸಂಗತಿಗಳಲ್ಲೂ, ಪವಾಡಗಳಲ್ಲೂ ಸತ್ಯದ ಬೀಜ ಅಡಗಿಯೇ ಇರುತ್ತದೆ. ಈ ಕ್ರಮದಲ್ಲಿ ಮಂಟೇಸ್ವಾಮಿ ಕಾವ್ಯ 12ನೇ ಶತಮಾನದ ಶರಣರೊಡನೆ 20ನೇ ಶತಮಾನದ ಅಂಬೇಡ್ಕರ್ ಅವರನ್ನೂ ನೆನಪು ಮಾಡಿಕೊಳ್ಳುತ್ತದೆ. ಜನಪದವೆಂಬುದು ಯಾವಾಗಲೂ ತೆರೆದ ಪಠ್ಯ. 20 ಗಂಟೆಗಳ ಇಂಥದೊಂದು ದೀರ್ಘ ನಾಟಕೀಯ ಕಾವ್ಯವನ್ನು ಅದರ ದೃಶ್ಯ-ಶ್ರವ್ಯ ರೂಪದಲ್ಲಿ ಸಂಗ್ರಹಿಸಲಾಗಿದೆ. ಈ ಕಾವ್ಯ ಹಾಡುತ್ತ ಬದುಕಿ ಬಂದ ನೀಲಗಾರರ ಸುಖ ದುಃಖ ಸಂಗತಿಗಳ ಜೀವನ ಕಥನಗಳನ್ನೂ 'ನಾವು ಕೂಗುವಾ ಕೂಗು' ಎಂಬ ಶೀರ್ಷಿಕೆಯಲ್ಲಿ ಸಂಗ್ರಹಿಸಲಾಯಿತು. ಇದರಲ್ಲಿ ಪ್ರಸಿದ್ಧ ಗಾಯಕ ಮಳವಳ್ಳಿ ಮಹದೇವಸ್ವಾಮಿಯವರ ಜೀವನ ಕಥನವೂ ಸೇರಿದೆ. 'ಧರೆಗೆ ದೊಡ್ಡವರ ಏಳು ಪಠ್ಯಗಳ' ಕುರಿತಾದ ವಿಶ್ಲೇಷಣಾ ಕೃತಿಯನ್ನೂ ಸಿದ್ಧಗೊಳಿಸಲಾಯಿತು. ಮಂಟೇಸ್ವಾಮಿಯ ನೆಲೆಗಳ 9 ಸುಂದರ ಚಿತ್ರಪಟಗಳೊಂದಿಗೆ, ಕಾವ್ಯದ ವಿಶ್ವಾತ್ಮಕ ಪ್ರಾರ್ಥನಾ ಪದ್ಯವನ್ನೂ ಶಿಲಾಫಲಕದಲ್ಲಿ ಕೆತ್ತಿಸಿ ಇಡಲಾಯಿತು. ಆದರೆ ಪೂರ್ಣ ಪ್ರಮಾಣದಲ್ಲಿ ಕೃತಿಗಳು ಪ್ರಕಟವಾಗದೆ 2 ವರ್ಷಗಳಿಂದ ಈ ಸಂಬಂಧದ ಚಟುವಟಿಕೆಗಳಿಗೆ ಇನ್ನಿತರ ತಾಂತ್ರಿಕ ಕಾರಣಗಳಿಂದ ಮಂಗಳ ಹಾಡಲಾಗಿದೆ. ಪೀಠಕ್ಕೆ ಹೊಸಬರು ನೇಮಕಗೊಂಡಿಲ್ಲ. ಇದರ ಕಾರ್ಯಚಟುವಟಿಕೆಗಳಿಗೆ ಮಳವಳ್ಳಿ ಆದಿ ಹೊನ್ನಾಯಕನಹಳ್ಳಿ ಮಂಟೇಸ್ವಾಮಿ ಮಠದ ಹಿರಿಯರು ಸಹಕರಿಸಲು ಸಿದ್ಧರಿದ್ದಾರೆ. ಇದನ್ನು ಸ್ವೀಕರಿಸುವವರು ಯಾರು?

ಸಂತೋಷದ ಸಂಗತಿ ಎಂದರೆ ಗ್ರಾಮಗಳಲ್ಲಿ ಈ ಹೊತ್ತಿಗೂ ಜನ ತಾವು ಇಷ್ಟಪಡುವ ಗಾಯಕರನ್ನು ಕರೆಸಿ ತಮಗೆ ಬೇಕಾದ ಕಾವ್ಯ ಭಾಗವನ್ನು ಕೇಳುತ್ತ ಬರುತ್ತಿರುವಲ್ಲಿಯೇ, ಶ್ರೀರಂಗಪಟ್ಟಣದ ನಿರ್ದಿಗಂತದ ಕಲಾವಿದೆ ಸನ್ನುತ ಶಾಲೋಮ್ 20 ಗಂಟೆಗಳ ಸಂಗ್ರಹದ ಮೊದಲ ಭಾಗ ಕಲ್ಯಾಣ ಪಟ್ಟಣದ ಸಾಲನ್ನು ಚಾರು ಸಂಸ್ಥೆಯ ವತಿಯಿಂದ ಪೂರ್ಣ ಕಲಿತು ಮೈಸೂರಿನಲ್ಲಿ ಪ್ರದರ್ಶನ ನೀಡುತ್ತಿರುವುದು; ಕೇಳುಗರ ಮುಂದೆ ಪರಂಜ್ಯೋತಿ ಬೆಳಕನ್ನು ಸೂಸಿಬಿಟ್ಟಂತಾಗಿದೆ. ಪ್ರವೇಶ ದರ ಕೊಟ್ಟು ಮಂಟೇಸ್ವಾಮಿಯ ಈ ಕಾವ್ಯ ಪ್ರಯೋಗವನ್ನು ಕೇಳಿಸಿಕೊಳ್ಳುತ್ತಿದ್ದಾರೆ. ಕಥನದ ಮಂಗಳ ಪದ 'ನಾವು ಕೂಗುವಾ ಕೂಗು ನಿಮ್ಮ ಪಾದಕ್ಕರುವಾಗಲಪ್ಪಾ' ಎಂಬ ವಾಕ್ಯವನ್ನು 'ನಾವು ಹಾಡುವಾ ಹಾಡು ನಿಮ್ಮ ಪಾದಕ್ಕರುವಾಗಲಪ್ಪಾ' ಎಂದು ಹಾಡುವಲ್ಲಿ ತಲೆದೂಗುತ್ತಿದ್ದಾರೆ. ಹಳೆ ಬೇರಿನಿಂದ ಹೊಸ ಚಿಗುರು ಪಲ್ಲವಿಸುತ್ತಿದೆ.

ಮೊದಲ ಓದು


ಅಂದಿನ ಸಾಮಾಜಿಕ ಸ್ಥಿತಿಗತಿಯ ನೋಟ

ಕೃತಿಯ ಶೀರ್ಷಿಕೆಯೇ ಹೇಳುವಂತೆ, ಮೇಳ ಕಟ್ಟಿ ತಿರುಗಾಡುವ ಕಷ್ಟಗಳು, ನಷ್ಟಗಳು, ನೋವು, ನಲಿವುಗಳೆಲ್ಲವೂ ಸಂತೆಗುಳಿ ನಾರಾಯಣ ಭಟ್ಟರ ಆತ್ಮಕಥನದಲ್ಲಿ ಬಿತ್ತರಗೊಂಡಿದೆ.

ಇದೊಂದು ಜನಸಾಮಾನ್ಯನ ಆತ್ಮಕಥನವೆಂದರೂ ತಪ್ಪಾಗದು. ಯಾಕೆಂದರೆ ಇದರಲ್ಲಿ ಲೇಖಕ ಕೆರೆಮನೆ ಶಿವಾನಂದ ಹೆಗಡೆಯವರು, ಸಂತೆಗುಳಿ ನಾರಾಯಣ ಭಟ್ಟರ ಯಕ್ಷಗಾನ ಆಸಕ್ತಿಯ ಮೇಲಷ್ಟೇ ಬೆಳಕು ಚೆಲ್ಲದೆ, ಆ ಕಾಲದ ಸಮುದಾಯ ಬದುಕುತ್ತಿದ್ದ ರೀತಿ, ದಾಟಿ ಬಂದ ಸಂಕಷ್ಟಗಳೆಲ್ಲ ಅಭಿವ್ಯಕ್ತವಾಗಿ, ಇದೊಂದು ಜೀವನಶೈಲಿಯ ಸ್ಥಿತ್ಯಂತರವನ್ನು ವಿವರಿಸುವ ಕೃತಿಯಾಗಿಯೂ ಗಮನ ಸೆಳೆಯುತ್ತದೆ. 1940-50ರ ದಶಕದಲ್ಲಿ ಹೊನ್ನಾವರ ತಾಲ್ಲೂಕಿನ ಸಾಮಾಜಿಕ ಸ್ಥಿತಿಗತಿ ಇಲ್ಲಿ ಚಿತ್ರಣವಾಗಿದೆ. ಹೀಗಾಗಿ ಯಕ್ಷಗಾನಕ್ಕೆ ಸಂಬಂಧಪಡದ ಓದುಗನಿಗೂ ಇಷ್ಟವಾಗಿ, ಆ ಕಾಲದಲ್ಲಿ ರಾಜಿ ಪಂಚಾಯತಿಕೆ ವ್ಯವಸ್ಥೆ, ಮದುವೆ-ಮುಂಜಿ ನಡೆಯುತ್ತಿದ್ದ ಬಗೆ, ಕೃಷಿ ಕಾಯಕ, ಸಂಪರ್ಕ-ಸಂವಹನದ ನಿಧಾನಗತಿಯ ಸುಧಾರಣೆ - ಇವೆಲ್ಲವೂ ಕುತೂಹಲದಿಂದ ಓದಿಸಿಕೊಂಡು ಹೋಗುತ್ತದೆ. ಇದರ ಜೊತೆಗೆ, 1970ರ ದಶಕದಲ್ಲಿ ನಾರಾಯಣ ಭಟ್ಟರು ಸಂಘಟಿಸಿದ ಸಂಯುಕ್ತ ಮೇಳದ ಅಧ್ಯಾಯ ಓದಿದರೆ, ಆ ಕಾಲದ ಯಕ್ಷಗಾನ ರಂಗಭೂಮಿಯ ಇತಿಹಾಸದ ಮೇಲೂ ಬೆಳಕು ಚೆಲ್ಲುತ್ತದೆ. ಅದೇ ರೀತಿ, ಉತ್ತರ ಕನ್ನಡ ಜಿಲ್ಲೆಯಲ್ಲಿ ಅದೆಷ್ಟೋ ಕಲಾವಿದರು ಪ್ರಸಿದ್ಧರಾಗಿದ್ದರೂ, ಅಲ್ಲಿ ಪೂರ್ಣಪ್ರಮಾಣದ ವ್ಯವಸಾಯಿ ಮೇಳವೊಂದು ಹುಟ್ಟಿ ಉಳಿದು ಬೆಳೆದು ಬಂದುದಿಲ್ಲ ಎಂಬ ಅಂಶವೂ ಕುತೂಹಲ ಮೂಡಿಸುತ್ತದೆ.

ಯಕ್ಷಗಾನ ಮೇಳ ಕಟ್ಟಿ ಸಾಕಷ್ಟು ನೋವುಂಡೂ ನಾರಾಯಣ ಭಟ್ಟರು ಆರೋಗ್ಯವಂತರಾಗಿದ್ದುದು ಹೇಗೆ ಎಂಬುದಕ್ಕೆ ಅಧ್ಯಾಯವೊಂದರಲ್ಲಿ ಉತ್ತರ ದೊರೆಯುತ್ತದೆ. ಜೊತೆಗೆ, ಬಂದದ್ದನ್ನು ಬಂದಂತೆ ಸ್ವೀಕರಿಸುವ ಗುಣವಿರಬೇಕೆಂಬ ತತ್ವಜ್ಞಾನದ ದರ್ಶನದ ಅರಿವೂ ಆಗುತ್ತದೆ. ನಿರೂಪಕ, ಕಲಾವಿದ ಶಿವಾನಂದ ಹೆಗಡೆಯವರು 90 ಹರೆಯದ ನಾರಾಯಣ ಭಟ್ಟರನ್ನು ಮಾತನಾಡಿಸಿ, ಅವರ ಬಾಯಿಯಿಂದ ಹಳೆಯ ನೆನಪುಗಳನ್ನೆಲ್ಲ ಕೆದಕಿ ಕೆದಕಿ, ಅವರ ಪಾಲಿಗೆ ಯಕ್ಷಗಾನ ಮತ್ತು ಸ್ವಂತ ಬದುಕಿನ ಅವಿನಾಭಾವ ಸಂಬಂಧವನ್ನು ತೆರೆದಿಟ್ಟು, ಈ ಅತ್ಯಮೂಲ್ಯವಾದ, ಯಕ್ಷಗಾನದ ಒಂದು ಕವಲಿನ ಇತಿಹಾಸವನ್ನೂ ಸಾರಬಲ್ಲಂತಹ ಕೃತಿಯನ್ನು ಕಟ್ಟಿಕೊಟ್ಟಿದ್ದಾರೆ.

ಪೇಳುವೆನೀ ಕಥಾಮೃತವ ಎಂಬಲ್ಲಿಂದ ತೊಡಗಿ ಬಾಳ ಮುಸ್ಸಂಜೆವರೆಗಿನ 12 ಅಧ್ಯಾಯಗಳಲ್ಲಿ ಮೂಡಿಬಂದಿರುವ ಆಟದ ಮೇಳ ಕೃತಿಯು ಯಕ್ಷಗಾನದ ಆಸಕ್ತರಿಗೆ ಪ್ರೇರಣಾದಾಯಿ ಕೈದೀವಿಗೆಯೂ ಆಗಬಹುದು.



ಪು: 166
₹220

ಆಟದ ಮೇಳ
ನಿರೂಪಣೆ: ಕೆರೆಮನೆ ಶಿವಾನಂದ ಹೆಗಡೆ
ಪ್ರ: ಯಾಜಿ ಪ್ರಕಾಶನ
ಸಂ: 9448722800

ಸಾದರ ಸ್ವೀಕಾರ

ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in

ಕಥೆ

ಸುರಹೊನ್ನೆ ಅರವಿಂದ ಅವರ **ಕಿಟಕಿ**

ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/short-story

ಕವನ


ವಿಶ್ವನಾಥ ಎನ್ ನೇರಳಕಟ್ಟೆ ಅವರ **ಮಳೆ ಸುರಿಯಲಿ ಒಮ್ಮೆ**

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/poetry

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ



ಡಶ್ಗ ಚಕ್ಕು ಕೇಶ್ರಶ್ಶು ಕಥೆಯ — ಗಿಡದ ಜೊತೆ ಬೆಳೆದ ಕೊಡೆ

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು





ಗುಂಡ ನರ್ಸರಿಯಿಂದ ಹೂಕುಂಡವೊಂದನ್ನು ತಂದ. ಮಳೆಗಾಲವಾದ ಕಾರಣ ಮಳೆ ಜೋರಾಗಿತ್ತು. ಹೀಗಾಗಿ ಗಿಡಕ್ಕೆ ಹಾನಿಯಾಗಬಾರದೆಂದು ಕೋಲೊಂದನ್ನು ಊರಿ ಅದಕ್ಕೆ ಕೊಡೆ ಕಟ್ಟಿದ. ದಿನ ಉರುಳಿದಂತೆ ಗಿಡ ಎತ್ತರೆತ್ತರಕ್ಕೆ ಬೆಳೆಯಿತು. ಗಿಡಕ್ಕೆ ಕಟ್ಟಿದ್ದ ಕೊಡೆಯೂ ಬಾನೆತ್ತರಕ್ಕೆ ಏರಿತು.

ಕೊಂಚತಂತ್ರ

ಮೋ ENGLISH ನ

ಇಲ್ಲಿ ಕೊಟ್ಟಿರುವ ಒಂದು ಇಂಗ್ಲಿಷ್ ವಾಕ್ಯ ಇಂಗ್ಲಿಷ್ ಭಾಷೆಯ Parts of speech ತಿಳಿಸುತ್ತದೆ.

OH! ENGLISH AND GRAMMAR MADE VERY SIMPLE FOR YOU.
OH-Interjection
ENGLISH, GRAMMAR: Noun
AND: Conjunction
MADE: Verb
VERY: Adverb
SIMPLE: Adjective
FOR: Preposition
YOU: Pronoun

ಪ್ರಾಸ ಪದ ಬಂಧ

ಇಲ್ಲಿ ಕೊಟ್ಟಿರುವ ಅಕ್ಷರ ಪಟ್ಟಿಯಿಂದ ಒಂದು ಸೂಕ್ತವಾದ ಅಕ್ಷರಗಳನ್ನು ಆಯ್ಕೆ ಮಾಡಿಕೊಂಡು ಕೆಳಗೆ ಕೊಟ್ಟಿರುವ ಜೋಡಿ ಅಕ್ಷರಗಳಿಗೆ ತುಂಬಿ ಪ್ರಾಸಪದ ರಚಿಸಿ.

ಅಕ್ಷರ ಪಟ್ಟಿ			
ಸು	ಹೋ	ಕಂ	ತ
ಮೂ	ಅ	ಕೊ	ಪ
ಚ	ಕಂ	ಸ	ಕುಂ

2

	ವ	ತಿ
	ವ	ತಿ

1

	ರಂ	ಗ
	ರಂ	ಗ

3

	ಬ	ಳಿ
	ಬ	ಳಿ

4

	ಬ	ಳ
	ಬ	ಳ

5

	ಡ	ಲ
	ಡ	ಲ

6

	ಣ	ತಿ
	ಣ	ತಿ


ಜಾಣಪದ ಆಟ

ತಿರುಚುಳಿ ಮುರುಚುಳಿ ಪದ ಪತ್ತೆ ಮಾಡಿ

ಇಲ್ಲಿ ಕೊಟ್ಟಿರುವ ಸುಳಿವು ಆಧರಿಸಿ ತಿರುಚುಳಿ ಮುರುಚುಳಿ ಪದ ಪತ್ತೆ ಮಾಡಿ

1				ಒಂದು ಜಿಲ್ಲೆ
2				ಕಣ್ಣು
3				ವ್ಯಾಕರಣದಲ್ಲಿ ಬರುವುದು
4				ಹೋಟೆಲ್ಲಿನ ಒಂದು ತಿಂಡಿ
5				ಬಂಗಾರ
6				ಜ್ಯೋತಿಷ್ಯದಲ್ಲಿನ ಒಂದು ರಾಶಿ
7				ಚೇಷ್ಟೆ
8				ದೋಷ
9				ನೃತ್ಯ
10				ವಂದನೆ

ಗಣಿತದಲ್ಲಿ ಗರ್ದಿ ಗಮ್ಮತ್ತು



ಈಜಿ ಮೆಥಡ್

ಎರಡು ಅಂಕೆಗಳುಳ್ಳ ಯಾವುದೇ ಸಂಖ್ಯೆ ಬಿಡಿ ಸ್ಥಾನದಲ್ಲಿ 5 ಬಂದಾಗ ಆ ಸಂಖ್ಯೆಯ ವರ್ಗವನ್ನು ಕಂಡುಹಿಡಿಯುವುದು ತುಂಬಾ ಸುಲಭ.

ಉದಾ: $(35)^2$= ಇಲ್ಲಿ 35ರ ವರ್ಗ ಕಂಡುಹಿಡಿಯಲು ದಶಸ್ಥಾನದ ಅಂಕಿ 3ಕ್ಕೆ ಅದರ ನಂತರದ ಕ್ರಮಾಗತ ಸಂಖ್ಯೆ 4ರಿಂದ ಗುಣಿಸಬೇಕು. ಅಂದರೆ ಗುಣಲಬ್ಧ 3x4=12. ಇದರ ಬಲಕ್ಕೆ 25 ಸೇರಿಸಿದರಾಯಿತು. ಅಂದರೆ, 1225 ಇದೇ 35ರ ವರ್ಗ. ಇನ್ನೊಂದು ಉದಾ: $(85)^2$=8x9=72. ಇದಕ್ಕೆ 25 ಸೇರಿಸಿದರೆ =7225 ಆಗುತ್ತದೆ. ನೀವೂ ಇಂತಹ ಉದಾಹರಣೆಯನ್ನು ತೆಗೆದುಕೊಂಡು ಮಾಡಿ ನೋಡಿರಿ.

ಪದಶೋಧ

ಇಲ್ಲಿರುವ ಪದಗಳಿಂದ ಒಂದೊಂದು ಅಕ್ಷರ ಆಯ್ಕೆ ಮಾಡಿಕೊಂಡು ಓರ್ವ ಹಿನ್ನೆಲೆ ಗಾಯಕಿಯ ಹೆಸರು ಹುಡುಕಿ

1.ಶಿವಾಲಯ
2.ಮಣಿಕಂಠ
3.ರಾಜಸ್ತಾನ
4.ನ್ಯಾಯವಾದಿ
5.ಕರಾವಳಿ
6.ಸೋಮವಾರ

ಉತ್ತರ :



ಚಿಕ್ಕ ಲೆಕ್ಕ

ಇಲ್ಲಿ ಕೊಟ್ಟಿರುವ ಗುಣಾಕಾರ ಮಾಡಿನೋಡು. ಉತ್ತರದಲ್ಲಿ ಇಂದಿನ ದಿನಾಂಕ ಕಾಣುವಿರಿ.

21336X9
=

ಕಳೆದ ಸಂಚಿಕೆಯ ಸರಿ ಉತ್ತರಗಳು

ಪ್ರಾಸಪದಬಂಧ: 1.ರಗಳೆ-ಬೊಗಳೆ 2.ಹಯನ-ನಯನ 3.ಕೊರಗು-ಸೊರಗು 4.ಕೊಳಗ-ಬಳಗ 5.ವಿಫಲ-ಸಫಲ 6.ಮಡದಿ-ಹುಡದಿ

ಜಾಣಪದ ಆಟ: 1.ಕಾಣಿಕೆ 2.ಕೋರಿಕೆ 3.ಕಿಟಕಿ 4.ಕುಣಿಕೆ 5.ಕಣಕ 6.ಕೆಣಕು 7.ಕೊಳಕು 8.ಕೆಡುಕು 9.ಕಾರ್ತಿಕ 10.ಕರಿಕೆ

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in


ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು




ನಂದಿತಾ ಎಸ್.ಎಂ.
ಬೆಂಗಳೂರು



ನಿಹಾರಿಕ ಪಿ.
ದಾವಣಗೆರೆ



ಶೈನಿ
ರಾಯಚೂರು



ತರುಣ್ ಎನ್.ಎಚ್.
ಬಿಂಗಾಪುರ




ವಿಜಯ್ ಶ್ರೀಪತಿ
ಗಬ್ಬೂರು



ಸ್ವೇಚಿತ್ ಜಿ.ಎಲ್.
ಚಿಕ್ಕಮಗಳೂರು

ಕ್ಯಾಸ್ಪಿಯನ್ ಕಿನಾರೆ ಕೆಸರು-ಬೆಂಕಿ-ತೈಲ



ಕೆಸರಿನ ಬುಗ್ಗೆಗಳು

ಅಝುರ್‌ಬೈಜಾನ್ ಕೆಸರಬುಗ್ಗೆಗಳಿಗೆ ಹೆಸರುವಾಸಿ. ಇವು ಶಿಲಾಯುಗದ ಬಂಡೆಚಿತ್ರಗಳಿರುವ ಗೊಬುಸ್ತಾನ್ ರಾಷ್ಟ್ರೀಯ ಉದ್ಯಾನದಲ್ಲಿವೆ. ಅಲ್ಲಿಗೆ ತಲುಪುವ ಹಾದಿ ಕಡುಕಷ್ಟದ್ದು. ಗಮ್ಯವನ್ನು ತಲುಪಿದ ಮೇಲಿನ ಚಿತ್ರಣಗಳು ಅದ್ಭುತ ಅನುಭವವನ್ನು ನೀಡುತ್ತವೆ.

ರಹಮತ್ ತರೀಕೆರೆ

ವಿಮಾನ ಅಝುರ್‌ಬೈಜಾನಿನ ಬಾಕು ಶಹರಿನ ಮೇಲಿಳಿವಾಗ ನಡುರಾತ್ರಿ. ನಗರದ ದೀಪಗಳು ನೀರಹಾಳೆಯಂತಿದ್ದ ಕ್ಯಾಸ್ಪಿಯನ್ ಕಡಲಲ್ಲಿ ಬೆಳಕಿನ ಕಂಬಗಳಂತೆ ಚಾಚಿಕೊಂಡಿದ್ದವು. ಇದೊಂದು ನೆಲಬಂಧಿತ ಕಡಲು. ರಷ್ಯಾ ಇರಾನ್ ಅಝುರ್‌ಬೈಜಾನ್ ತುರ್ಕಮೆನಿಸ್ತಾನ್‌ಗಳು ಇದನ್ನು ಸುತ್ತುವರಿದಿವೆ. ಬಾಕುವಿನಲ್ಲಿದ್ದಷ್ಟೂ ದಿನ, ಈ ಕಡಲನ್ನು ಹಲವು ದಿಕ್ಕುಗಳಿಂದ ನೋಡುವ ಅವಕಾಶ ಒದಗಿತು. ನಿಸರ್ಗದ ಚೆಲುವಿನ ಆಗರವಾಗಿರುವ ಇದು, ಇಲ್ಲಿನ ಧರ್ಮ ಸಂಸ್ಕೃತಿ ರಾಜಕಾರಣ ವ್ಯಾಪಾರಗಳನ್ನು ರೂಪಿಸಿದ ಶಕ್ತಿಕೇಂದ್ರವಾಗಿದೆ. ಈ ಕೇಂದ್ರದ ಪಾತ್ರಧಾರಿಗಳು, ಕಡಲ ಸೆರಗಿನಲ್ಲಿ ಸಿಗುವ ಕೆಸರು, ಅನಿಲ, ತೈಲಗಳು.




ಪಂಕದಲ್ಲಿ ಮಿಂದೆದ್ದ ಅಝುರ್ ಬೈಜಾನಿ ತರುಣ

ಅಝುರ್‌ಬೈಜಾನ್ ಕೆಸರಬುಗ್ಗೆಗಳಿಗೆ ಖ್ಯಾತ. ಇವು ಶಿಲಾಯುಗದ ಬಂಡೆಚಿತ್ರಗಳಿರುವ ಗೊಬುಸ್ತಾನ್ ರಾಷ್ಟ್ರೀಯ ಉದ್ಯಾನದಲ್ಲಿವೆ. ಇಲ್ಲಿಗೆ ಮುಟ್ಟುವ ಕೊನೆಯ 10 ಕಿ.ಮೀ ಹಾದಿ ಮಾತ್ರ ಕರಕಷ್ಟ. ಕುರುಚಲು ಗಿಡದ ಮರುಭೂಮಿಯಲ್ಲಿ ಕಾವಲು ನಿಂತ ಬೋಳುಬೆಟ್ಟಗಳ ನಡುವೆ ಗುಂಡಿಗೊಟರುಗಳಲ್ಲಿ ಹಾಯುವ ಕಚ್ಚಾರಸ್ತೆ. ಅದನ್ನು ದಾಟಿಸಲೆಂದೇ ಮೀಸಲಾದ ಲಟಾರಿ ಕಾರುಗಳು.

ನಮ್ಮ ಕಾರು ಮರುಭೂಮಿಯಲ್ಲಿ, ತೈಲಬಾವಿ ಕೊರೆಯಲು ಗುರುತು ಮಾಡಿದ ಕಂಬಗಳ ನಡುವೆ, ಯಾನ ಹೊರಟಿತು. ಆದರೆ ನಮ್ಮ ಮುಂದಿದ್ದ ಕಾರು ಸುತ್ತಲಿನ ಏನೂ ಕಾಣದಂತೆ ಧೂಳಿನ ಮೋಡ ಸೃಷ್ಟಿಸುತ್ತಿತ್ತು. ರಷ್ಯನ್ ಮತ್ತು ಅಝುರಿ ಬಿಟ್ಟರೆ ಬೇರೆ ಭಾಷೆ ಬಾರದ ಚಾಲಕನಿಗೆ, ಕೈಸನ್ನೆಯಿಂದ 'ಅದನ್ನು ಹಿಂದಿಕ್ಕು' ಎಂದೆ. ನನ್ನ ಸೂಚನೆ ಕಾರ್ಯಗತಗೊಂಡ ರೀತಿ ಭೀಕರವಾಗಿತ್ತು. ಆತ ಸರಕ್ಕನೆ ಕಚ್ಚಾರಸ್ತೆಯಿಂದ ಕಾಡುರಸ್ತೆಗೆ ಇಳಿಸಿದವನೇ, ರೇಸ್‌ಕಾರಿನಂತೆ ಓಡಿಸತೊಡಗಿದ. ಅಂತಿಮ ದಿನಗಳು ಸಮೀಪಿಸಿದವೇ, ಯಾಕಾದರೂ ಹೇಳಿದೆನೊ, ಕಾರಿನ ಬಿಡಿಭಾಗಗಳು ಎಲ್ಲಿ ಕಳಚಿಬೀಳುವವೊ ಎಂದು ಕಂಗಾಲಾಯಿತು. ಲಟಾರಿ ಕಾರಿನ ಮಹಿಮೆ ಮನವರಿಕೆಯಾಯಿತು. ಅದಕ್ಕೆ ಹೆಚ್ಚು ಅಶ್ವಶಕ್ತಿಯಿರುವ ಇಂಜಿನ್ ಅಳವಡಿಸಿರಬೇಕು. ನಾನು ಎದೆಯ ಬಳಿ ಕೈಯಿಟ್ಟು, ಪುಕುಪುಕು ಎನ್ನುತಿದೆ ಎಂದು ಸನ್ನೆಮಾಡುತ್ತ, ಸ್ಲೊಸ್ಲೊ ಎಂದು ಕೂಗಿದೆ. ಹಿಂದೆ ಕೂತಿದ್ದ ಗೆಳೆಯರಾದ ವಿ.ಎಸ್.ಶ್ರೀಧರ್-ಸರ್ವಮಂಗಳಾ ಕೂಡ ವೇಗ ನಿಯಂತ್ರಿಸಿ ಎಂದರು.

ಅಷ್ಟುಹೊತ್ತಿಗೆ ಕಾರು ಮರುಭೂಮಿಯನ್ನು ದಾಟಿ, ಹುಚ್ಚು ಹಿಡಿದವರಂತೆ ಎಪ್ಪತ್ತು ಡಿಗ್ರಿ ಇಳಿಜಾರಿನ ಬೆಟ್ಟವೊಂದನ್ನು ಸರಸರ ಏರತೊಡಗಿತು. ಕಣಿವೆಯಿಂದ ಜಿಗಿಯುತ್ತ ಬೆಟ್ಟವನ್ನೇರುವ ಕಡವೆಯಂತೆ ಏರಿ, ಸಪಾಟಾದ ನೆತ್ತಿಗೆ ಹೋಗಿ ನಿಂತಿತು. ಬೆಟ್ಟದ ನೆತ್ತಿಯಿಂದ ಬಿಸಿಲಿಗೆ ಕಾಯುತ್ತಿರುವ ಕ್ಯಾಸ್ಪಿಯನ್ ಕಡಲು ಥಳತಳಿಸುತ್ತ ಕಾಣುತ್ತಿತ್ತು. ಅದರೊಳಗೆ ಕೊರೆದ ತೈಲಬಾವಿಯ ಚಪ್ಪರ, ಲಂಗರು ಹಾಕಿದ ಹಡಗಿನಂತೆ ತೋರಿತು. ಬೆಟ್ಟದ ಮೇಲಿದ್ದ ವಿಶಾಲ ಪ್ರದೇಶದಲ್ಲಿ ನೂರಾರು ಕೆಸರುಕಾರುವ ದಿನ್ನೆಗಳಿದ್ದವು. ಬೃಹದಾಕಾರದ ಹುತ್ತಗಳಂತಿದ್ದ ಈ ದಿನ್ನೆಗಳ ಮುಖದಿಂದ, ನೆಲದ ಹುಣ್ಣು ಒಡೆದಂತೆ ಕೆಸರು ಹೊರಗೆ ಹರಿಯುತ್ತಿತ್ತು. ಅದು ಭೂಗರ್ಭದೊಳಗಿಂದ ಗೊರ್‌ಗೊಟರ್ ಶಬ್ದಮಾಡುತ್ತ, ಆಲೆಮನೆಯ ಕೊಪ್ಪರಿಗೆಯ ಕಬ್ಬಿನಹಾಲಿನಂತೆ ಕುದಿಯುತ್ತ, ಗೋಳಗುಮ್ಮಟದ ಗುಳ್ಳೆ ನಿರ್ಮಿಸುತ್ತ ಹೊಯ್ದಾಡುತ್ತಿತ್ತು. ಈ ಕೆಸರಾಟ ಎಷ್ಟು ಮಿಲಿಯನ್ ವರ್ಷಗಳಿಂದ ನಡೆಯುತ್ತಿದೆಯೊ? ಮುಟ್ಟಿನೋಡಿದೆ. ಎರೆಮಣ್ಣಿನ ಪಾಯಸದಂತಿದ್ದ ಕೆಸರು ತಣ್ಣಗಿತ್ತು. ಒಳಲೆಯಂತಿದ್ದ ಅದರ ಬಾಯಿಯ ಸೋಟೆಯಿಂದ ಹರಿವ ಕೆಸರನ್ನು ಪ್ರವಾಸಿಗರು ಬಾಟಲಿಗಳಲ್ಲಿ ತುಂಬಿಕೊಳ್ಳುತ್ತಿದ್ದರು. ಸಣ್ಣಬಾವಿಗಳಂತಹ ಕೆಸರಚಿಲುಮೆಗಳಲ್ಲಿ ಕೆಲವರು ಮುಳುಗೇಳುತ್ತಿದ್ದರು. ಹಾಗೆ ಪಂಕಲೇಪಿತನಾಗಿ ಕಂಬಳದ ಕೋಣನಾಗಿದ್ದ ಅಝುರ್‌ಬೈಜಾನಿ ತರುಣನೊಬ್ಬ, ಸನ್ನೆಯಿಂದ ನಮ್ಮಲ್ಲಿ ಸಿಗರೇಟು ಕೇಳಿದನು. ಕೆಸರಲೇಪನ ಚರ್ಮಕಾಂತಿಯನ್ನು ಹೆಚ್ಚಿಸುವುದಂತೆ. ಕೆಂಪಗೆ ಹೊಳೆವ ಅಝುರಬೈಜಾನಿಗರಿಗೆ ಇದರ ಅಗತ್ಯವಿದ್ದಂತೆ ತೋರಲಿಲ್ಲ.



ಆತಿಶಗಾಹ್ ಅಗ್ನಿದೇಗುಲ

ಅಝುರ್‌ಬೈಜಾನಿನಲ್ಲಿ ಐನೂರಕ್ಕೂ ಹೆಚ್ಚು ಕೆಸರ ಚಿಲುಮೆಗಳಿವೆ. ಇವು ತೈಲ ಮತ್ತು ಅನಿಲ ನಿಕ್ಷೇಪಗಳ ಬಂಧುಗಳು. ಕೆಲವು ಬುಗ್ಗೆಗಳು ಕ್ಯಾಸ್ಪಿಯನ್ ಕಡಲೊಳಗಿವೆ. ಅವುಗಳಲ್ಲಿ ಒಂದು ಬಾಂಬಿನಂತೆ ಸಿಡಿದು ಬಾನೆತ್ತರಕ್ಕೆ ಜ್ವಾಲೆಯನ್ನು ಹೊಮ್ಮಿಸಿದ್ದುಂಟು. ಈ ಬಡಬಾನಲದಿಂದ ನೀಲ ಕ್ಯಾಸ್ಪಿಯನ್ ಕಡಲು ಕಪ್ಪುರಾಡಿಯಾಗಿತ್ತು. ಕ್ಯಾಸ್ಪಿಯನ್ ತೀರದ ಇನ್ನೊಂದೆಡೆ, ಯಾನಾರ್‌ದಾಗ್ (ಉರಿವ ಬೆಟ್ಟ) ಎನ್ನುವ ಜ್ವಾಲಾಮುಖಿಯಿತ್ತು. ಅಲ್ಲಿ ಬೆಟ್ಟದ ಟೊಳ್ಳು ಭಾಗದಿಂದ ಅನಿಲ ಹೊಮ್ಮುತ್ತ ಜ್ವಾಲೆ ಹೊತ್ತಿ ಉರಿಯುತ್ತಿತ್ತು. ಜ್ವಾಲೆ ಹೊಮ್ಮುವ ಭಾಗದ ಮಣ್ಣೆಲ್ಲವೂ ಸುಟ್ಟು ಇಟ್ಟಿಗೆಯಂತೆ ಕೆಂಪೇರಿತ್ತು. ಜೋರುಗಾಳಿ ಬೀಸಿದಾಗ ಕ್ಷಣಕಾಲ ಆರುತ್ತಿದ್ದ ಜ್ವಾಲೆ, ಮತ್ತೆ ಧಗ್ಗನೆ ಪುಟಿಯುತ್ತಿತ್ತು. ನಿಸರ್ಗದ ಈ ಅದ್ಭುತ ವಿದ್ಯಮಾನಕ್ಕೆ ವಿಸ್ಮಯಗೊಂಡ ಆದಿಮ ಬುಡಕಟ್ಟು ಜನ, ಬೆಂಕಿ ಆರಾಧನೆ ಶುರು ಮಾಡಿರಬೇಕು. ಅದುವೇ ವಿಕಸನಗೊಂಡು ಜೊರಾಷ್ಟ್ರಿಯನ್ ಧರ್ಮವಾಗಿ ರೂಪುಗೊಂಡಿರಬೇಕು. 'ಯಾನಾರ್ ದಾಗ್' ಈಗಲೂ ಅಗ್ನಿಯಾರಾಧಕ ಫಾರಸಿಗಳಿಗೆ ಪವಿತ್ರ ಸ್ಥಳ. ಮುಂಬೈನ ಪಾರ್ಸಿ ದೇಗುಲದಲ್ಲಿ ಈಗಲೂ ಜ್ವಾಲೆ ಜ್ವಲಿಸುತ್ತಿರುತ್ತದೆ. ಅಗ್ನಿಪೂಜಕರಾದ ವೇದಕಾಲೀನ ಆರ್ಯರು ಯುರೇಶಿಯಾದ ಈ ಭೂಭಾಗದಿಂದಲೇ ಭಾರತಕ್ಕೆ ವಲಸೆ ಬಂದವರು ಎಂಬ ವಾದವೂ ಇದೆಯಷ್ಟೆ.

ಕ್ಯಾಸ್ಪಿಯನ್ ತಟದ ಸುರಖಾನಿ ಎಂಬಲ್ಲಿ ಜ್ವಾಲೆಕಾರುವ ಮತ್ತೊಂದು ಜಾಗವಿದೆ. ಇದನ್ನು 'ಆತಿಶ್‌ಗಾಹ್' (ಅಗ್ನಿದೇಗುಲ) ಎನ್ನಲಾಗುತ್ತದೆ. ಇದರ ಹಳೆಯ ಚಿತ್ರಪಟಗಳಲ್ಲಿ, ಅಗ್ನಿಕುಂಡದಿಂದ ಅಗ್ನಿಜ್ವಾಲೆಗಳು ಹೊಮ್ಮುತ್ತಿರುವ ಚಿತ್ರಣವಿದೆ. ಅನಿಲ-ತೈಲಗಳನ್ನು ದೊಡ್ಡಪ್ರಮಾಣದಲ್ಲಿ ತೆಗೆಯಲು ಆರಂಭಿಸಿದ ಬಳಿಕ, ಈ ಜ್ವಾಲೆಗಳು ನಿಂತುಹೋದವು. ಈಗ ಅಗ್ನಿಕುಂಡಕ್ಕೆ ಕೃತಕವಾಗಿ ಅನಿಲ ಪೂರೈಸುತ್ತ ಜ್ವಲಿಸುವಂತೆ ಮಾಡಿದೆ. ಈ ಅಗ್ನಿದೇಗುಲ ಹಿಂದೊಮ್ಮೆ, ಚೀನಾದಿಂದ ಇಟಲಿಯ ತನಕ 7000 ಸಾವಿರ ಕಿ.ಮೀ ಫಾಸಲೆಯಿದ್ದ ಸಿಲ್ಕ್ರೂಟಿಗೆ ಸೇರಿಕೊಳ್ಳುತ್ತಿದ್ದ, ಭಾರತೀಯ ವ್ಯಾಪಾರಿಗಳ ತಂಗುದಾಣವಾಗಿತ್ತು. ಇದನ್ನು ಭಾರತದ ಫಾರಸಿ ಸಿಖ್ ಹಿಂದೂ ವ್ಯಾಪಾರಿಗಳು 18ನೇ ಶತಮಾನದಲ್ಲಿ ಕಟ್ಟಿಸಿದರು. ಬ್ರಿಟಿಷ್ ವ್ಯಾಪಾರಿಗಳು, ಇಲ್ಲಿದ್ದ ಹಠಯೋಗಿಗಳ ಬಗ್ಗೆ ದಾಖಲಿಸಿದ್ದಾರೆ. ಅಗ್ನಿದೇಗುಲದ ಸುತ್ತಲೂ ಕೋಟೆಗೋಡೆಯಿದೆ. ಇದು ಸರಕು ಸಂಗ್ರಹಿಸುವ ವ್ಯಾಪಾರಿ ಕೋಠಿಯಾಗಿಯೂ ಕೆಲಸ ಮಾಡಿರುವಂತಿದೆ. ಬೌದ್ಧವಿಹಾರಗಳಲ್ಲಿ ಅಥವಾ ಸೂಫಿಗಳ ಖಾನಖಾಗಳಲ್ಲಿ ಇರುವಂತೆ, ಗುಡಿಯ ಸುತ್ತ ವರ್ತುಲಾಕಾರವಾಗಿ ಖೋಲಿಗಳಿವೆ. ಗುಹೆಯಂತಹ ಈ ಖೋಲಿಗಳಲ್ಲಿ ಭಾರತೀಯ ವ್ಯಾಪಾರಿಗಳು ಒಟ್ಟಿಗಿರುವ ಪ್ರತಿಕೃತಿಗಳಿವೆ. ಖೋಲಿಯ ಹೊರಗೋಡೆಗಳಲ್ಲಿ ದೇವನಾಗರಿ ಲಿಪಿಯಲ್ಲಿ ಸಂಸ್ಕೃತದಲ್ಲೂ ಮತ್ತು ನಶ್ತಲಿಕ್ ಲಿಪಿಯಲ್ಲಿ ಫಾರಸಿಯಲ್ಲೂ ಗುರುಮುಖಿ ಲಿಪಿಯಲ್ಲಿ ಪಂಜಾಬಿಯಲ್ಲೂ ಕೆತ್ತಿದ ಶಾಸನಗಳಿವೆ. ದೇವನಾಗರಿ ಶಾಸನಗಳಲ್ಲಿ ಗಣಪತಿ ಸ್ತುತಿಯಿದೆ. ಭಾರತದ ಫಾರಸಿಗಳು ಈಗಲೂ ಈ ಅಗ್ನಿದೇಗುಲಕ್ಕೆ ಯಾತ್ರೆ ಬರುತ್ತಾರಂತೆ.



ಆತಿಶಗಾಹದಲ್ಲಿರುವ ಅಗ್ನಿಕುಂಡ

ಕ್ಯಾಸ್ಪಿಯನ್ ಕಡಲಗರ್ಭವೂ ಅದರ ತೀರಪ್ರದೇಶಗಳೂ ಹೊಮ್ಮಿಸುತ್ತಿರುವ ಮುಖ್ಯದ್ರವ ಕಚ್ಚಾತೈಲ. ಇಲ್ಲಿನ ನೆಲಕ್ಕೆ ಎಲ್ಲಿ ರಂಧ್ರ ಕೊರೆದರೂ ಎಣ್ಣೆ ಬುಗ್ಗೆಯೊಡೆಯುತ್ತದೆ. ಬಾಕುವಿನ ಹೊರವಲಯದಲ್ಲಿ, ಏತದಿಂದ ರೈತರು ನೀರು ಮೊಗೆವಂತೆ, ರಿಗ್ಗಿಂಗ್ ಯಂತ್ರಗಳನ್ನು ಹಿತ್ತಲು ಮತ್ತು ಪಾರ್ಕುಗಳನ್ನೂ ಬಿಡದಂತೆ ಸ್ಥಾಪಿಸಲಾಗಿತ್ತು. ಇವು ಹಗಲೂ ರಾತ್ರಿ, ಮಕ್ಕಳ ಕೀಲುಕುದುರೆಯಂತೆ ತಲೆಯನ್ನು ಕೆಳಕ್ಕೂ ಮೇಲಕ್ಕೂ ತೂಗುತ್ತಿದ್ದವು. ಇಲ್ಲಿಂದ ಸಂಗ್ರಹವಾಗುವ ಕೆಸರನೀರಿನಂತಹ ಕಚ್ಚಾತೈಲವು ಪೈಪುಗಳ ಮೂಲಕ ರಿಫೈನರಿಗಳಿಗೆ ಹೋಗುತ್ತಿತ್ತು. ಜ್ವಾಲೆಯುಗುಳುವ ಕೆಸರು, ಅನಿಲ ಮತ್ತು ರಾಡಿಯಂತಹ ತೈಲ, ಅಝುರ್‌ಬೈಜಾನಿನ ಆರ್ಥಿಕತೆಯನ್ನೇ ಬದಲಿಸಿದ್ದವು.

ಬಾಕುವನ್ನು ತೊರೆದು ವಿಮಾನ ಹಾರುವಾಗ ಬಿಡುಹಗಲು. ನೀಲಾಕಾಶ. ಬಾಕುನಗರ ಚಿತ್ರ ಬರೆದಂತೆ ಕಾಣುತ್ತಿತ್ತು. ಆಗಸದಿಂದ ನೆಲದ ಮರೆಯ ನಿಧಾನಗಳಂತಿರುವ ಕೆಸರು ಜ್ವಾಲೆ ತೈಲಗಳು ಗೋಚರಿಸಲಿಲ್ಲ. ಆದರೆ ಇವನ್ನು ಹಡೆವ ತಾಯಿ ಕ್ಯಾಸ್ಪಿಯನ್ ಕಡಲು, ತನ್ನ ನೀಲಮೈ ಚಾಚಿ ಆಗಸದೊಂದಿಗೆ ಸ್ಪರ್ಧಿಸುತ್ತಿತ್ತು. ಅದರ ಕಂಪಿಸುವ ಕಿರುಅಲೆಗಳ ಮೇಲೆ ಬಿದ್ದ ಸೂರ್ಯನ ಬೆಳಕು ನಮ್ಮ ಮುಖಕ್ಕೆ ಬಡಿಯುತ್ತಿತ್ತು.

ವೀಣಾ ವರ್ಲ್ಡ್ ಪ್ರವಾಸ ಸ್ಪರ್ಧೆ

ನಿಮ್ಮ ಉತ್ತರಗಳನ್ನು ವೀಣಾ ವರ್ಲ್ಡ್ ವೆಬ್ಸೈಟ್ ನಲ್ಲಿ ಸಲ್ಲಿಸಲು, ಬರುವ ಮಂಗಳವಾರದೊಳಗೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ. ಉಚಿತ ವೀಣಾ ವರ್ಲ್ಡ್ ಟೂರ್ **"ಹೈಲೈಟ್ಸ್ ಆಫ್ ಗುಜರಾತ್"** (ಟೂರ್ ಕೋಡ್ GTSD) ಅವಕಾಶ ನಿಮ್ಮದಾಗಿಸಿಕೊಳ್ಳಿ. ಅದೃಷ್ಟಶಾಲಿ ವಿಜೇತರ ಹೆಸರನ್ನು 29ನೇ ಸೆಪ್ಟೆಂಬರ್ 2024ರಂದು ಪ್ರಕಟಗೊಳ್ಳುವ ಮುಂದಿನ ಲೇಖನದಲ್ಲಿ ಪ್ರಕಟಿಸಲಾಗುವುದು.

1. ಗ್ರೀಸ್ ದೇಶದ ಅಡುಗೆ ಪದಾರ್ಥವಾದ "ತ್ಸಟ್ ಝಿಕಿ"ಯ ಪ್ರಮುಖ ಸಾಮಗ್ರಿ ಯಾವುದು?
2. ಕೆನಡಾ ರಾಷ್ಟ್ರಧ್ವಜದ ಮೇಲೆ ಇರುವುದು ಯಾವ ಎಲೆ?
3. ಯಾವ ಕ್ರೀಡೆಯನ್ನು "ಪಿಂಗ್ ಪಾಂಗ್" ಎಂದೂ ಕರೆಯಲಾಗುತ್ತದೆ?
4. ಮನೋವಿಶ್ಲೇಷಣೆ (ಸೈಕೋಅನಾಲಿಸಿಸ್) ಎಂಬುದನ್ನು ರೂಪಿಸಲು ಬುನಾದಿ ಹಾಕಿದವರು ಯಾರು?
5. "ಮೇ ದಿ ಫೋರ್ಸ್ ಬಿ ವಿಥ್ ಯು" ಎಂಬ ಸಾಲುಗಳು ಇರುವುದು ಯಾವ ಸಿನಿಮಾದಲ್ಲಿ?
6. ಈಗಿನ ಪಾಕಿಸ್ತಾನದಲ್ಲಿರುವ ಯಾವ ಪ್ರಾಚೀನ ನಗರವು ಯೋಜಿತ ರಸ್ತೆಗಳು ಮತ್ತು ಚರಂಡಿಗಳನ್ನು ಹೊಂದಿದ್ದಿತು?
7. ಗೌದ್ ವಿನ್ಯಾಸಗೊಳಿಸಿದ ಬಾರ್ಸಿಲೋನಾದ ಪ್ರಸಿದ್ಧ ಕ್ಯಾಥಡ್ರೆಲ್ ಯಾವುದು?

ಆಗಸ್ಟ್ 4ರ ವೀಣಾ ವರ್ಲ್ಡ್ ಟ್ರಾವೆಲ್ ರಸಪ್ರಶ್ನೆ ಅದೃಷ್ಟಶಾಲಿ ವಿಜೇತರು
"ಇಂದೋರ್ ಉಜ್ಜಯಿನಿ ಮಂಡು" (ಟೂರ್ ಕೋಡ್ STUM)
ಮಂಗಳಾ ವಿವೇಕ್
ಹಿರಿಯೂರು, ಚಿತ್ರದುರ್ಗ
ಅಭಿನಂದನೆಗಳು

veenaworld.com
Toll-Free: 1800 22 7979
Email: travel@veenaworld.com

ADVERTORIAL

ಟ್ಯೂನಿಸಿಯಾ: ಆಫ್ರಿಕಾ-ಮೆಡಿಟರೇನಿಯನ್ ಸಂಗಮ ತಾಣ



ಸುನೀಲ ಪಾಟೀಲ್
Founder, CPO & CNO
Veena World
sunila@veenaworld.com

ಮೆಡೀನಾದ ರಸ್ತೆಗಳಲ್ಲಿ ಅಡ್ಡಾಡುತ್ತಿರುವಾಗ ನನಗೆ ಕಲ್ಪಿತ ಲೋಕಕ್ಕೆ ಕಾಲಿಟ್ಟಿದ್ದೇನೇನೋ ಎಂದು ಭಾಸವಾಗತೊಡಗಿತು. ಯಾವ ಅಂಗಡಿ ನೋಡಿದರೂ ಅದರ ತುಂಬೆಲ್ಲಾ ನೆಲಹಾಸುಗಳು, ರಗ್ಗುಗಳು, ದೀಪಗಳು, ಕಂಚಿನ ಪಾತ್ರೆ ಪಗಡಿಗಳು, ಪಿಂಗಾಣಿ ವಸ್ತುಗಳು, ಚರ್ಮೋತ್ಪನ್ನಗಳು, ಜನರ ಕೈಯಲ್ಲಿದ್ದ ಬ್ಯಾಗುಗಳಲ್ಲಿ, ಆಯ್ದು ಖರೀದಿಸಿದ್ದ ಅಗ್ಗದ ಬೆಲೆಯ ಪುಟಾಣಿ ಆಭರಣಗಳು ಹಾಗೂ ಇನ್ನಿತರ ಸುಂದರ ವಸ್ತುಗಳು. ನಾನು ಹೆಚ್ಚು ಕಡಿಮೆ ಪ್ರತಿಯೊಂದು ಮಳಿಗೆ ಮುಂದೆಯೂ ನಿಂತು ಅಲ್ಲಿದ್ದವುಗಳ ಮೇಲೆಲ್ಲಾ ಕಣ್ಣಾಡಿಸುತ್ತಿದ್ದೆ. ಹೀಗಾಗಿ, ಈ ದೇಶದ ನನ್ನ ಭೇಟಿಯು ಅಂದುಕೊಂಡಿದ್ದಕ್ಕಿಂತ ಹೆಚ್ಚು ದಿನ ಹಿಡಿಯುತ್ತದೆ ಎಂದು ನನಗೆ ಆಗಲೇ ಸ್ಪಷ್ಟವಾಗಿತ್ತು. ಅಂದಂತೆ, ನಾನು ಇಲ್ಲಿ ಹೇಳುತ್ತಿರುವುದು ಯುನೆಸ್ಕೋದ ವಿಶ್ವ ಪಾರಂಪರಿಕ ತಾಣಗಳಲ್ಲಿ ಒಂದಾದ ಟ್ಯೂನಿಸಿಯಾದ ರಾಜಧಾನಿ ನಗರವಾದ ಟ್ಯೂನಿಸ್‌ನ ಮೆಡೀನಾದ ಬಗ್ಗೆ. ಯಾವುದೇ ಆತುರವಿಲ್ಲದೆ ಈ ಚಿತ್ತಾಕರ್ಷಕ ನಗರವನ್ನು ನಿಧಾನವಾಗಿ ಅನ್ವೇಷಿಸಬೇಕೆಂದು ನಾನು ನಿರ್ಧರಿಸಿದ್ದೆ.

ಅಲ್ಲಿನ ಇಂತಹ ಅಂಗಡಿಗಳ ನಡುನಡುವೆ ವಿಚಿತ್ರ ಎನ್ನಿಸುವಂತೆ ಕೆಫೆಗಳು ಇವೆ. ಇಂತಹ ಕೆಫೆಗಳಲ್ಲಿ ಪ್ರವಾಸಿಗರು ಹಾಗೂ ಸ್ಥಳೀಯರು ಕುಳಿತು, ಉಲ್ಲಾಸ ಮೂಡಿಸುವ ಪುದೀನಾ ಚಹಾ ಗುಟುಕರಿಸುತ್ತಿರುತ್ತಾರೆ. ಟ್ಯೂನಿಸಿಯಾದಲ್ಲಿ ಸೇವಿಸುವ ಅತ್ಯಂತ ಸಾಮಾನ್ಯ ಚಹಾ ಎಂದರೆ ಅದು "ನಾನಾ" ಅಥವಾ ಮಿಂಟ್ ಚಹಾ ಎಂಬುದು ನನಗೆ ಅಲ್ಲಿ ಗೊತ್ತಾಯಿತು. ಗ್ರೀನ್ ಟೀ ಎಲೆಗಳಿಗೆ ತಾಜಾ ಪುದೀನಾ ಎಲೆಗಳನ್ನು ಸೇರಿಸಿ ಕಷಾಯ ಸಿದ್ಧಪಡಿಸಿ, ಅದಕ್ಕೆ ಸಕ್ಕರೆ ಸೇರಿಸಿ ಈ ಚಹಾ ತಯಾರಿಸಲಾಗುತ್ತದೆ. ಈ ಉಲ್ಲಾಸದಾಯಕ ಹಾಗೂ ಪರಿಮಳಭರಿತ ಚಹಾವನ್ನು ಅಲ್ಲಿನ ಜನ ದಿನವಿಡೀ ಆಗಾಗ ಪುಟ್ಟ ಲೋಟ ಹಿಡಿದು ಹೀರುತ್ತಲೇ ಇರುತ್ತಾರೆ. ಜೊತೆಗೆ ಒಂದಷ್ಟು ಬೀಜಗಳು, ಒಣಹಣ್ಣುಗಳು ಅಥವಾ ಪೇಸ್ಟ್ರಿಗಳು ಕೂಡ ಇರುತ್ತವೆ. ನಾನು ಕೂಡ ಚಹಾ ಸವಿಯಲು ಸೂಕ್ತ ಜಾಗ ಹುಡುಕುತ್ತಾ ಅಲ್ಲಿನ ಟೀ ಹೌಸ್ ನ ಗೋಡೆಯಲ್ಲಿನ ಸಣ್ಣ ರಂಧ್ರದ ಮೂಲಕ ಕಂಡ ಮೆಟ್ಟಿಲುಗಳನ್ನು ಅನುಸರಿಸುತ್ತಾ ಹೆಜ್ಜೆಗಳನ್ನು ಇಡುತ್ತಾ ಹೋದೆ. ಮೇಲೆ ಹೋಗುತ್ತಿದ್ದಂತೆ ಅತ್ಯಂತ ವರ್ಣಮಯವಾದ ತೆರೇಸ್‌ನ ದರ್ಶನ ನನಗಾಯಿತು! ಪಿಂಗಾಣಿ ಕಲಾಕೃತಿಗಳು ಹಾಗೂ ಆಕರ್ಷಕ ಪೀಠೋಪಕರಣಗಳಿಂದ ಅಲಂಕೃತವಾದ ಮೆಡೀನಾದ ರೂಫ್ ಟಾಪ್ ಗಳು ಟ್ಯೂನಿಸ್‌ನ ನಿಗೂಢ ಭಂಡಾರಗಳು ಎಂದೇ ಹೇಳಬಹುದು.

ಟ್ಯೂನಿಸಿಯಾಗೆ ನಾನು ಪ್ರವಾಸ ಹೊರಡಲು ತೀರ್ಮಾನಿಸಿದಾಗ ಹಲವರು ನನ್ನ ಆಯ್ಕೆಯ ಬಗ್ಗೆ ಕೇಳಿದರು. ನನ್ನ ಮಟ್ಟಿಗೆ ಹೇಳುವುದಾದರೆ, ಟ್ಯೂನಿಸಿಯಾವು ಹೊಸ ದೇಶವೊಂದನ್ನು ನೋಡಬೇಕೆಂಬ ಸೆಳೆತವನ್ನು ನನ್ನಲ್ಲಿ ಉಂಟುಮಾಡಿತ್ತು. ನೂತನ ತಾಣವೆಂಬ ಕುತೂಹಲದ ಜೊತೆಗೆ 100 ದೇಶಗಳಿಗೆ ಭೇಟಿ ಕೊಟ್ಟ ಮೈಲುಗಲ್ಲು ಮುಟ್ಟುವ ಅವಕಾಶವನ್ನು ಕೂಡ ಅದು ನನ್ನ ಮುಂದಿರಿಸಿತ್ತು. ಟ್ಯೂನಿಸಿಯಾವು ಸಮೃದ್ಧ ಸಂಸ್ಕೃತಿ, ಇತಿಹಾಸ, ಸಮುದ್ರ ದಂಡೆಗಳಿಂದ ಹಿಡಿದು ಮರಳುಗಾಡಿನವರೆಗಿನ ವೈವಿಧ್ಯಮಯ ಭೂಪ್ರದೇಶ, ಸುಂದರ ಹಳ್ಳಿಗಳು, ಸೊಬಗಿನ ನಗರಗಳು ಹಾಗೂ ಉತ್ತಮ ಆಹಾರ ಇವೆಲ್ಲವನ್ನೂ ಒಳಗೊಂಡ ದೇಶವಾಗಿದೆ. ಒಡಲಲ್ಲಿ ಅಷ್ಟೆಲ್ಲಾ ವೈವಿಧ್ಯ ಇರಿಸಿಕೊಂಡಿರುವ ಅಂತಹ ದೇಶವೊಂದನ್ನು ಮೊದಲ ಬಾರಿಗೆ ಅನ್ವೇಷಿಸುವ ಕಾತರ ಕೂಡ ನನ್ನಲ್ಲಿ ಇಣುಕುತ್ತಿತ್ತು!

'ಸರಿ, ಟ್ಯೂನಿಸಿಯಾವೇ ಏಕೆ?'– ಎಂದು ನೀವು ಕೂಡ ಕೇಳಬಹುದು. ನನಗೆ ಆಸಕ್ತಿ ಮೂಡಿಸಿದ ಅಂಶವೆಂದರೆ, ಇದು ಮೆಡಿಟರೇನಿಯನ್ ಸಮುದ್ರವು ಆಫ್ರಿಕಾವನ್ನು ಸಂಧಿಸುವ ಪ್ರದೇಶ! ಹಾಗೆ ನೋಡಿದರೆ, ಆಫ್ರಿಕಾ ಖಂಡವೇ ಬೆರಗು ಹುಟ್ಟಿಸುವ ವೈವಿಧ್ಯಮಯ ಭೂಪ್ರದೇಶವಾಗಿದೆ. ಮಳೆಕಾಡುಗಳಿಂದ ಹಿಡಿದು ಮರುಭೂಮಿಗಳವರೆಗೆ, ಸವನ್ನಾ ಹುಲ್ಲುಗಾವಲುಗಳಿಂದ ಹಿಡಿದು ಪರ್ವತಗಳವರೆಗೆ, ಮುಂದುವರಿದು ಕಡಲ ತೀರಗಳವರೆಗೆ ಇಲ್ಲಿ ಕಣ್ಣಿಗೆ ನಿಲುಕುವ ನೋಟಗಳು ವಿಭಿನ್ನ. ಉತ್ತರ ಆಫ್ರಿಕಾದಲ್ಲಿರುವ ಟ್ಯೂನಿಸಿಯಾವು ಮೆಡಿಟರೇನಿಯನ್ ಸಾಗರದಂಚಿಗೆ ಹೊಂದಿಕೊಂಡಿರುವ, ಪಶ್ಚಿಮದಲ್ಲಿ ಅಲ್ಜೀರಿಯಾ ಹಾಗೂ ಆಗ್ನೇಯದಲ್ಲಿ ಲಿಬಿಯಾ ದೇಶಗಳನ್ನು ಗಡಿಯಾಗಿ ಹೊಂದಿರುವ ನಾಡಾಗಿದೆ. ಮೊರೊಕ್ಕೋ, ಅಲ್ಜೀರಿಯಾ, ಲಿಬಿಯಾ ಮತ್ತು ಮೌರಿತಾನಿಯಾ ದೇಶಗಳನ್ನು ಒಳಗೊಂಡ ಮಗ್ರೆಬ್ ರಾಷ್ಟ್ರಗಳ ಕೂಟದ ಸದಸ್ಯ ರಾಷ್ಟ್ರವಾದ ಟ್ಯೂನಿಸಿಯಾವು ಬೆರ್ಬರ್ ಗಳ ನೆಲೆ ಕೂಡ ಹೌದು. "ಅಮಝಿಘ್" ಎಂದೂ ಕರೆಯಲ್ಪಡುವ ಬೆರ್ಬರ್ ಗಳು ಟ್ಯೂನಿಸಿಯಾ ಸೇರಿದಂತೆ ಉತ್ತರ ಆಫ್ರಿಕಾ ಮೂಲದ ಬುಡಕಟ್ಟು ಸಮುದಾಯಕ್ಕೆ ಸೇರಿದವರು. ಸಮೃದ್ಧ ಹಾಗೂ ವೈವಿಧ್ಯಮಯ ಸಾಂಸ್ಕೃತಿಕ ಪರಂಪರೆಯುಳ್ಳ ಬೆರ್ಬರ್‌ಗಳು ಈ ಪ್ರದೇಶದಲ್ಲಿ ಸಾವಿರಾರು ವರ್ಷಗಳಿಂದಲೂ ನೆಲಸಿದ್ದಾರೆ. ಆ ಮೂಲಕ ಟ್ಯೂನಿಸಿಯಾದ ಚರಿತ್ರೆ, ಭಾಷೆ ಮತ್ತು ರೀತಿರಿವಾಜುಗಳ ಮೇಲೆ ಅಳಿಸಲಾಗದ ಮುದ್ರೆ ಒತ್ತಿದ್ದಾರೆ. ತಮ್ಮ ಕ್ಷಮತೆ ಹಾಗೂ ಒಗ್ಗಿಕೊಳ್ಳುವ ಗುಣಕ್ಕೆ ಹೆಸರಾದ ಬೆರ್ಬರ್ ಗಳು ಹಲವಾರು ಆಕ್ರಮಣಕಾರರು ಹಾಗೂ ನಾಗರಿಕತೆಗಳ ಶತಮಾನಗಳಷ್ಟು ಅವಧಿಯ ಪ್ರಭಾವಗಳ ನಡುವೆಯೂ ತಮ್ಮ ವಿಶೇಷ ಪದ್ಧತಿಗಳು, ಆಚರಣೆಗಳು ಹಾಗೂ ಭಾಷೆಗಳನ್ನು ಸಂರಕ್ಷಿಸಿಕೊಂಡು ಬಂದಿದ್ದಾರೆ.



ಈ ಜನಾಂಗದವರು ಸಾಂಪ್ರದಾಯಿಕ ಜೀವನ ಪದ್ಧತಿ ಅನುಸರಿಸುತ್ತಾ, ಕೃಷಿ, ಪಶುಸಂಗೋಪನೆ ಮತ್ತು ಕುಶಲಕಲೆಗಳನ್ನು ಪೀಳಿಗೆಯಿಂದ ಪೀಳಿಗೆಗೆ ರವಾನಿಸುತ್ತಾ ಬಂದಿದ್ದಾರೆ. ಬೆರ್ಬರ್ ಹಳ್ಳಿಗಳು ತಮ್ಮದೇ ವಿಶಿಷ್ಟ ವಾಸ್ತುವಿನ್ಯಾಸ ಹಾಗೂ ತೆರೇಸ್‌ಗಳಿಂದ ಕೂಡಿದ್ದು ಪ್ರಕೃತಿ ಹಾಗೂ ಸಮುದಾಯದೊಂದಿಗೆ ಸಾಮರಸ್ಯದಿಂದ ಆಳವಾಗಿ ಬೇರೂರಿದ ಬದುಕಿನ ಶೈಲಿಯನ್ನು ಸೂಚಿಸುತ್ತವೆ. ಸಂಗೀತ, ನೃತ್ಯ ಹಾಗೂ ಹಬ್ಬಗಳು ಬೆರ್ಬರ್ ಸಮುದಾಯದ ಅವಿಭಾಜ್ಯ ಅಂಗವಾಗಿದ್ದು ಈಗಲೂ ವೈಭವಯುತ ಆಚರಣೆಯಿಂದ ಪರಂಪರೆಯ ಚೈತನ್ಯವನ್ನು ಬಿಂಬಿಸಿ ಗಮನ ಸೆಳೆಯುತ್ತವೆ.

ಇತಿಹಾಸವು ಕಾಲಪ್ರವಾಹದಲ್ಲಿ ಕ್ರಮೇಣವಾಗಿ ಸ್ಥಳವೊಂದರ ಭೌಗೋಳಿಕತೆ ಹಾಗೂ ವಾಸ್ತು–ಸಂರಚನೆಯನ್ನು ಮರು ವಿನ್ಯಾಸಗೊಳಿಸುತ್ತಾ ಸಾಗುತ್ತದೆ ಎಂದು ನನಗೆ ಆಗಾಗ ಅನ್ನಿಸುತ್ತಿರುತ್ತದೆ. ಟ್ಯೂನಿಸಿಯಾದ ಆಯಕಟ್ಟಿನ ಭೌಗೋಳಿಕ ನೆಲೆಯು ಅದನ್ನು ಐತಿಹಾಸಿಕವಾಗಿ ನಾಗರಿಕತೆಗಳ ಕವಲುದಾರಿಯಲ್ಲಿ ಇರಿಸಿದೆ. ಹೀಗಾಗಿ, ಯೂರೋಪ್, ಆಫ್ರಿಕಾ ಮತ್ತು ಮಧ್ಯಪ್ರಾಚ್ಯದ ಪ್ರಭಾವಗಳು ಅದರ ಸಂಸ್ಕೃತಿ, ಅಡುಗೆ ವಿಧಾನ ಹಾಗೂ ವಾಸ್ತುಶಿಲ್ಪವನ್ನು ರೂಪಿಸುವಲ್ಲಿ ತಂತಮ್ಮ ಪಾತ್ರ ವಹಿಸಿವೆ. ಅರಬ್ಬರು, ಫನೀಷಿಯನ್ನರು, ರೋಮನ್ನರು, ತುರ್ಕಿಯ ಒಟ್ಟೋಮಾನ್ ಗಳು ಮತ್ತು ಫ್ರೆಂಚರು ಇವರೆಲ್ಲರೂ ಈ ಸುಂದರ ದೇಶದ ಮೇಲೆ ತಮ್ಮ ಗುರುತು ಮೂಡಿಸಿದ್ದಾರೆ. ಟ್ಯೂನಿಸಿಯಾದ ಭೂಪ್ರದೇಶಗಳು ಸಮುದ್ರದ ಮರಳದಂಡೆಗಳಿಂದ ಹಿಡಿದು ಉತ್ತರದಲ್ಲಿ ಫಲವತ್ತಾದ ಬಯಲು ಪ್ರದೇಶಗಳು ಹಾಗೂ ಒಳನಾಡಿನಲ್ಲಿ ಅಟ್ಲಾಸ್ ಪರ್ವತಗಳವರೆಗೆ ವಿಭಿನ್ನವಾಗಿವೆ.

ಮೆಡೀನಾದಲ್ಲಿ ಮಿಂಟ್ ಚಹಾ ಹೀರಿದ ಮೇಲೆ ನಾನು ಟ್ಯೂನಿಸಿಯಾದ ವಿವಿಧ ಖಾದ್ಯಗಳ ರುಚಿಯನ್ನು ಮೆಲ್ಲುತ್ತಾ ಕಳೆದುಹೋದೆ. ಅಲ್ಲಿನ ಸಿಹಿ ಖಾದ್ಯಗಳನ್ನು ಹಾಗೂ ಸ್ಥಳೀಯ ಮಾರಾಟಗಾರರೊಬ್ಬರು ಸ್ನೇಹಭಾವದಿಂದ ನೀಡಿದ, ಮಂಜುಗಡ್ಡೆಯಲ್ಲಿ ಇರಿಸಿದ್ದ ಕೊರೆಯುತ್ತಿದ್ದ ಕ್ಯಾಕ್ಟಸ್ ಹಣ್ಣನ್ನು ತಿಂದು ಹುರುಪುಗೊಂಡೆ. ನನ್ನ ಮುಂದಿನ ಪಯಣ ಬಾರ್ಡೋ ಮ್ಯೂಸಿಯಂ ಗೆ ಮುಂದುವರಿಯಿತು. 19ನೇ ಶತಮಾನದ ಅರಮನೆಯಲ್ಲಿರುವ ಈ ವಸ್ತು ಸಂಗ್ರಹಾಲಯವು ಒಂದು ಲಕ್ಷಕ್ಕೂ ಹೆಚ್ಚು ಕಲಾಕೃತಿಗಳ ಸಂಗ್ರಹ ಹೊಂದಿದೆ. ಭವ್ಯವಾದ ರೋಮನ್ ಮೊಜಾಯಿಕ್ಸುಗಳು, ವಿಶಿಷ್ಟ ಆಭರಣಗಳು ಹಾಗೂ ಸೂಕ್ಷ್ಮ ಕುಶಲತೆಯ ಪಿಂಗಾಣಿ ಕಲಾಕೃತಿಗಳು ಇವುಗಳಲ್ಲಿ ಸೇರಿವೆ.

ಟ್ಯೂನಿಸ್ ನಗರ ಹಾಗೂ ಪ್ಯಾರಿಸ್ ನಡುವೆ ಅಚ್ಚರಿ ಎನ್ನಿಸುವಂತಹ ಹೋಲಿಕೆಗಳಿವೆ; ಇಲ್ಲಿನ ಅವಿನ್ಯೂ ದೆ ಫ್ರಾನ್ಸ್ ಗೆ ಕಾಲಿಟ್ಟರೆ ನೀವು ಫ್ರಾನ್ಸ್ ನ ರಾಜಧಾನಿ ನಗರಿಯಲ್ಲೇ ಇದ್ದೀರೇನೋ ಎಂಬ ಭಾವನೆ ಮೂಡುವುದು ಸುಳ್ಳಲ್ಲ! ಅಲ್ಲಿನ ವಿಶಾಲ ಬುಲವಾರ್ಡ್‌ಗಳು (ಸಾಲಾಗಿ ಮರಗಳಿರುವ ರಸ್ತೆ), ಭವ್ಯಕಟ್ಟಡಗಳು ಹಾಗೂ ಜನರಿಂದ ಗಿಜಿಗುಡುವ ಕೆಫೆಗಳು ಟ್ಯೂನಿಸಿಯಾದ ಚಹರೆಗಳ ನಡುವೆಯೂ ಥಟ್ಟನೆ ಫ್ರೆಂಚ್ ರಾಜಧಾನಿಯನ್ನು ನೆನಪಿಗೆ ತರುವಂತಿವೆ.

ಟ್ಯೂನಿಸ್‌ನಿಂದ ನಾನು ರಮಣೀಯ ಹಳ್ಳಿಯಾದ "ಸಿದಿ ಬೂ ಸಾಯಿದ್" ಎಂಬಲ್ಲಿಗೆ ಯಾನ ಕೈಗೊಂಡೆ. ಕಡಿದಾದ ಪರ್ವತದ ತುದಿಯಲ್ಲಿ ಮೆಡಿಟರೇನಿಯನ್ ಸಾಗರವನ್ನು ದಿಟ್ಟಿಸುತ್ತಾ ಬದುಕು ಕಟ್ಟಿಕೊಂಡಿರುವ ಹಳ್ಳಿ ಇದಾಗಿದೆ. ಬಿಳಿಯ ಸುಣ್ಣದ ಗೋಡೆಗಳ ಕಟ್ಟಡಗಳು ಹಾಗೂ ಅವಕ್ಕೆ ನೀಲಿ ಬಣ್ಣದ ಬಾಗಿಲುಗಳು ಅಥವಾ ಶಟರ್ ಗಳು ಇಲ್ಲಿ ಎದ್ದು ಕಾಣುತ್ತವೆ. ಇಲ್ಲಿನ ಭೂಪ್ರದೇಶಗಳು ಗ್ರೀಸ್‌ನ ಸಂತರೀನೀಯ ಭೂ ಪ್ರದೇಶಗಳನ್ನು ನೆನಪಿಸುತ್ತವೆ. ಇಲ್ಲಿನ ಪ್ರತೀತಿಯ ಪ್ರಕಾರ, ಮುಸ್ಲಿಂ ಸಂತನಾಗಿದ್ದ ಸಿದಿ ಬೂ ಸಾಯಿದ್‌ನಿಂದಾಗಿ ಈ ಹೆಸರು ಹಳ್ಳಿಗೆ ಬಂದಿದೆ. ಸಿದಿ ಬೂ 12ನೇ ಶತಮಾನದಲ್ಲಿ ಈ ಪ್ರದೇಶದಲ್ಲಿ ವಾಸಿಸುತ್ತಿದ್ದನಂತೆ. ಇಲ್ಲಿ ಆಕಾಶದ ಬಣ್ಣವನ್ನು ಹಾಗೂ ಅದೃಷ್ಟವನ್ನು ಸೂಚಿಸಲು ಬಾಗಿಲುಗಳಿಗೆ ಬಹುತೇಕ ಕಡು ನೀಲಿ ಬಣ್ಣವನ್ನೇ ಲೇಪಿಸಲಾಗುತ್ತದೆ. ಮೇಲೆ ಆಗಸದಲ್ಲಿ ತಿಳಿ ನೀಲಿ, ಇಲ್ಲಿ ಈ ಹಳ್ಳಿಯಲ್ಲಿ ಕೆಳಗೆ ಎಲ್ಲೆಲ್ಲೂ ಕಡುನೀಲಿ! ಮನೆಯ ಬಾಗಿಲುಗಳು ಒಳಗ ವಾಸಿಸುವವರ ಅದೃಷ್ಟವನ್ನು ಮತ್ತು ಸಂತೋಷವನ್ನು ಪ್ರತಿಬಿಂಬಿಸುತ್ತವೆ ಎಂಬುದು ಇಲ್ಲಿನ ಜನರ ನಂಬಿಕೆಯಾಗಿದೆ.

ಪಶ್ಚಿಮ ದಿಗಂತದಲ್ಲಿ ಸೂರ್ಯನು ಕರಗುತ್ತಾ ಆಕಾಶಕ್ಕೆ ತಿಳಿ ಗುಲಾಬಿ ಹಾಗೂ ಹೊಂಬಣ್ಣವನ್ನು ಲೇಪಿಸುತ್ತಿದ್ದಾಗ ಒಂದು ಬಗೆಯ ಶಾಂತಿಯ ಭಾವನೆ ಹಾಗೂ ನೆಮ್ಮದಿ ನನಗೆ ಗೊತ್ತಿಲ್ಲದಂತೆಯೇ ನನ್ನನ್ನು ಆವರಿಸಿತು. ಅಲ್ಲಿನ ಬೀದಿಗಳನ್ನು ಅಲಂಕರಿಸಿದ್ದ ಮಲ್ಲಿಗೆ ಹೂವು ಸುತ್ತಲ ಗಾಳಿಗೆ ಮತ್ತೇರಿಸುವ ಪರಿಮಳ ತುಂಬಿ ಲವಲವಿಕೆಯಿಂದ ನಳನಳಿಸುವ ಹಳ್ಳಿಯ ಪರಿಸರಕ್ಕೆ ತನ್ನ ಪಾಲಿನ ಕೊಡುಗೆ ಎಂಬಂತೆ ಇನ್ನಷ್ಟನ್ನು ಸೇರಿಸಿತ್ತು. ಅಂದಂತೆ, ಮಲ್ಲಿಗೆ ಹೂವು ಟ್ಯೂನಿಸಿಯಾದ ರಾಷ್ಟ್ರೀಯ ಹೂವು ಆಗಿದ್ದು, ಆ ದೇಶದ ಅಸ್ಮಿತೆಯ ಹೆಮ್ಮೆಯ ಸಂಕೇತವಾಗಿದೆ. ಮಲ್ಲಿಗೆ ಕ್ರಾಂತಿ ಎಂದೂ ಹೆಸರಾದ ಟ್ಯೂನಿಸಿಯಾದ ಕ್ರಾಂತಿಯ ಅವಧಿಯಲ್ಲಿ ಈ ಹೂವು ಆಶಾಭಾವನೆ, ಸ್ವಾತಂತ್ರ್ಯ ಹಾಗೂ ಪರಿವರ್ತನೆಯ ಪ್ರಬಲ ಸಂಕೇತವಾಗಿ ಹೊರಹೊಮ್ಮಿತು. ಪ್ರತಿಭಟನಾಕಾರರು ಮಲ್ಲಿಗೆ ಹೂವುಗಳನ್ನು ಹೊತ್ತು ತಮನ್ನು ತಾವೇ ಮಲ್ಲಿಗೆ ಮಾಲೆಗಳಿಂದ ಸಿಂಗರಿಸಿಕೊಂಡು ರಾಜಕೀಯ ಸುಧಾರಣೆಗಾಗಿ, ಭ್ರಷ್ಟಾಚಾರ ಹಾಗೂ ಸರ್ವಾಧಿಕಾರದ ಆಡಳಿತದ ಪರಿಸಮಾಪ್ತಿಗಾಗಿ ಧ್ವನಿಗಳನ್ನು ಮೊಳಗಿಸಿದ್ದರು.

ನನ್ನ ಅನ್ವೇಷಣೆ ಮುಂದುವರಿಸಿ ನಾನು ಹಮಾಮಟ್ ಎಂಬ ಕಡಲ ದಂಡೆಯ ಪಟ್ಟಣಕ್ಕೆ ಹೊರಟೆ. ಇದು ಪ್ರಶಾಂತ ಸಮುದ್ರ ತೀರಗಳು ಮತ್ತು ತಿಳಿನೀಲಿ ಬಣ್ಣದ ಜಲರಾಶಿಗೆ ಹೆಸರಾಗಿರುವ ತಾಣ. ಕಣ್ಣಿಗೆ ಕಾಣುವಷ್ಟು ಉದ್ದಕ್ಕೂ ಮೈಚೆಲ್ಲಿ ನಿಂತಿರುವ ಮರಳ ದಂಡೆಗಳು ನೋಡುಗರಿಗೆ ಮೆಡಿಟರೇನಿಯನ್ ಸಮುದ್ರದಂಚಿನ ನಿಸರ್ಗ ಸೌಂದರ್ಯದ ನಡುವೆ ಮೈಮರೆತು ವಿರಮಿಸಲು ಆಹ್ವಾನ ನೀಡುವಂತಿವೆ.

ಟ್ಯೂನಿಸಿಯಾ ಪ್ರವಾಸವು ಅಲ್ಲಿನ ಪುರಾತನ ನಗರವಾದ ಕಾರ್ತೆಜ್‌ಗೆ ಭೇಟಿ ನೀಡದೆ ಪರಿಪೂರ್ಣವಾಗುವುದೇ ಇಲ್ಲ. ಈ ನಗರವು ಒಂದೊಮ್ಮೆ ಮೆಡಿಟರೇನಿಯನ್ ಪ್ರಾಂತ್ಯದ ವಾಣಿಜ್ಯ ಹಾಗೂ ಸಾಂಸ್ಕೃತಿಕ ಕೇಂದ್ರವಾಗಿತ್ತು. ಸಾವಿರಾರು ವರ್ಷಗಳ ಹಿಂದೆ ಇಲ್ಲಿ ಸಮೃದ್ಧಿಯಾಗಿ ಬೆಳೆದ ಕಾರ್ತೆಜಿನಿಯನ್ ನಾಗರಿಕತೆ ಬಗ್ಗೆ ಇಲ್ಲಿಗೆ ಬಂದಾಗಲೇ ನನಗೆ ಗೊತ್ತಾಗಿದ್ದು. ಪ್ರತೀತಿಗಳ ಪ್ರಕಾರ, ಕಾರ್ತೆಜ್ ಸ್ಥಾಪನೆಗೊಂಡಿದ್ದು ರಾಣಿ ಡಿಡೋಳಿಂದ. ಫನೀಷಿಯನ್ ಪೌರಾಣಿಕ ವ್ಯಕ್ತಿಯಾದ ಈಕೆ ಹೊಸ ಸಾಮ್ರಾಜ್ಯ ಹುಡುಕುತ್ತಾ ತನ್ನ ತಾಯ್ನೆಲದಿಂದ ಪಲಾಯನ ಮಾಡಿದಳು. ರಾಜ ತೈರ್ ಎಂಬಾತನ ಮಗಳಾದ ರಾಣಿ ಡಿಡೋ ತನ್ನ ಗಂಡನ ಹತ್ಯೆಯ ನಂತರ ಅನುಯಾಯಿಗಳೊಂದಿಗೆ ಪಲಾಯನ ಮಾಡಿದಳು. ಹಾಗೆ ಬಂದವರು ಉತ್ತರ ಆಫ್ರಿಕಾದಲ್ಲಿ ನೆಲೆಯಾದರು. ಅಲ್ಲಿ ಆಕೆ ಬುದ್ಧಿವಂತಿಕೆಯಿಂದ ವಿಶಾಲ ಪ್ರದೇಶವನ್ನು ರಹಸ್ಯವಾಗಿ ಸುತ್ತುವರಿದು ರಾಜ ಲರ್ಬಾಸ್ ನಿಂದ ಭೂಮಿಯನ್ನು ಪಡೆದುಕೊಳ್ಳುತ್ತಾಳೆ. ನಂತರ ಅಲ್ಲಿ ಆಕೆ ಕಾರ್ತೆಜ್ ಅನ್ನು ಸ್ಥಾಪಿಸುತ್ತಾಳೆ. ಅದು ಆಕೆಯ ಜಾಣ್ಮೆಯ ನಾಯಕತ್ವದಡಿಯಲ್ಲಿ ಪ್ರಮುಖ ವಾಣಿಜ್ಯ ಹಾಗೂ ವಹಿವಾಟು ನೆಲೆಯಾಗಿ ಪ್ರವರ್ಧಮಾನಕ್ಕೆ ಬರುತ್ತದೆ.

ಟ್ಯೂನಿಸಿಯಾದ ನನ್ನ ಸಂಚಾರವು ಮುಗಿಯುತ್ತಾ ಬಂದಂತೆ ನನ್ನ ಯಾನದ ಉದ್ದಕ್ಕೂ ಆದ ಅಚ್ಚರಿಯ ಅನುಭವಗಳು ಹಾಗೂ ನೆನಪುಗಳನ್ನು ಮೆಲುಕು ಹಾಕದೇ ಇರುವುದು ಅಸಾಧ್ಯವಾಯಿತು. ಟ್ಯೂನಿಸ್‌ನ ಗಿಜಿಗುಡುವ ಮಾರ್ಕೆಟ್ ಗಳಿಂದ ಹಿಡಿದು ಸಿದಿ ಬೂ ಸಾಯಿದ್ ನ ಪ್ರಶಾಂತ ರಮಣೀಯತೆಯವರೆಗೆ ಹಾಗೂ ಕಾರ್ತೆಜ್‌ನ ಪುರಾತನ ಅವಶೇಷಗಳವರೆಗೆ ಟ್ಯೂನಿಸಿಯಾವು ನನ್ನ ಹೃದಯವನ್ನು ನಾನು ಊಹಿಸದ ರೀತಿಯಲ್ಲಿ ಸಮ್ಮೋಹನಗೊಳಿಸಿತು. ವೀಣಾ ವರ್ಲ್ಡ್ ಸಂಸ್ಥೆಯು ಟ್ಯೂನಿಸಿಯಾ, ಮಾಲ್ಟಾ ಮತ್ತು ಸಿಸಿಲಿಯ ಪ್ರಮುಖ ತಾಣಗಳನ್ನು ಅನ್ವೇಷಿಸುವ ಪ್ರವಾಸ ವ್ಯವಸ್ಥೆ ಆರಂಭಿಸಿದೆ. ಇದು ಪ್ರವಾಸಿಗರಿಗೆ ಅದ್ಭುತ ತಾಣಗಳ ಸಮೃದ್ಧ ಇತಿಹಾಸ, ಸಂಸ್ಕೃತಿ ಹಾಗೂ ನೈಸರ್ಗಿಕ ಸೌಂದರ್ಯದಲ್ಲಿ ಮಿಂದೇಳಲು ಅವಕಾಶ ಒದಗಿಸುತ್ತದೆ. ನೀವು ಇತಿಹಾಸದ ಬಗ್ಗೆ ಕುತೂಹಲ ಉಳ್ಳವರಾಗಿರಬಹುದು, ವಿವಿಧ ಸಂಸ್ಕೃತಿಗಳ ಬಗ್ಗೆ ತಿಳಿಯಲು ಉತ್ಸುಕರಾಗಿರಬಹುದು ಅಥವಾ ಕಡಲ ತಡಿಯಲ್ಲಿ ಸ್ವಚ್ಛಂದವಾಗಿ ವಿರಮಿಸುವ ಮನಸ್ಸುಳ್ಳವರಾಗಿರಬಹುದು, ಇವೆಲ್ಲಕ್ಕೂ ಈ ಪ್ರವಾಸವು ಪ್ರತಿಯೊಬ್ಬರಿಗೂ ಅವಕಾಶ ಕಲ್ಪಿಸುತ್ತದೆ. ಈ ಪ್ರವಾಸದ ಸೆಪ್ಟೆಂಬರ್ ತಿಂಗಳ ಬುಕಿಂಗ್ ಈಗಾಗಲೇ ಮುಗಿದು ಹೋಗಿದೆ. ಆದ್ದರಿಂದ, ನಾವು ಅಕ್ಟೋಬರ್ ನಲ್ಲಿ ಇನ್ನೊಂದು ಪ್ರವಾಸ ವ್ಯವಸ್ಥೆ ಏರ್ಪಡಿಸಿದ್ದು, ಅದಕ್ಕೆ ಈಗ ಬುಕಿಂಗ್ ನಡೆಯುತ್ತಿದೆ.

ಪ್ರತಿವಾರವೂ ವಿವಿಧ ಮಾಧ್ಯಮಗಳಲ್ಲಿ ಪ್ರಕಟವಾಗುವ ಸುನೀಲಾ ಪಾಟೀಲ್, ವೀಣಾ ಪಾಟೀಲ್ ಮತ್ತು ನೀಲ್ ಪಾಟೀಲ್ ಅವರ ಲೇಖನಗಳನ್ನು ವೀಣಾ ವರ್ಲ್ಡ್ ವೆಬ್ಸೈಟ್ www.veenaworld.com ನಲ್ಲೂ ಓದಬಹುದು.

ಯೂರೋಪಿನ ಅಷ್ಟಾಗಿ ಕಂಡುಕೇಳರಿಯದ ಕೆಲವು ಸ್ಥಳಗಳಿಗೆ ಈ ವರ್ಷ ಭೇಟಿ ನೀಡೋಣ.

ಈಗ ಅಕ್ಟೋಬರ್‌ನಲ್ಲಿ ಸರಿಸಾಟಿ ಇಲ್ಲದ ಕುತೂಹಲಕರ ಯಾನಕ್ಕೆ ಹೊರಡಲು ಸಿದ್ಧರಾಗಿ! ಅರಬ್‌ನ ಅತ್ಯಂತ ಉದಾರ ದೇಶವಾದ ಹಸಿರು ಮಿಶ್ರಿತ ನೀಲಿ ಜಲರಾಶಿಯಿಂದ ಕಂಗೊಳಿಸುವ, "ಮೆಡಿಟರೇನಿಯನ್ ರತ್ನ"ಎಂದೇ ಹೆಸರಾದ ಟ್ಯೂನಿಸಿಯಾವನ್ನು ಅನ್ವೇಷಿಸಿ. ಮಾಲ್ಟಾದ ಪ್ರಾಚೀನ ನಗರಗಳು, ಆಳಸಮುದ್ರದ ಗುಹೆಯಾದ ಬ್ಲೂ ಗ್ರೊಟ್ಟೊ ಮತ್ತು "ಗೇಮ್ ಆಫ್ ಥ್ರೋನ್ಸ್" ಚಿತ್ರೀಕರಣಗೊಂಡ ಸ್ಥಳಗಳನ್ನು ಪ್ರತ್ಯಕ್ಷವಾಗಿ ವೀಕ್ಷಿಸಿ. ಸಿಸಿಲಿ, ಯೂರೋಪಿನ ಅತ್ಯಂತ ಎತ್ತರದ ಸಕ್ರಿಯ ಜ್ವಾಲಾಮುಖಿಯಾದ ಮೌಂಟ್ ಎತ್ನಾ ಹಾಗೂ ಮೇಧಾವಿ ಗಣಿತಶಾಸ್ತ್ರಜ್ಞ ಆರ್ಕಿಮಿಡೀಸ್‌ನ ನೆಲೆಯಾಗಿದ್ದ ಸಿರಕ್ಯೂಸ್ ಇವುಗಳನ್ನು ನೋಡಿ ಖುಷಿಪಡಿ. ನಮ್ಮ ಸೆಪ್ಟೆಂಬರ್ ತಿಂಗಳ ಪ್ರವಾಸಕ್ಕೆ ಬುಕಿಂಗ್‌ಗಳು ಈಗಾಗಲೇ ಮುಗಿದಿವೆ. ಅಕ್ಟೋಬರ್ ಪ್ರವಾಸ ಕೈತಪ್ಪದಿರಲು ಈಗಲೇ ಬುಕಿಂಗ್ ಮಾಡಿ!

ಚಲೋ, ಬ್ಯಾಗ್ ಭರೋ, ನಿಕಲ್ ಪಡೋ! ವೀಣಾ ವರ್ಲ್ಡ್ ನೊಂದಿಗೆ



VEENA WORLD
Travel. Explore. Celebrate Life.

ಪ್ಯಾರಿಸ್ ಪ್ಯಾರಾಲಿಂಪಿಕ್ಸ್ • ಶೂಟಿಂಗ್‌ನಲ್ಲಿ ಭಾರತಕ್ಕೆ ನಾಲ್ಕನೇ ಪದಕ

10 ಮೀ. ಏರ್‌ಪಿಸ್ತೂಲ್: ರುಬಿನಾಗೆ ಕಂಚು



ಪ್ಯಾರಾಲಿಂಪಿಕ್ಸ್ ಮಹಿಳೆಯರ 10 ಮೀ. ಏರ್‌ಪಿಸ್ತೂಲ್ ವಿಭಾಗದಲ್ಲಿ ಕಂಚು ಗೆದ್ದ ಭಾರತದ ರುಬಿನಾ ಫ್ರಾನ್ಸಿಸ್ –ಎಕ್ಸ್ ಚಿತ್ರ

ಶಾತೋರು (ಫ್ರಾನ್ಸ್), (ಪಿಟಿಐ): ಭಾರತದ ರುಬಿನಾ ಫ್ರಾನ್ಸಿಸ್ ಅವರು ಪ್ಯಾರಿಸ್ ಪ್ಯಾರಾಲಿಂಪಿಕ್ಸ್ ಕ್ರೀಡೆಗಳ ಮಹಿಳೆಯರ ಏರ್ ಪಿಸ್ತೂಲ್ ಎಸ್‌ಎಚ್1 ವಿಭಾಗದಲ್ಲಿ ಶನಿವಾರ ಕಂಚಿನ ಪದಕ ಗೆದ್ದುಕೊಂಡರು.

25 ವರ್ಷ ವಯಸ್ಸಿನ ರುಬಿನಾ, ಎಂಟು ಮಂದಿಯಿದ್ದ ಫೈನಲ್ ಕಣದಲ್ಲಿ 211.1 ಸ್ಕೋರ್‌ನೊಡನೆ ಮೂರನೇ ಸ್ಥಾನ ಪಡೆದರು. ದಿನದ ಆರಂಭದಲ್ಲಿ ನಡೆದ ಅರ್ಹತಾ ಸುತ್ತಿನಲ್ಲಿ ಮಧ್ಯಪ್ರದೇಶದ ಜಬಲ್ಪುರದ ಈ ಸ್ಪರ್ಧಿ ಏಳನೇ ಸ್ಥಾನ ಪಡೆದು ಫೈನಲ್ ಸುತ್ತಿಗೇರಿದ್ದರು.

ಇರಾನ್‌ನ ಸಾರೆ ಜಾವನ್‌ಮರ್ದಿ (236.8) ಚಿನ್ನದ ಪದಕ ಗಳಿಸಿದರೆ, ಟರ್ಕಿಯ ಐಸೆಲ್ ಓಜ್ಗಾನ್ (231.1) ಬೆಳ್ಳಿ ತಮ್ಮದಾಗಿಸಿಕೊಂಡರು.

ರುಬಿನಾ, ಮೂರು ವರ್ಷಗಳ ಹಿಂದೆ ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಏಳನೇ ಸ್ಥಾನ ಗಳಿಸಿದ್ದರು.

ಈ ಬಾರಿ ಭಾರತ ತಂಡ ಪ್ಯಾರಿಸ್‌ಗೆ ತೆರಳುವ ಕೆಲವೇ ದಿನಗಳ ಮೊದಲು ವೈಲ್ಡ್ ಕಾರ್ಡ್ ಮೂಲಕ ರುಬಿನಾ ಪ್ಯಾರಾಲಿಂಪಿಕ್ಸ್ ಕೋಟಾ ಪಡೆದಿದ್ದರು.

ಇದು ಪ್ಯಾರಿಸ್ ಕ್ರೀಡೆಗಳಲ್ಲಿ ಭಾರತಕ್ಕೆ ಶೂಟಿಂಗ್‌ನಲ್ಲಿ ದೊರೆತ ನಾಲ್ಕನೇ ಹಾಗೂ ಒಟ್ಟಾರೆ ಐದನೇ ಪದಕ. ಅವನಿ ಲೇಖರ ಶುಕ್ರವಾರ ನಡೆದ ಮಹಿಳೆಯರ 10 ಮೀ ಏರ್ ರೈಫಲ್ ಸ್ಪರ್ಧೆಯಲ್ಲಿ ಗೆದ್ದು ಸತತ ಎರಡನೇ ಪ್ಯಾರಾಲಿಂಪಿಕ್ಸ್ ಚಿನ್ನದ ಪದಕ ಕೊರಳಿಗೇರಿಸಿಕೊಂಡಿದ್ದರು. ಇದೇ ಸ್ಪರ್ಧೆಯಲ್ಲಿ ಮೋನಾ ಅಗರವಾಲ್ ಕಂಚಿನ ಪದಕ ಗಳಿಸಿದ್ದರು.

ಮನೀಶ್ ನರ್ವಾಲ್ ಅವರು ಪುರುಷರ 10 ಮೀ. ಏರ್ ಪಿಸ್ತೂಲ್‌ನಲ್ಲಿ (ಎಸ್‌ಎಚ್1) ಬೆಳ್ಳಿ ಪದಕ ಜಯಿಸಿದ್ದರು.

ಈ ಕ್ಲಾಸ್‌ನಲ್ಲಿ ಅಥ್ಲೀಟುಗಳು ಗನ್ ಹಿಡಿಯಲು ಸಮರ್ಥರಾಗಿದ್ದರೂ, ವೀಲ್ ಚೇರ್/ ಚೇರ್‌ನಲ್ಲಿ ಕುಳಿತು ಅಥವಾ ನಿಂತು ಶೂಟ್ ಮಾಡಬೇಕಾಗುತ್ತದೆ.

ಸ್ವರೂಪ್‌ಗೆ ನಿರಾಸೆ: ಸ್ವರೂಪ್ ಉನ್ಹಲ್ಕರ್ ಅವರು ಪುರುಷರ 10 ಮೀ. ಏರ್ ರೈಫಲ್‌ನಲ್ಲಿ ಅಷ್ಟೇನೂ ಪರಿಣಾಮಕಾರಿ ಪ್ರದರ್ಶನ ನೀಡಲಿಲ್ಲ. 38 ವರ್ಷ ವಯಸ್ಸಿನ ಸ್ವರೂಪ್ ಕ್ವಾಲಿಫಿಕೇಷನ್ ಸುತ್ತಿನಲ್ಲಿ 14ನೇ ಸ್ಥಾನದೊಡನೆ ಹೊರಬಿದ್ದರು.

ಇದು ಸ್ವರೂಪ್‌ಗೆ ಎರಡನೇ ಪ್ಯಾರಾಲಿಂಪಿಕ್ಸ್. ಟೋಕಿಯೊದಲ್ಲಿ ಅವರಿಗೆ ಸ್ವಲ್ಪದರಲ್ಲೇ ಕಂಚಿನ ಪದಕ ಕೈತಪ್ಪಿತ್ತು. ಕೊಲ್ಹಾಪುರದ ಈ ಶೂಟರ್ ಶನಿವಾರ 613.4 ಪಾಯಿಂಟ್ಸ್ ಸಂಗ್ರಹಿಸಿದರು. ದಕ್ಷಿಣ ಕೊರಿಯಾದ ಪಾರ್ಕ್ ಜಿನ್ಹೊ 624.4 ಸ್ಕೋರ್‌ನೊಡನೆ 18 ಮಂದಿ ಸ್ಪರ್ಧಿಗಳ ಅರ್ಹತಾ ಸುತ್ತಿನಲ್ಲಿ ಅಗ್ರಸ್ಥಾನ ಪಡೆದರು. ಸ್ವರೂಪ್ ಕ್ರಮವಾಗಿ 101.8, 103.0, 101.7, 101.8, 102.4, 102.7 ಸ್ಕೋರ್‌ಗಳೊಡನೆ ಒಟ್ಟು 613.4 ಅಂಕ ಕಲೆಹಾಕಿದರು.

ಬ್ಯಾಡ್ಮಿಂಟನ್: ಸೆಮಿಗೆ ನಿತೇಶ್ ಕುಮಾರ್, ಸುಕಾಂತ್ ಕದಂ

ಪ್ಯಾರಿಸ್ (ಪಿಟಿಐ): ಭಾರತದ ನಿತೇಶ್ ಕುಮಾರ್ ಮತ್ತು ಸುಕಾಂತ್ ಕದಂ ಅವರು ಪ್ಯಾರಾಲಿಂಪಿಕ್ಸ್ ಬ್ಯಾಡ್ಮಿಂಟನ್ ಸ್ಪರ್ಧೆಯಲ್ಲಿ ಕ್ರಮವಾಗಿ ಎಸ್‌ಎಲ್3 ಮತ್ತು ಎಸ್‌ಎಲ್4 ವಿಭಾಗದಲ್ಲಿ ಸೆಮಿಫೈನಲ್ ತಲುಪಿದರು. ಇವರಿಬ್ಬರು ಶನಿವಾರ ನಡೆದ ಪಂದ್ಯಗಳಲ್ಲಿ ತಮ್ಮ ಎದುರಾಳಿಗಳನ್ನು ನೇರ ಗೇಮ್‌ಗಳಲ್ಲಿ ಸೋಲಿಸಿದರು.

ಕಳೆದ ವರ್ಷ ಚೀನಾದಲ್ಲಿ ನಡೆದ ಪ್ಯಾರಾ ಏಷ್ಯನ್ ಗೇಮ್ಸ್‌ನಲ್ಲಿ ಬೆಳ್ಳಿ ಗೆದ್ದಿದ್ದ ನಿತೇಶ್ 21-13, 21-14 ರಿಂದ ಥಾಯ್ಲೆಂಡ್‌ನ ಮೊಂಗ್‌ಖೋನ್ ಬುನ್ಸುನ್ ಅವರನ್ನು ಸೋಲಿಸಿ 'ಎ' ಗುಂಪಿನಲ್ಲಿ ಅಗ್ರಸ್ಥಾನ ಗಳಿಸಿದರು. ಗುಂಪಿನಲ್ಲಿ ಎರಡನೇ ಸ್ಥಾನ ಪಡೆದ ಬುನ್ಸುನ್ ಕೂಡ ನಾಲ್ಕರ ಘಟ್ಟ ತಲುಪಿದರು.

ಎಸ್‌ಎಲ್ 3 ವಿಭಾಗ ಸೊಂಟದ ಕೆಳಭಾಗ ಊನಗೊಂಡಿರುವ ಕ್ರೀಡಾಪಟುಗಳಿಗೆ ಮೀಸಲಾಗಿದೆ. ಇಲ್ಲಿ ಗುಂಪಿನಲ್ಲಿ ಮೊದಲ ಎರಡು ಸ್ಥಾನ ಪಡೆದವರು ಸೆಮಿಗೆ ಮುನ್ನಡೆಯುತ್ತಾರೆ.

ಪುರುಷರ ಎಸ್‌ಎಲ್4 ವಿಭಾಗದಲ್ಲಿ ಸುಕಾಂತ್ ಅವರು 21-12, 21-12 ರಿಂದ ಥಾಯ್ಲೆಂಡ್‌ನ ತೀಮರೋಂ ಸಿರಿಪಾಂಗ್ ಅವರನ್ನು ಸೋಲಿಸಿ 'ಬಿ' ಗುಂಪಿನಲ್ಲಿ ಅಗ್ರಸ್ಥಾನ ಪಡೆದರು. ಭಾರತದವರೇ ಆದ ಸುಹಾಸ್ ಯತಿರಾಜ್ ಅವರೂ ಇದೇ ಗುಂಪಿನಿಂದ ಈ ಮೊದಲೇ ಸೆಮಿಫೈನಲ್ ತಲುಪಿದ್ದಾರೆ.

ಸುಕಾಂತ್ ಅವರು ಹಾಂಗ್‌ಝೌದಲ್ಲಿ ನಡೆದ ಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದರು.

ಮನ್‌ದೀಪ್ ಕೌರ್ ಜಯ: ಮಹಿಳೆಯರ ಎಸ್‌ಎಲ್3 ವಿಭಾಗದಲ್ಲಿ ಮನ್‌ದೀಪ್ ಕೌರ್ 21-23, 21-10, 21-17 ರಿಂದ ಆಸ್ಟ್ರೇಲಿಯಾದ ಸೆಲಿನ್ ಆರೆಲಿ ಅವರನ್ನು ಸೋಲಿಸಿ ಎಂಟರ ಘಟ್ಟ ತಲುಪಿದರು.

ಶುಕ್ರವಾರ ರಾತ್ರಿ ನಡೆದ ಮಿಶ್ರ ಡಬಲ್ಸ್ ಪಂದ್ಯದಲ್ಲಿ ಕನ್ನಡಿಗ ಅಧಿಕಾರಿ ಸುಹಾಸ್ ಯತಿರಾಜ್ ಮತ್ತು ಪಲಕ್ ಕೊಹ್ಲಿ ಮೊದಲ ಸುತ್ತಿನಲ್ಲೇ ನಿರ್ಗಮಿಸಿದರು. ಇವರಿಬ್ಬರು ಅಗ್ರ ಶ್ರೇಯಾಂಕದ ಹಿಕ್ಮತ್ ರಮ್ದಾನಿ- ಲೀನಿ ರತ್ರಿ ಒಕ್ತಿಲಾ (ಇಂಡೋನೇಷ್ಯಾ) ಜೋಡಿಯ ಎದುರು 11-21, 17-21ರಲ್ಲಿ ಸೋತರು.

ನಿತೇಶ್ ಕುಮಾರ್- ತುಳಸಿಮತಿ ಮುರುಗೇಶನ್ ಕೂಡ 22-24, 19-21ರಲ್ಲಿ ಫ್ರಾನ್ಸ್‌ನ ಫ್ಯಾನಿ ನೊಯೆಲ್- ಲುಕಾಸ್ ಮಝುರ್ ಅವರ ಎದುರು ಮಣಿದರು.

'ಬಿ' ಗುಂಪಿನಿಂದ ನಿತ್ಯಾ ಶಿವನ್ ಸುಮತಿ- ಶಿವರಾಜನ್ ಸೋಲೈಮಲೈ ಜೋಡಿ 21-7, 21-17ರಲ್ಲಿ ಚೈ ಸಿಯಾಂಗ್ ಅವರನ್ನು ಸೋಲಿಸಿತು.

ಆರ್ಚರಿ: ಶೀತಲ್ ದೇವಿ ನಿರ್ಗಮನ

ಕೈಗಳಿಲ್ಲದೇ, ಕಾಲಿನಿಂದಲೇ ಬಾಣಪ್ರಯೋಗ ಮಾಡುವ ಶೀತಲ್ ದೇವಿ, ಪ್ಯಾರಾಲಿಂಪಿಕ್ಸ್ ಆರ್ಚರಿ ಸ್ಪರ್ಧೆಯ ಮಹಿಳೆಯರ ಕಾಂಪೌಂಡ್ ಮುಕ್ತ ವಿಭಾಗದ ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ ಶನಿವಾರ ಅಲ್ಪ ಅಂತರದಲ್ಲಿ ಸೋಲನುಭವಿಸಿ ನಿರಾಸೆ ಮೂಡಿಸಿದರು.

ಏಷ್ಯನ್ ಪ್ಯಾರಾಗೇಮ್ಸ್‌ನಲ್ಲಿ ಎರಡು ಚಿನ್ನ ಗೆದ್ದಿರುವ, ಎರಡನೇ ಶ್ರೇಯಾಂಕದ ಶೀತಲ್ ಉತ್ತಮ ಪೈಪೋಟಿ ಕಂಡ ಹೋರಾಟದಲ್ಲಿ ಚಿಲಿಯ ಮರಿಯಾನಾ ಝುನಿಗಾ ಎದುರು 137-138 ರಲ್ಲಿ ಸೋತರು. ಇದು ಶೀತಲ್ ಅವರಿಗೆ ಮೊದಲ ಪ್ಯಾರಾಲಿಂಪಿಕ್ಸ್ ಆಗಿತ್ತು.

ಭಾರತದ ಸರಿತಾ ದೇವಿ ಅವರೂ ಎಂಟರ ಘಟ್ಟದಲ್ಲಿ ನಿರ್ಗಮಿಸಿದರು. ಫರೀದಾಬಾದ್‌ನ ಸರಿತಾ ಎಂಟರ ಘಟ್ಟದಲ್ಲಿ ಟರ್ಕಿಯ ಓಜ್ನೂರ್ ಕ್ಯೂರ್ ಗಿರ್ದಿ ಅವರಿಗೆ ಸೋತರು.

ಸೈಕ್ಲಿಂಗ್‌ನಲ್ಲಿ ನಿರಾಸೆ

ಭಾರತದ ಸೈಕ್ಲಿಸ್ಟ್‌ಗಳಾದ ಅರ್ಷದ್ ಶೇಖ್ ಮತ್ತು ಜ್ಯೋತಿ ಗಡೇರಿಯಾ ಅವರು ಟ್ರ್ಯಾಕ್ ಸೈಕ್ಲಿಂಗ್‌ನಲ್ಲಿ ತಮ್ಮ ವಿಭಾಗಗಳಲ್ಲಿ ಶನಿವಾರ ನಿರಾಸೆ ಮೂಡಿಸಿ ಅರ್ಹತಾ ಸುತ್ತಿನಲ್ಲೇ ಹೊರಬಿದ್ದರು.

ಮುಖ್ಯಾಂಶಗಳು

- ಮಧ್ಯಪ್ರದೇಶದ ರುಬಿನಾ: ಫೈನಲ್ ಕಣದಲ್ಲಿ ಗಳಿಸಿದ ಸ್ಕೋರ್ 211.1
- ಇರಾನ್‌ನ ಸಾರೆ ಜಾವನ್ ಮರ್ದಿಗೆ (236.8) ಚಿನ್ನದ ಪದಕ
- ಟರ್ಕಿಯ ಐಸೆಲ್ ಓಜ್ಗಾನ್‌ಗೆ (231.1) ಬೆಳ್ಳಿ ಪದಕ



ಕರ್ನಾಟಕದ ನಾಲ್ವರಿಗೆ ಸ್ಥಾನ


19 ವರ್ಷದೊಳಗಿನವರ ಭಾರತ ತಂಡಕ್ಕೆ ಸಮಿತ್ ದ್ರಾವಿಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವಪ್ರತಿಭೆ ಸಮಿತ್ ದ್ರಾವಿಡ್ ಸೇರಿದಂತೆ ಕರ್ನಾಟಕದ ನಾಲ್ವರು ಆಟಗಾರರು 19 ವರ್ಷದೊಳಗಿನವರ ಭಾರತ ತಂಡಕ್ಕೆ ಆಯ್ಕೆಯಾಗಿದ್ದಾರೆ. ಸಮಿತ್ ಅವರೊಂದಿಗೆ ಹಾರ್ದಿಕ್ ರಾಜ್, ಕೆ.ಪಿ. ಕಾರ್ತಿಕೇಯ ಮತ್ತು ಸಮರ್ಥ್ ನಟರಾಜ್ ಅವರು ಆಯ್ಕೆಯಾಗಿದ್ದಾರೆ.

ಇದೇ ತಿಂಗಳು ನಡೆಯಲಿರುವ ಆಸ್ಟ್ರೇಲಿಯಾ ಎದುರಿನ ಸರಣಿಗಳಲ್ಲಿ ಅವರು ಆಡಲಿದ್ದಾರೆ. ಪುದುಚೇರಿಯಲ್ಲಿ ಸೆಪ್ಟೆಂಬರ್ 21, 23 ಮತ್ತು 26ರಂದು ಮೂರು ಏಕದಿನ ಪಂದ್ಯಗಳು ನಡೆಯಲಿವೆ. ಸೆ 30ರಿಂದ ಮತ್ತು ಅ. 7ರಿಂದ ಎರಡು ದೀರ್ಘ ಮಾದರಿ (ನಾಲ್ಕು ದಿನಗಳ ಅವಧಿ) ಪಂದ್ಯಗಳು ನಡೆಯಲಿವೆ. ಏಕದಿನ ಸರಣಿಗೆ ಉತ್ತರ ಪ್ರದೇಶದ ಮೊಹಮ್ಮದ್ ಅಮನ್ ಮತ್ತು ದೀರ್ಘ ಮಾದರಿ ಪಂದ್ಯಗಳ ಸರಣಿಗೆ ಮಧ್ಯಪ್ರದೇಶದ ಸೋಹಮ್ ಪಟವರ್ಧನ್ ಅವರು ನಾಯಕತ್ವ ವಹಿಸಲಿದ್ದಾರೆ.

ಸಮಿತ್ ಅವರು ಮಧ್ಯಮವೇಗದ ಬೌಲಿಂಗ್ ಆಲ್‌ರೌಂಡರ್. ಪ್ರಸ್ತುತ ನಡೆಯುತ್ತಿರುವ ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಮೈಸೂರು ವಾರಿಯರ್ಸ್ ತಂಡದಲ್ಲಿ ಆಡುತ್ತಿದ್ದಾರೆ. ಏಳು ಇನಿಂಗ್ಸ್‌ಗಳಲ್ಲಿ 82 ರನ್ ಗಳಿಸಿದ್ದಾರೆ. ಅದರಲ್ಲಿ 33 ಅವರ ವೈಯಕ್ತಿಕ ಶ್ರೇಷ್ಠ ಸ್ಕೋರ್.



ಸಮರ್ಥ್ ನಾಗರಾಜ್



ಹಾರ್ದಿಕ್ ರಾಜ್

18 ವರ್ಷದ ಸಮಿತ್ ಈಚೆಗೆ ಕೂಚ್ ಬಿಹಾರ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಕರ್ನಾಟಕ ತಂಡವನ್ನು ಪ್ರತಿನಿಧಿಸಿದ್ದರು. ತಂಡವು ಇದೇ ಮೊದಲ ಬಾರಿ ಪ್ರಶಸ್ತಿ ಜಯಿಸಿದ ಸಾಧನೆ ಮಾಡಿತು. ಅದರಲ್ಲಿ ಅವರು ಒಟ್ಟು 362 ರನ್ ಗಳಿಸಿದ್ದರು. ಜಮ್ಮು ಮತ್ತು ಕಾಶ್ಮೀರ ತಂಡದ ಎದುರಿನ ಪಂದ್ಯದಲ್ಲಿ 98 ರನ್ ಗಳಿಸಿದ್ದರು. ಆ ಟೂರ್ನಿಯಲ್ಲಿ ಅವರು ಎಂಟು ಪಂದ್ಯಗಳಿಂದ16 ವಿಕೆಟ್ ಗಳಿಸಿದ್ದರು. ಅದರಲ್ಲಿ ಫೈನಲ್ ಪಂದ್ಯದಲ್ಲಿ ಮುಂಬೈ ಎದುರು ಎರಡು ವಿಕೆಟ್ ಗಳಿಸಿ ಮಿಂಚಿದ್ದರು.

ಸಮಿತ್ ಅವರ ತಂದೆ ರಾಹುಲ್ ದ್ರಾವಿಡ್ ಅವರು ಭಾರತ ಕ್ರಿಕೆಟ್ ತಂಡದ ನಾಯಕ, ವಿಕೆಟ್‌ಕೀಪರ್, ಬ್ಯಾಟರ್ ಮತ್ತು ಮುಖ್ಯ ಕೋಚ್ ಆಗಿದ್ದವರು. ಇತ್ತೀಚೆಗೆ ಅವರ ಮಾರ್ಗದರ್ಶನದ ಭಾರತ ತಂಡವು ಟಿ20 ವಿಶ್ವಕಪ್ ಜಯಿಸಿತ್ತು. ಕೆಲವು ವರ್ಷಗಳ ಹಿಂದೆ ಅವರು ಮುಖ್ಯ ಕೋಚ್ ಆಗಿ ಕಾರ್ಯನಿರ್ವಹಿಸಿದ್ದ 19 ವರ್ಷದೊಳಗಿನವರ ತಂಡವು ವಿಶ್ವಕಪ್ ಜಯಿಸಿತ್ತು.

ತಂಡಗಳು: ಏಕದಿನ ಸರಣಿ: ಮೊಹಮ್ಮದ್ ಅಮನ್ (ನಾಯಕ), ರುದ್ರ ಪಟೇಲ್, ಸಾಹಿಲ್ ಪರಾಕ್, ಕೆ.ಪಿ. ಕಾರ್ತಿಕೇಯ, ಕಿರಣ ಚೋರಮಲೆ, ಅಭಿಗ್ಯಾನ ಕುಂದು (ವಿಕೆಟ್‌ಕೀಪರ್), ಹರವಂಶ್ ಸಿಂಗ್ ಪಂಗಾಲಿಯಾ (ವಿಕೆಟ್‌ಕೀಪರ್), ಸಮಿತ್ ದ್ರಾವಿಡ್, ಯುದ್ಧಜೀತ್ ಗುಹಾ, ಎನ್. ಸಮರ್ಥ್, ನಿಖಿಲ್ ಕುಮಾರ್, ಚೇತನ್ ಶರ್ಮಾ, ಹಾರ್ದಿಕ್ ರಾಜ್, ರೋಹಿತ್ ರಾಜಾವತ್, ಮೊಹಮ್ಮದ್ ಇನಾನ್.

ಚತುರ್ದಿನ ಪಂದ್ಯಗಳ ಸರಣಿ: ಸೋಹಂ ಪಟವರ್ಧನ್ (ನಾಯಕ), ವೈಭವ್ ಸೂರ್ಯವಂಶಿ, ನಿತ್ಯ ಪಾಂಡ್ಯ, ವಿಹಾನ್ ಮಲ್ಹೋತ್ರಾ, ಕೆ.ಪಿ. ಕಾರ್ತಿಕೇಯ, ಸಮಿತ್ ದ್ರಾವಿಡ್, ಅಭಿಗ್ಯಾನ ಕುಂದು, ಹರವಂಶ್ ಸಿಂಗ್ ಪಂಗಾಲಿಯಾ (ಇಬ್ಬರೂ ವಿಕೆಟ್‌ಕೀಪರ್), ಚೇತನ್ ಶರ್ಮಾ, ಎನ್. ಸಮರ್ಥ್, ಆದಿತ್ಯ ರಾವತ್, ನಿಖಿಲ್ ಕುಮಾರ್, ಅನ್ಮೋಲ್‌ಜೀತ್ ಸಿಂಗ್, ಆದಿತ್ಯ ಸಿಂಗ್. ಮೊಹಮ್ಮದ್ ಇನಾನ್.

ಪಾಕ್‌ಗೆ ಮೆಹಿದಿ ಹಸನ್ ಕಡಿವಾಣ

ರಾವಲ್ಪಿಂಡಿ (ಎಎಫ್‌ಪಿ): ಆಫ್ ಸ್ಪಿನ್ನರ್ ಮೆಹಿದಿ ಹಸನ್ ಮಿರಾಜ್ ಅವರ ಐದು ವಿಕೆಟ್ ಗೊಂಚಲಿನ ನೆರವಿನಿಂದ ಬಾಂಗ್ಲಾದೇಶ ತಂಡ ಎರಡನೇ ಟೆಸ್ಟ್ ಪಂದ್ಯದಲ್ಲಿ ಆತಿಥೇಯ ಪಾಕಿಸ್ತಾನ ತಂಡ ದೊಡ್ಡ ಮೊತ್ತ ಗಳಿಸದಂತೆ ತಡೆಯಿತು. ಉತ್ತಮ ಆರಂಭ ಮಾಡಿದ್ದ ಪಾಕಿಸ್ತಾನ ಎರಡನೇ ದಿನವಾದ ಶನಿವಾರ 274 ರನ್‌ಗಳಿಗೆ ಆಲೌಟ್ ಆಯಿತು.

ಸ್ಕೋರುಗಳು: ಮೊದಲ ಇನಿಂಗ್ಸ್: ಪಾಕಿಸ್ತಾನ: 85.1 ಓವರುಗಳಲ್ಲಿ 274 (ಸಯಿಮ್ ಅಯೂಬ್ 58, ಶಾನ್ ಮಸೂದ್ 57, ಮೊಹಮ್ಮದ್ ರಿಜ್ವಾನ್ 29, ಸಲ್ಮಾನ್ ಆಘಾ 54; ತಸ್ಕಿನ್ ಅಹ್ಮದ್ 57ಕ್ಕೆ3, ಮಹಿದಿ ಹಸನ್ ಮಿರಾಜ್ 61ಕ್ಕೆ5); ಬಾಂಗ್ಲಾದೇಶ: 2 ಓವರುಗಳಲ್ಲಿ ವಿಕೆಟ್ ನಷ್ಟವಿಲ್ಲದೇ 10.

ಟಿಟಿ: ಗೌರವ್, ತನಿಷ್ಕಾಗೆ ಕಿರೀಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೌರವ್ ಗೌಡ ಮತ್ತು ತನಿಷ್ಕಾ ಕಪಿಲ್ ಕಾಲಭೈರವ್ ಅವರು ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕರ ಮತ್ತು ಬಾಲಕಿಯರ 15 ವರ್ಷ ದೊಳಗಿನವರ ಸಿಂಗಲ್ಸ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು.

ಶನಿವಾರ ಬೆಳಗಾವಿಯಲ್ಲಿ ನಡೆದ ಬಾಲಕರ ವಿಭಾಗದ ಫೈನಲ್‌ನಲ್ಲಿ ಗೌರವ್ 11-6, 6-11, 11-8, 11-2ರಲ್ಲಿ ರೇಯಾನ್ಶ್ ಜಲನ್‌ರನ್ನು ಸೋಲಿಸಿದರು.

ತನಿಷ್ಕಾ ಅವರು 13-11, 11-6, 11-5ರಲ್ಲಿ ಹಿಯಾ ಸಿಂಗ್ ಅವರನ್ನು ಸೋಲಿಸಿ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ನೊವಾಕ್ ಜೊಕೊವಿಚ್ ಕನಸು ಭಗ್ನ

ಅಮೆರಿಕ ಓಪನ್: ಸರ್ಬಿಯಾ ಆಟಗಾರನಿಗೆ ಸೋಲುಣಿಸಿದ ಪಾಪಿರಿನ್


ನ್ಯೂಯಾರ್ಕ್ (ಎಪಿ): ದಾಖಲೆಯ 25ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆಲ್ಲುವ ನೊವಾಕ್ ಜೊಕೊವಿಚ್ ಕನಸು ಶುಕ್ರವಾರ ರಾತ್ರಿ ನುಚ್ಚುನೂರಾಯಿತು. ಎರಡನೇ ಶ್ರೇಯಾಂಕದ ಜೊಕೊವಿಚ್, ಅಮೆರಿಕ ಓಪನ್ ಟೆನಿಸ್ ಟೂರ್ನಿಯ ಮೂರನೇ ಸುತ್ತಿನಲ್ಲಿ 28ನೇ ಶ್ರೇಯಾಂಕದ ಅಲೆಕ್ಸೈ ಪಾಪಿರಿನ್ ಎದುರು ಸೋಲನುಭವಿಸಿದರು.

ಫ್ಲಷಿಂಗ್ ಮಿಡೊದಲ್ಲಿ ಮೂರನೇ ಶ್ರೇಯಾಂಕದ ಕಾರ್ಲೋಸ್ ಅಲ್ಕರಾಜ್ (ಸ್ಪೇನ್) ಅವರು ಬೊಟಿಕ್ ಫನ್‌ಡ ಶಾನ್‌ಸೋಫ್ ಅವರೆದುರು ನೇರ ಸೆಟ್‌ಗಳ ಆಘಾತ ಅನುಭವಿಸಿದ ಮಾರನೇ ದಿನವೇ, ಇನ್ನೊಬ್ಬ ಸೂಪರ್‌ಸ್ಟಾರ್, ಹಾಲಿ ಚಾಂಪಿಯನ್ ಜೊಕೊವಿಚ್ ಕೂಡ ಟೂರ್ನಿಯಿಂದ ನಿರ್ಗಮಿಸಿದ್ದಾರೆ.

25 ವರ್ಷ ವಯಸ್ಸಿನ ಪಾಪಿರಿನ್ 6-4, 6-4, 2-6, 6-4 ರಿಂದ ಜಯಗಳಿಸಿದರು. ಆಸ್ಟ್ರೇಲಿಯಾದ ಈ ಆಟಗಾರ, 18 ವರ್ಷಗಳಲ್ಲೇ ಮೊದಲ ಬಾರಿ ಜೊಕೊವಿಚ್ ಅವರ ಅತಿ ವೇಗದ ನಿರ್ಗಮನಕ್ಕೆ ಕಾರಣರಾದರು. 2017ರಲ್ಲಿ ಸರ್ಬಿಯಾದ ಮಹಾನ್ ಆಟಗಾರ ಎರಡನೇ ಸುತ್ತಿನಲ್ಲಿ ಹೊರಬಿದ್ದಿದ್ದರು. ವಿಶೇಷವೆಂದರೆ ಆ ವರ್ಷವೂ ಜೊಕೊವಿಚ್ ಒಂದೂ ಗ್ರ್ಯಾನ್‌ಸ್ಲಾಮ್ ಗೆಲ್ಲಲು ಆಗಿರಲಿಲ್ಲ. ಪ್ಯಾರಿಸ್ ಒಲಿಂಪಿಕ್ಸ್ ಚಿನ್ನ ಗೆದ್ದುದೊಂದೇ ಅವರ ಪಾಲಿಗೆ ಈ ವರ್ಷದ ಮಹತ್ವದ ಪ್ರಶಸ್ತಿಯೆನಿಸಿತು.

37 ವರ್ಷ ವಯಸ್ಸಿನ ಜೊಕೊವಿಚ್ ಅವರು ಈ ಹಿಂದೆ ಮೂರು ಬಾರಿ– ಈ ವರ್ಷದ ಆಸ್ಟ್ರೇಲಿಯಾ ಓಪನ್ ಮತ್ತು ವಿಂಬಲ್ಡನ್ ಸೇರಿ– ಪಾಪಿರಿನ್ ಅವರನ್ನು ಮಣಿಸಿದ್ದರು.

ಆದರೆ ಶುಕ್ರವಾರದ ಪಂದ್ಯದಲ್ಲಿ ಅವರು ಸರ್ವ್‌ಗಳಲ್ಲೂ ವಿಫಲರಾದರು. ಟೆನಿಸ್ ಜೀವನದಲ್ಲೇ ಅತಿ ಹೆಚ್ಚು 14 ಡಬಲ್ ಫಾಲ್ಟ್‌ಗಳನ್ನು ಮಾಡಿದರು.



ಗೆಲುವಿನ ಕೇಕೆ... ಹಾಲಿ ಚಾಂಪಿಯನ್ ನೊವಾಕ್ ಜೊಕೊವಿಚ್ ವಿರುದ್ಧ ಶುಕ್ರವಾರ ರಾತ್ರಿ ಮೂರನೇ ಸುತ್ತಿನ ಪಂದ್ಯ ಗೆದ್ದ ಆಸ್ಟ್ರೇಲಿಯಾದ ಅಲೆಕ್ಸೈ ಪಾಪಿರಿನ್ ಅವರ ಸಂಭ್ರಮ....

ಮೊದಲ ಎರಡು ಸುತ್ತಿನ ಪಂದ್ಯ ಸೇರಿಸಿದರೆ ಅವರಿಂದ 32 ಡಬಲ್ ಫಾಲ್ಟ್‌ಗಳಾಗಿವೆ.ಜೊತೆಗೆ 49 ತಪ್ಪುಗಳಿಗೆ ಕಾರಣರಾದರು.

'ಇದು ನನ್ನ ಪಾಲಿನ ಅತ್ಯಂತ ಕೆಟ್ಟ ಆಟ' ಎಂದು ಜೊಕೊವಿಚ್ ಪ್ರತಿಕ್ರಿಯಿಸಿದರು. 'ಲಯ, ಸ್ಥಿರತೆ, ಸರ್ವ್, ಹೊಡೆತಗಳು– ಎಲ್ಲವೂ ಕೈಕೊಟ್ಟವು' ಎಂದು ಬೇಸರ ವ್ಯಕ್ತಪಡಿಸಿದರು.

ಪಾಪಿರಿನ್ ಮುಂದಿನ ಸುತ್ತಿನಲ್ಲಿ ಫ್ರಾನ್ಸೆಸ್ ಟಿಯಾಫೊ ಅವರನ್ನು ಎದುರಿಸಲಿದ್ದಾರೆ. ಅಮೆರಿಕದ ಟಿಯಾಫೊ, ಅರ್ಥರ್ ಆ್ಯಷ್ ಸ್ಟೇಡಿಯಂನಲ್ಲಿ ನಡೆದ ಪಂದ್ಯದಲ್ಲಿ 4-6, 7-5, 6-7 (5-7), 6-4, 6-3 ರಿಂದ ಸ್ವದೇಶದ ಬೆನ್ ಶೆಲ್ಟನ್ ಅವರನ್ನು ಮಣಿಸಿದರು.

ರುಬ್ಲೆವ್ ಮುನ್ನಡೆ: ವಿಶ್ವದ ಆರನೇ ಕ್ರಮಾಂಕದ ಆಟಗಾರ ಆ್ಯಂಡ್ರಿ ರುಬ್ಲೆವ್ ಮೂರನೇ ಸುತ್ತಿನಲ್ಲಿ ಝೆಕ್ ರಿಪಬ್ಲಿಕ್‌ನ ಜಿರಿ ಲೆಹೆಕಾ ಅವರನ್ನು 6-3, 7-5, 6-4 ರಿಂದ ಸೋಲಿಸಿದರು. ಎರಡು ಸೆಟ್‌ಗಳ ಹಿನ್ನಡೆಯಿಂದ ಚೇತರಿಸಿಕೊಂಡ ಎಂಟನೇ ಶ್ರೇಯಾಂಕದ ನಾರ್ವೆಯ ಆಟಗಾರ ಕ್ಯಾಸ್ಪರ್ ರುಡ್, 19 ವರ್ಷ ವಯಸ್ಸಿನ ಶಾಂಗ್ ಜುನ್‌ಚೆಂಗ್ (ಚೀನಾ) ಅವರನ್ನು 6-7 (1-7), 3-6, 6-0, 6-3, 6-1 ರಿಂದ ಸೋಲಿಸಿದರು.

ಪಾವೊಲಿನಿ ಮುನ್ನಡೆ: ಜಾಸ್ಮಿನ್ ಪಾವೊಲಿನಿ ಮಹಿಳೆಯರ ಸಿಂಗಲ್ಸ್ ನಾಲ್ಕನೇ ಸುತ್ತು ಪ್ರವೇಶಿಸಿದರು. ಶನಿವಾರ ನಡೆದ ಪಂದ್ಯದಲ್ಲಿ 30ನೇ ಶ್ರೇಯಾಂಕದ ಯೂಲಿಯಾ ಪುತಿಂಟ್ಸೆವಾ ವಿರುದ್ಧ 6-3, 6-4ರಿಂದ ಜಯ ಗಳಿಸಿದರು.

ಅಮೆರಿಕದ ಜೆಸ್ಸಿಕಾ ಪೆಗುಲಾ ಅವರು ಸ್ಪೇನ್‌ನ ಜೆಸ್ಸಿಕಾ ಬೌಜಾಸ್ ಮನ್ನೈರೊ ಅವರನ್ನು 6-3, 6-3 ಸೆಟ್‌ಗಳಿಂದ ಸೋಲಿಸಿದರು. ಬೌಜಾಸ್ ಮನ್ನೈರೊ ವಿಂಬಲ್ಡನ್ ಟೂರ್ನಿಯ ಮೊದಲ ಸುತ್ತಿನಲ್ಲಿ ಹಾಲಿ ಚಾಂಪಿಯನ್ ಮಾರ್ಕೆಟಾ ವೊಂಡ್ರೊಸೊವಾ ಅವರನ್ನು ಮಣಿಸುವ ಮೂಲಕ ಗಮನ ಸೆಳೆದಿದ್ದರು.

ಡಬಲ್ಸ್: ಭಾಂಬ್ರಿ, ಬೋಪಣ್ಣ ಮುನ್ನಡೆ

ನ್ಯೂಯಾರ್ಕ್: ಭಾರತದ ಯುಕಿ ಭಾಂಬ್ರಿ ಮತ್ತು ಅಲ್ಬನೊ ಒಲಿವೆಟ್ಟಿ ಅವರು ಅಮೆರಿಕ ಓಪನ್ ಪುರುಷರ ಡಬಲ್ಸ್ ಮೂರನೇ ಸುತ್ತಿಗೆ ಮುನ್ನಡೆದರು. ಶುಕ್ರವಾರ ನಡೆದ ಪಂದ್ಯದಲ್ಲಿ ಅವರು 15ನೇ ಶ್ರೇಯಾಂಕದ ಆಸ್ಟಿನ್ ಕ್ರಾಯಿಸೆಕ್– ಜೀನ್ ಜೂಲಿಯನ್ ರೋಜರ್ ಅವರನ್ನು ಮಣಿಸಿದರು.

ಭಾರತ– ಫ್ರಾನ್ಸ್ ಆಟಗಾರರ ಜೋಡಿ 2 ಗಂಟೆ 5 ನಿಮಿಷ ನಡೆದ ಪಂದ್ಯದಲ್ಲಿ 4–6, 6–3, 7–5 ರಿಂದ ಅಮೆರಿಕ–ಡಚ್ ಆಟಗಾರರ ಜೋಡಿಯನ್ನು ಸೋಲಿಸಿತು. 2014ರಲ್ಲಿ ಆಸ್ಟ್ರೇಲಿಯ ಓಪನ್ ಟೂರ್ನಿ ಮೂರನೇ ಸುತ್ತಿಗೆ ತಲುಪಿದ ನಂತರ ಭಾಂಬ್ರಿ ಇದೇ ಮೊದಲ ಬಾರಿ ಗ್ರ್ಯಾನ್‌ಸ್ಲಾಮ್ ಟೂರ್ನಿಯ ಮೂರನೇ ಸುತ್ತು ಪ್ರವೇಶಿಸಿದ್ದಾರೆ.

ಎರಡನೇ ಶ್ರೇಯಾಂಕದ ರೋಹನ್ ಬೋಪಣ್ಣ– ಮ್ಯಾಥ್ಯೂ ಎಬ್ಡೆನ್ ಜೋಡಿ 6–2, 6–4 ರಿಂದ ಸ್ಪೇನ್ ರಾಬರ್ಟೊ ಕಾರ್ಬಲೆಸ್ ಬೇನಾ– ಅರ್ಜೆಂಟೀನಾದ ಫ್ರೆಡೆರಿಕೊ ಕೊರಿಯಾ ಜೋಡಿಯನ್ನು ಸೋಲಿಸಿತು.

ಮಿಶ್ರ ಡಬಲ್ಸ್‌ನಲ್ಲಿ ಎಂಟನೇ ಶ್ರೇಯಾಂಕದ ಪಡೆದಿರುವ ಬೋಪಣ್ಣ, ಇಂಡೊನೇಷ್ಯಾದ ಅಲ್ದಿಲಾ ಸುಟ್‌ಜಿಯಾಡಿ ಜೊತೆಗೂಡಿ ಮೊದಲ ಸುತ್ತಿನಲ್ಲಿ 7–6 (7), 7–6 (5) ರಿಂದ ಜರ್ಮನಿಯ ಟಿಮ್ ಪುಯೆಟ್ಜ್– ನೆದರ್ಲೆಂಡ್ಸ್‌ನ ಡೆಮಿ ಶೂರ್ಸ್ ಜೋಡಿಯನ್ನು ಸೋಲಿಸಿತು.

ಆದರೆ ಎನ್.ಶ್ರೀರಾಮ್ ಬಾಲಾಜಿ ಮತ್ತು ಅವರ ಅರ್ಜೆಂಟೀನಾ ಜೊತೆಗಾರ ಗಿಡೊ ಅಂಡ್ರಿಯೋಝಿ ಪುರುಷರ ಡಬಲ್ಸ್‌ನಿಂದ ಹೊರಬಿದ್ದರು. ಇವರಿಬ್ಬರು 6–7 (4), 4–6 ರಿಂದ ನ್ಯೂಜಿಲೆಂಡ್‌ನ ಮೈಕೆಲ್ ವೀನಸ್– ಬ್ರಿಟನ್‌ನ ನೀಲ್ ಸ್ಕುಪ್‌ಸ್ಕಿ ಅವರನ್ನು ಮಣಿಸಿದರು.

ಮಹಾರಾಜ ಟ್ರೋಫಿ: ಫೈನಲ್‌ಗೆ ಮೈಸೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್.ಯು. ಕಾರ್ತಿಕ್ ಅವರ ಅರ್ಧಶತಕ ಹಾಗೂ ಕೆ.ಗೌತಮ್ ಅವರ ಉತ್ತಮ ಬೌಲಿಂಗ್ ನೆರವಿನಿಂದ ಬಲದಿಂದ ಮೈಸೂರು ವಾರಿಯರ್ಸ್ ತಂಡವು ಮಹಾರಾಜ ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್ ಪ್ರವೇಶ ಮಾಡಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಎರಡನೇ ಸೆಮಿಫೈನಲ್ ಪಂದ್ಯದಲ್ಲಿ ಮೈಸೂರು ವಾರಿಯರ್ಸ್ ತಂಡವು ಹುಬ್ಬಳ್ಳಿ ಟೈಗರ್ಸ್ ತಂಡದ ವಿರುದ್ಧ 9 ರನ್‌ಗಳ ಜಯ ಗಳಿಸಿತು. ಮೈಸೂರು ವಾರಿಯರ್ಸ್ ತಂಡ, ಭಾನುವಾರ ನಡೆಯುವ ಫೈನಲ್ ಪಂದ್ಯದಲ್ಲಿ ಬೆಂಗಳೂರು ಬ್ಲಾಸ್ಟರ್ಸ್ ತಂಡವನ್ನು ಎದುರಿಸಲಿದೆ.

ಹಾಲಿ ಚಾಂಪಿಯನ್ ಹುಬ್ಬಳ್ಳಿ ಟೈಗರ್ಸ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮೈಸೂರು ತಂಡವು ಆರಂಭಿಕ ಆಘಾತ ಅನುಭವಿಸಿತು. 14 ರನ್‌ಗಳಾಗುವಷ್ಟರಲ್ಲಿ ಕಾರ್ತಿಕ್ ಮತ್ತು ಕರುಣ್ ನಾಯರ್ ಅವರು ಔಟಾದರು.

ಈ ಹಂತದಲ್ಲಿ ಎಸ್.ಯು. ಕಾರ್ತಿಕ್ (53; 43ಎ, 4x4, 6x2) ಮತ್ತು ಶರತ್ ಶ್ರೀನಿವಾಸ್ (26; 26ಎ) 61 ರನ್ ಸೇರಿಸಿದರು. ಆದರೆ ಕೆಳಕ್ರಮಾಂಕದಲ್ಲಿ ಮನೋಜ್ ಭಾಂಡಗೆ, ಹರ್ಷಿಲ್ ಧಮಾನಿ ಮತ್ತು ವಿದ್ಯಾಧರ್ ಪಾಟೀಲ (11 ರನ್) ಅವರು ಕಾಣಿಕೆ ನೀಡಿದರು. ಮೈಸೂರು ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 177 ರನ್ ಗಳಿಸಿತು.

ಗೆಲುವಿನ ಗುರಿ ಬೆನ್ನತ್ತಿದ ಹುಬ್ಬಳ್ಳಿ ಟೈಗರ್ಸ್ ತಂಡವು ಎದುರಾಳಿ ತಂಡದ ಬಿಗುವಿನ ದಾಳಿಗೆ ತಕ್ಕ ಉತ್ತರ ನೀಡಲಿಲ್ಲ. ಆರಂಭಿಕ ಆಟಗಾರ ತಿಪ್ಪಾರೆಡ್ಡಿ (33) ಹೊರತಾಗಿ ಇತರ ಬ್ಯಾಟರ್‌ಗಳಾದ ಮೊಹಮ್ಮದ್ ತಾಹಾ (8), ಕೃಷ್ಣನ್ ಶ್ರೀಜಿತ್ (20), ಅನೀಶ್ವರ್ ಗೌತಮ್ (6), ಮನೀಶ್ ಪಾಂಡೆ (6) ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ನಿಲ್ಲಲಿಲ್ಲ. ಮೂರು ವಿಕೆಟ್ ಕೆಡವಿದ ಕೆ.ಗೌತಮ್ ಹುಬ್ಬಳ್ಳಿ ತಂಡವನ್ನು ಕಾಡಿದರು.

ಆರನೇ ವಿಕೆಟ್ ಜೊತೆಯಾದ ಕಾರ್ತಿಕೇಯ ಕೆ.ಪಿ. (61) ಮತ್ತು ಮನ್ವಂತ್ ಕುಮಾರ್ (21) ಅವರ ಹೋರಾಟ ಫಲ ನೀಡಲಿಲ್ಲ. 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 168 ರನ್ ಗಳಿಸಲಷ್ಟೆ ಶಕ್ತವಾಯಿತು.

ಸಂಕ್ಷಿಪ್ತ ಸ್ಕೋರು: 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 177 (ಎಸ್.ಯು. ಕಾರ್ತಿಕ್ 53, ಶರತ್ ಶ್ರೀನಿವಾಸ್ 26, ಸುಮಿತ್ ಕುಮಾರ್ 18, ಮನೋಜ್ ಭಾಂಡಗೆ 26, ಹರ್ಷಿಲ್ ಧಮಾನಿ 14, ಎಲ್.ಆರ್. ಕುಮಾರ್ 37ಕ್ಕೆ3, ವಿದ್ವತ್ ಕಾವೇರಪ್ಪ 40ಕ್ಕೆ2)

ಹುಬ್ಬಳ್ಳಿ ಟೈಗರ್ಸ್: 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 168 (ಕಾರ್ತಿಕೇಯ ಕೆ.ಪಿ. 61, ತಿಪ್ಪಾರೆಡ್ಡಿ 33, ಮನ್ವಂತ್ ಕುಮಾರ್ 21, ಕೆ.ಗೌತಮ್ 29ಕ್ಕೆ3,)

ಫಲಿತಾಂಶ: ಮೈಸೂರು ವಾರಿಯರ್ಸ್‌ಗೆ 9 ರನ್‌ಗಳ ಜಯ. ಪಂದ್ಯದ ಆಟಗಾರ: ಕೆ.ಗೌತಮ್



ಟ್ರೋಫಿಯೊಂದಿಗೆ ಸಂಭ್ರಮಿಸುತ್ತಿರುವ ನಾರ್ತ್ ಈಸ್ಟ್ ಯುನೈಟೆಡ್ ತಂಡದ ಆಟಗಾರರು ಪಿಟಿಐ ಚಿತ್ರ

ಡುರಾಂಡ್ ಕಪ್ ಫುಟ್‌ಬಾಲ್: ನಾರ್ತ್‌ಈಸ್ಟ್‌ಗೆ ಪ್ರಶಸ್ತಿ

ಕೋಲ್ಕತ್ತ (ಪಿಟಿಐ): ಟೈಬ್ರೇಕರ್‌ನಲ್ಲಿ ಗೋಲ್‌ಕೀಪರ್ ಗುರ್ಮೀತ್ ಸಿಂಗ್ ಅವರ ಅಮೋಘ ಪ್ರದರ್ಶನದಿಂದ ನಾರ್ತ್ ಈಸ್ಟ್ ಯುನೈಟೆಡ್ ತಂಡ, ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಗೆಲ್ಲುವ ನೆಚ್ಚಿನ ತಂಡವಾಗಿದ್ದ ಮೋಹನ್ ಬಾಗನ್ ತಂಡವನ್ನು ಶನಿವಾರ ಟೈಬ್ರೇಕರ್‌ನಲ್ಲಿ ಸೋಲಿಸಿ ಮೊದಲ ಬಾರಿ ಪ್ರಶಸ್ತಿ ಗೆದ್ದುಕೊಂಡಿತು.

ನಿಗದಿ ಅವಧಿಯ ಆಟ ಮುಗಿದಾಗ ಸ್ಕೋರ್ 2–2 ಸಮನಾಗಿತ್ತು. ಟೈಬ್ರೇಕರ್‌ನಲ್ಲಿ, 24 ವರ್ಷ ವಯಸ್ಸಿನ ಗುರ್ಮೀತ್ ಅವರ ಕೆಲವು ತಡೆಗಳಿಂದ ನಾರ್ತ್‌ಈಸ್ಟ್ ತಂಡ 4–3 ಗೋಲುಗಳಿಂದ ಜಯಗಳಿಸಿತು.ಬಾಗನ್ ತಂಡದ ಲಿಸ್ಟನ್ ಕೊಲಾಕೊ, ನಾಯಕ ಸುಭಾಸಿಶ್ ಬೋಸ್ ಅವರ ಗೋಲು ಯತ್ನಗಳನ್ನು ಗುರ್ಮೀತ್ ತಡೆದರು. ಗಿಲೆರ್ಮೊ ಫೆರ್ನಾಂಡಿಸ್, ನಾಯಕ ಮಿಗೆಲ್ ಝಬಾಕೊ ಟೋಮ್, ಪಾರ್ಥಿವ್ ಗೊಗೊಯಿ ಮತ್ತು ಅಲಾದ್ದೀನ್ ಅಜರೇಯಿ ಅವರು ನಾರ್ತ್‌ಈಸ್ಟ್ ಪರ ಚೆಂಡನ್ನು ಗುರಿತಲುಪಿಸಿದರು.

ಜೇಸನ್ ಕಮಿಂಗ್ಸ್, ಮನ್ವೀರ್ ಸಿಂಗ್ ಮತ್ತು ದಿಮಿತ್ರಿ ಪೆಟ್ರಾಟೊಸ್ ಬಾಗನ್ ಪರ ಯಶ ಗಳಿಸಿದರು.

ರಾಷ್ಟ್ರೀಯ ಓಪನ್ ಅಥ್ಲೆಟಿಕ್ಸ್: ಒಲಿಂಪಿಯನ್ ಅನುರಾಣಿಗೆ ಜಾವೆಲಿನ್ ಚಿನ್ನ

ಬೆಳ್ಳಿ ಪದಕ ಗೆದ್ದ ಕರ್ನಾಟಕದ ಸ್ನೇಹಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಎಸ್.ಎಸ್.ಸ್ನೇಹಾ ಅವರು ಮಹಿಳೆಯರ 100 ಮೀಟರ್ಸ್ ಓಟದ ಸ್ಪರ್ಧೆಯಲ್ಲಿ ಅತ್ಯಲ್ಪ ಅಂತರದಲ್ಲಿ ಚಿನ್ನದ ಪದಕ ತಪ್ಪಿಸಿಕೊಂಡರು. ಫೋಟೊ ಫಿನಿಷ್‌ನಲ್ಲಿ ಬೆಳ್ಳಿ ಪದಕ ಪಡೆದರು.

ಕಂಠೀರವ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಓಪನ್ ಅಥ್ಲೆಟಿಕ್ಸ್‌ನಲ್ಲಿ ರಾಜಸ್ಥಾನದ ನಿತ್ಯಾ ಗಂಧೆ ಚಿನ್ನದ ಪದಕ ಜಯಿಸಿದರು. ಆದರೆ ನಿತ್ಯಾ ಅವರಿಗಿಂತ ಸ್ನೇಹಾ 0.0002 ಸೆಕೆಂಡು ತಡವಾಗಿ ಗುರಿ ತಲುಪಿದರು.

ಮಹಿಳೆಯರ ಜಾವೆಲಿನ್ ಥ್ರೋನಲ್ಲಿ ಒಲಿಂಪಿಯನ್ ಅನುರಾಣಿ ಅವರು ಚಿನ್ನದ ಪದಕ ಜಯಿಸಿದರು.

ಪುರುಷರ ವಿಭಾಗದಲ್ಲಿ ಒಡಿಶಾದ ಲಾಲುಪ್ರಸಾದ್ ಬೋಯಿ ಅವರು ವೇಗದ ರಾಜನಾಗಿ ಹೊರಹೊಮ್ಮಿದರು.

ಫಲಿತಾಂಶಗಳು

ಪುರುಷರು: 100 ಮೀ ಓಟ: ಲಾಲುಪ್ರಸಾದ್ ಬೊಯಿ (ಒಡಿಶಾ; 10.46ಸೆಕೆಂಡು)–1, ಎಚ್. ಮಣಿಕಂಠ (ಎಸ್‌ಎಸ್‌ಸಿಬಿ; 10.48ಸೆ)–2, ಬಿ. ಶಿವಾ (ರಾಜಸ್ಥಾನ; 10.50ಸೆ)–3. 110 ಮೀ ಹರ್ಡಲ್ಸ್: ಆರ್. ಮಾನವ್ (ರಾಜಸ್ಥಾನ; 13.86ಸೆ)–1, ತೇಜಸ್ ಶಿರ್ಸೆ (ರಾಜಸ್ಥಾನ)–2, ರೋನಾಲ್ಡ್ (ಮಧ್ಯಪ್ರದೇಶ)–3. 400 ಮೀ: ತುಷಾರ್ ಮುನ್ನ (ದೆಹಲಿ; 45.97ಸೆ)–1, ಮೋಹಿತ್ ಕುಮಾರ್ (ಎಸ್‌ಎಸ್‌ಸಿಬಿ)–2, ವಿಕ್ರಾಂತ್ ಪಾಂಚಾಲ್ (ರಾಜಸ್ಥಾನ)–3. 1500 ಮೀ: ರಿತೇಶ್ ಒಹ್ರೆ (ರಾಜಸ್ಥಾನ; 3ನಿ,47.41ಸೆ)–1, ವಿಕಾಶ್ (ಹರಿಯಾಣ)–2, ರಾಹುಲ್ ಬಲೋದಾ (ಎಸ್‌ಎಸ್‌ಸಿಬಿ)–3. ಪೋಲ್‌ವಾಲ್ಟ್: ಎಂ. ಗೌತಮ್ (ತಮಿಳುನಾಡು; 5.05 ಮೀ) –1, ಅನ್ನು ಪಟೇಲ್ (ಮಧ್ಯಪ್ರದೇಶ)–2, ಕುಲದೀಪ್ ಕುಮಾರ್ (ಉತ್ತರಪ್ರದೇಶ)–3. ಡಿಸ್ಕಸ್ ಥ್ರೋ: ಗಗನದೀಪ್ ಸಿಂಗ್ (ಎಸ್‌ಎಸ್‌ಸಿಬಿ; 55.71 ಮೀ)–1, ಪ್ರವೀಣಕುಮಾರ್ ನೆಹ್ರಾ (ರಾಜಸ್ಥಾನ)–2, ನಿರ್ಭಯ್ ಸಿಂಗ್ (ಹರಿಯಾಣ)–3. ಡೆಕಾಥ್ಲಾನ್: ಸ್ಟಾಲಿನ್ ಜೋಸ್ (ಎಸ್‌ಎಸ್‌ಸಿಬಿ; 3335 ಪಾಯಿಂಟ್ಸ್)–1, ಯಮನ್ ದೀಪ್ (ರಾಜಸ್ಥಾನ)–2, ಕುಶಾಲ್ ಮೋಹಿತೆ (ಮಹಾರಾಷ್ಟ್ರ)–3.

ಮಹಿಳೆಯರು: 100 ಮೀ ಓಟ: ನಿತ್ಯಾ ಗಂಧೆ (ರಾಜಸ್ಥಾನ; 11.571ಸೆ)–1, ಎಸ್.ಎಸ್. ಸ್ನೇಹಾ (ಕರ್ನಾಟಕ; 11.573ಸೆ)–2, ಗಿರಿಧಾರಾಣಿ (ರಾಜಸ್ಥಾನ; 11.64ಸೆ)–3. 100 ಮೀ ಹರ್ಡಲ್ಸ್: ನಿತ್ಯಾ ರಾಮರಾಜ್ (ತಮಿಳುನಾಡು; 13.04ಸೆ)–1, ಪ್ರಗ್ಯಾನ್ ಪ್ರಶಾಂತ್ ಸಾಹು (ಒಡಿಶಾ)–2, ಕೆ. ನಂದಿನಿ (ತಮಿಳುನಾಡು)–3. 400 ಮೀ: ಐಶ್ವರ್ಯಾ ಮಿಶ್ರಾ (ಮಹಾರಾಷ್ಟರ; 53.77ಸೆ)–1, ದೇವಯಾನಿಬಾ ಝಾಲಾ (ಗುಜರಾತ್)–2, ಕುಂಜಾ ರಜಿತಾ (ಆಂಧ್ರಪ್ರದೇಶ)–3. 1500 ಮೀ: ಲಿಲಿ ದಾಸ್ (ರಾಜಸ್ಥಾನ; 4ನಿ,16.52ಸೆ)–1, ಕೆ.ಎಂ. ದೀಕ್ಷಾ (ಮಧ್ಯಪ್ರದೇಶ)–2, ಸುನಿತಾ (ರಾಜಸ್ಥಾನ)–3. ಜಾವೆಲಿನ್ ಥ್ರೋ: ಅನು ರಾಣಿ (ರಾಜಸ್ಥಾನ; 58.97 ಮಿ)–1, ಜ್ಯೋತಿ (ಹರಿಯಾಣ)–2, ದೀಪಿಕಾ (ಹರಿಯಾಣ)–3. ಹೈಜಂಪ್: ರೇಖಾ (ರಾಜಸ್ಥಾನ; 1.82ಮೀ)–1, ಕೆ. ಗೋಪಿಕಾ (ತಮಿಳುನಾಡು)–2, ಮನ್ನಿ (ಉತ್ತರಪ್ರದೇಶ)–3. ಶಾಟ್‌ಪಟ್: ಮನಪ್ರೀತ್ ಕೌರ್ (ರಾಜಸ್ಥಾನ; 16.42 ಮೀ)–1, ರೇಖಾ (ರಾಜಸ್ಥಾನ)–2, ಯೋಗಿತಾ (ರಾಜಸ್ಥಾನ)–3. 400 ಮೀ ಮಿಶ್ರ ರಿಲೆ: ಪಂಜಾಬ್ (3ನಿ,23.27ಸೆ)–1, ಕೇರಳ–2, ತಮಿಳುನಾಡು –3.



ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ನಡೆದ ರಾಷ್ಟ್ರೀಯ ಓಪನ್ ಅಥ್ಲೆಟಿಕ್ ಕೂಟದ ಮಹಿಳೆಯರ 100 ಮೀ ಓಟದಲ್ಲಿ ಚಿನ್ನ ಗೆದ್ದ ರೈಲ್ವೆ ಕ್ರೀಡಾ ಮಂಡಳಿಯ ನಿತ್ಯಾ ಗಂಧೆ (ಎಡದಿಂದ ಮೊದಲನೆಯವರು), ಬೆಳ್ಳಿ ಪಡೆದ ಎಸ್‌.ಎಸ್‌. ಸ್ನೇಹಾ (ಎರಡನೇಯವರು; ಕರ್ನಾಟಕ) ಮತ್ತು ಕಂಚು ಪಡೆದ ಗಿರಿಧಾರಾಣಿ (ಮೂರನೇಯವರು; ರೈಲ್ವೆ) –ಪ್ರಜಾವಾಣಿ ಚಿತ್ರ/ಎಸ್‌.ಕೆ. ದಿನೇಶ್

ಮಂಡ್ಯದಲ್ಲಿ ದಕ್ಷಿಣ ವಲಯ ಶಾರ್ಟ್‌ಕೋರ್ಸ್ ಈಜು

ಮುಂದುವರಿದ ಕರ್ನಾಟಕ ಪ್ರಾಬಲ್ಯ

ಮಂಡ್ಯ: ಕರ್ನಾಟಕದ ವಿಹಾನ್ ಚತುರ್ವೇದಿ, ಸಮನ್ವಿ ಇ.ಎಸ್. ಮತ್ತು ಶಮನಿ ಗೌಡ, ಮೊದಲ ದಕ್ಷಿಣ ವಲಯ ಶಾರ್ಟ್ ಕೋರ್ಸ್ ಈಜು ಚಾಂಪಿಯನ್‌ಷಿಪ್‌ನ ಎರಡನೇ ದಿನವಾದ ಶನಿವಾರ ಎರಡು ಸ್ಪರ್ಧೆಗಳಲ್ಲಿ ಚಿನ್ನ ಗೆದ್ದರು. ಕರ್ನಾಟಕದ ಈಜುಪಟುಗಳು ಎರಡನೇ ದಿನವೂ ಸಿಂಹಪಾಲು ಪದಕಗಳನ್ನು ಬಾಚಿಕೊಂಡರು.

ನಗರದ ಪಿಇಟಿ ಅಕ್ವೆಟಿಕ್ ಸೆಂಟರ್‌ನಲ್ಲಿ ಸಮನ್ವಿ ಬಾಲಕಿಯರ ಒಂದನೇ ಗುಂಪಿನಲ್ಲಿ 50 ಮೀ.ಬ್ರೆಸ್ಟ್ ಸ್ಟ್ರೋಕ್ ಮತ್ತು 400 ಮೀ. ಫ್ರೀಸ್ಟೈಲ್‌ನಲ್ಲಿ ಅಗ್ರಸ್ಥಾನ ಗಳಿಸಿದರು. ಶಮನಿ ಗೌಡ 100 ಮೀ. ಮತ್ತು 400 ಮೀ. ಫ್ರೀಸ್ಟೈಲ್ ಸ್ಪರ್ಧೆಗಳನ್ನು ಮೊದಲಿಗರಾಗಿ ಮುಗಿಸಿದರು.

ವಿಹಾನ್ ಚತುರ್ವೇದಿ ಬಾಲಕರ ಎರಡನೇ ಗುಂಪಿನ 200 ಮೀ. ಬ್ಯಾಕ್‌ಸ್ಟ್ರೋಕ್ ಮತ್ತು 400 ಮೀ. ಫ್ರೀಸ್ಟೈಲ್‌ನಲ್ಲಿ ಮೊದಲ ಸ್ಥಾನ ಪಡೆದರು.

ಚಿನ್ನ ಗೆದ್ದ ಕರ್ನಾಟಕದ ಈಜುಪಟುಗಳು: ಬಾಲಕರು: 1ನೇ ಗುಂಪು: 50 ಮೀ. ಬ್ರೆಸ್ಟ್ ಸ್ಟ್ರೋಕ್: ಆಯುಷ್ ಶಿವರಾಜು ಎಂ., ಕಾಲ: 31.12ಸೆ.; 100 ಮೀ. ಫ್ರೀಸ್ಟೈಲ್: ಕುಶಲ್ ಕೆ., ಕಾಲ: 54.46 ಸೆ.; 200 ಮೀ. ಬ್ಯಾಕ್‌ಸ್ಟ್ರೋಕ್: ಆರ್ಯನ್ ಪಾಟೀಲ್, ಕಾಲ: 2ನಿ.13.23 ಸೆ.; 200 ಮೀ. ಬಟರ್‌ಫ್ಲೈ: ರೇಣುಕಾಚಾರ್ಯ ಹೋದ್ಮನಿ, ಕಾಲ: 2ನಿ.11.66 ಸೆ.; 400 ಮೀ. ಫ್ರೀಸ್ಟೈಲ್: ಅನಿಕೇತ್ ಭಟ್ ಅಮಡಿ, ಕಾಲ: 4ನಿ.09.44 ಸೆ.; 4x100 ಮೀ. ಮೆಡ್ಲೆ ರಿಲೆ: ಕರ್ನಾಟಕ, ಕಾಲ: 4ನಿ.03.66 ಸೆ. ಎರಡನೇ ಗುಂಪು: 50 ಮೀ. ಬ್ರೆಸ್ಟ್‌ಸ್ಟ್ರೋಕ್: ರಿಯಾನ್ಶ್ ಕಾಂತಿ ವೈ, ಕಾಲ: 34.43 ಸೆ.; 100 ಮೀ. ಫ್ರೀಸ್ಟೈಲ್: ದಕ್ಷ್ ಪ್ರಸಾದ್, ಕಾಲ: 58.99 ಸೆ.; 200 ಮೀ. ಬ್ಯಾಕ್‌ಸ್ಟ್ರೋಕ್: ವಿಹಾನ್ ಚತುರ್ವೇದಿ, ಕಾಲ: 2ನಿ.21.52 ಸೆ.; 200 ಮೀ. ಬಟರ್‌ಫ್ಲೈ: ಜೇಡೆನ್ ಫೀಲಿಪ್ ಥಾಮಸ್, ಕಾಲ: 2ನಿ.19.46 ಸೆ.; 400 ಮೀ. ಫ್ರೀಸ್ಟೈಲ್: ವಿಹಾನ್ ಚತುರ್ವೇದಿ, ಕಾಲ: 4ನಿ.28.91 ಸೆ.; 4x100 ಮೀ. ಮೆಡ್ಲೆ ರಿಲೆ, ಕಾಲ: 4ನಿ.23.98 ಸೆ.

ಮೂರನೇ ಗುಂಪು: 50 ಮೀ. ಬ್ರೆಸ್ಟ್‌ಸ್ಟ್ರೋಕ್: ಸಮರ್ಥ ಭಾರದ್ವಾಜ್, ಕಾಲ: 42.08 ಸೆ.; 100 ಮೀ. ಫ್ರೀಸ್ಟೈಲ್: ಆರಿತ್ ಚಂದ್ರಶೇಖರ್, ಕಾಲ: 1ನಿ.08.36 ಸೆ.; 4x50 ಮೀ. ಮೆಡ್ಲೆ ರಿಲೆ: ಕರ್ನಾಟಕ, ಕಾಲ: 2ನಿ.27.86 ಸೆ.

ಬಾಲಕಿಯರು: ಒಂದನೇ ಗುಂಪು: 50 ಮೀ. ಬ್ರೆಸ್ಟ್‌ಸ್ಟ್ರೋಕ್: ಸಮನ್ವಿ ಇ.ಎಸ್, ಕಾಲ: 37.55 ಸೆ.; 100 ಮೀ. ಫ್ರೀಸ್ಟೈಲ್: ರಿಶಿಕಾ ಎಂ.ವಿ., ಕಾಲ: 1ನಿ.02.43ಸೆ.; 200 ಮೀ. ಬ್ಯಾಕ್‌ಸ್ಟ್ರೋಕ್: ಪ್ರಿಯಾನ್ಶಿ ಮಿಶ್ರಾ, ಕಾಲ: 2ನಿ.27.58ಸೆ.; 200 ಮೀ. ಬಟರ್‌ಫ್ಲೈ: ಸಾನ್ವಿ ಪ್ರವೀಣ್ ಪಾಟೀಲ, ಕಾಲ: 2ನಿ.45.88ಸೆ.; 400 ಮೀ. ಫ್ರೀಸ್ಟೈಲ್: ಸಮನ್ವಿ ಇ.ಎಸ್., ಕಾಲ: 4ನಿ.49.79 ಸೆ.; 4x100 ಮೀ. ಮೆಡ್ಲೆ ರಿಲೆ: ಕರ್ನಾಟಕ, ಕಾಲ: 4ನಿ.53.56 ಸೆ.

ಎರಡನೇ ಗುಂಪು: 50 ಮೀ. ಬ್ರೆಸ್ಟ್‌ಸ್ಟ್ರೋಕ್: ಗಗನಾ ಸಿ.ಎಂ., ಕಾಲ: 36.21 ಸೆ.; 100 ಮೀ. ಫ್ರೀಸ್ಟೈಲ್: ಶಮನಿ ಗೌಡ, ಕಾಲ: 1ನಿ.02.19 ಸೆ.; 200 ಮೀ. ಬ್ಯಾಕ್‌ಸ್ಟ್ರೋಕ್: ಸುಮೇಧಾ ವಿ., ಕಾಲ: 2ನಿ.32.66 ಸೆ.; 400 ಮೀ. ಫ್ರೀಸ್ಟೈಲ್: ಶಮನಿ ಗೌಡ ಎಚ್., ಕಾಲ: 4ನಿ.52.88 ಸೆ.; 4x100 ಮೀ. ಮೆಡ್ಲೆ ರಿಲೆ: ಕರ್ನಾಟಕ, ಕಾಲ: 4ನಿ.52.16 ಸೆ.

ಮೂರನೇ ಗುಂಪು: 50 ಮೀ. ಬ್ರೆಸ್ಟ್‌ಸ್ಟ್ರೋಕ್: ಧೃತಿ ಅಭಿಲಾಷ್, ಕಾಲ: 41.21ಸೆ.; 100 ಮೀ. ಫ್ರೀಸ್ಟೈಲ್: ಶರಣ್ಯಾ ಪಿ.ವಿ., ಕಾಲ: 1ನಿ.12.01 ಸೆ.; 400 ಮೀ. ಫ್ರೀಸ್ಟೈಲ್: ಜ್ಞಾಮಾ ಸಿಸೋಡಿಯಾ, ಕಾಲ: 5ನಿ.27.24 ಸೆ.; 4x100 ಮೀ. ಮೆಡ್ಲೆ ರಿಲೆ: ಕರ್ನಾಟಕ, ಕಾಲ: 2ನಿ.30.95 ಸೆ.